ಶ್ರೀ ಮೈಕೇಲ್ ಫರ್ನಾಂಡೀಸ್.—ನಾನು ಮೊನ್ನೆ ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸನ್ನು ಕಳುಹಿಸಿಕೊಟ್ಟಿದ್ದೆ.

ಅಧ್ಯಕ್ಷರು.—ಅದನ್ನು ನಾನು ನೋಡುತ್ತೇನೆ.

ಶ್ರೀ ಪಿ. ರಾಮದೇವ್.—ಇವತ್ತಿನಿಂದ ಬೇಡಿಕೆಗಳ ಮೇಲೆ ಚರ್ಚೆ ಪ್ರಾರಂಭವಾಗುತ್ತದೆ. ಗೋಕಾಕ್ ವರದಿ ಬಗ್ಗೆ.........

ಅಧ್ಯಕ್ಷರು.—ಈ ರೀತಿ ಅಡ್ಡಿ ಮಾಡುತ್ತಾ ಹೋದರೆ ತಡವಾಗುತ್ತದೆ. ತಮಗೆ ಗೊತ್ತಿರುವ ಹಾಗೆ ನಿನ್ನೆ ತೆಗೆದುಕೊಳ್ಳುತ್ತೇನೆಂದು ಹೇಳಿದೆ. ಅದಕ್ಕಾಗಿ ನಿನ್ನೆ ಬಿಡುವಾಗಿತ್ತು. ತಾವೇ ನ್ಯಾಷನಲ್ ಎಕ್ಸಿಕ್ಯೂಟೀವ್ ಕಮಿಟಿ ಮೀಟಿಂಗಿಗೆ ಹೋಗಬೇಕಾಗಿದೆ, ಮುಂದಕ್ಕೆ ಹಾಕಿ ಎಂದು ಹೇಳಿದ್ದರಿಂದ ಆ ಚರ್ಚೆಯನ್ನು ಮುಂದಕ್ಕೆ ಹಾಕಿ ಬೇರೆ ದಿವಸವನ್ನು ಗೊತ್ತು ಮಾಡುತ್ತಿದ್ದೇವೆ. ಹೀಗಿರುವಾಗ, ನೀವು ಮತ್ತೆ ಅದೇ ಪ್ರಶ್ನೆ ಎತ್ತಿದರೆ ಹೇಗೆ? ನಿಮ್ಮ ಮಾತಿಗೆ ಮನ್ನಣೆ ಕೊಟ್ಟಿದ್ದೇನೆ. ಈ ವಾರದಲ್ಲಿ ಯಾವುದಾದರೂ ಒಂದು ದಿವಸ ತೆಗೆದುಕೊಳ್ಳುತ್ತೇನೆ. ಸರ್ಕಾರ ಕೂಡ ನಿನ್ನೆ ತೆಗೆದುಕೊಳ್ಳುವ ಬಗ್ಗೆ ಒಪ್ಪಿತ್ತು. ತಮ್ಮ ಅನುಕೂಲತೆಗೋಸ್ಕರ ಮುಂದೆ ಹಾಕುವ ಪರಿಸ್ಥಿತಿ ಬಂತು.

ಶ್ರೀ ಕೆ. ರಾಮಭಟ್.—ನಾನು ವೆಟರಿನರಿ ಡಾಕ್ಟರ್ಸ್ ಬಗ್ಗೆ ಒಂದು ಷಾರ್ಟ್ ನೋಟೀಸ್ ಕೊಟ್ಟಿದ್ದೆ.

ಅಧ್ಯಕ್ಷರು.—ಷಾರ್ಟ್ ನೋಟೀಸು, ಲಾಂಗ್ ನೋಟೀಸು ಎಲ್ಲ ನಂತರ. ಈಗ ಬೇಡಿಕೆಗಳು ಮೂವ್ ಆಗಬೇಕಾಗಿದೆ.

IV. FINANCIAL BUSINESS

discussion and voting of demands for grants for the year 1982-83

MR. SPEAKER.—Hon'ble Minister for Revenue to move Demand Nos. 48, 4', 50 and 51.

DEMAND NO. 8—LAND REVENUE, ETC.

SRI M. VEERAPPA MOILY.—Mr. Speaker, Sir, on behalf of Hon'ble Revenue Minister I beg to move:

> ' That a sum not exceeding Rs. 18,36,76,000 on Revenue Account and Rs. 23, 14,00,000 on Capital Account inclusive of the sum granted 'on account' be granted to the Government to defray the Charges which will come in course of payment during the financial year ending 1st day of March 1983 in respect of Land Revenue etc".

DEMAND NO. 49—STAMPS AND REGISTRATION

> "That a sum not exceeding Rs. 2,31,00,000 on Revenue Account inclusive of the sum granted 'on account' begranted to the Government to defray the charges which will come in course of payment during the finacial year ending 31st day of March 1983 in respect of "Stamps and Registration".

DEMAND NO. 50. RELIEF ON ACCOUNT OF NATURAL CALAMITIES

"That a sum not exceeding Rs. 3,00,00,000 on Revenue Account and Rs. 1 00,000 on Capital Account inclusive of the sum granted 'on account' be granted to the Government to defray the charges which will come in course of payment during the financial year ending the financial year ending 31st day of March 1983 in respect of "Relief on account of Natural Calamities".

DEMAND NO. 52. REHABILITATION SCHEMES

"That a sum not exceeding Rs. 30,04,000 on Revenue Account and Rs. 14,00,000 on Capital Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1983 in respect of 'Rehabilitation Schemes'.

DEMAND NO. 52—RELIGIOUS AND CHARITABLE INSTITUTIONS, ETC..

SRI SUDHEENDRA RAO KASBE (Minister of State for Marketing and Muzrai).—Mr. Speaker, Sir, on the recommendation of the Governor, I beg to move:

"That a sum not exceeding Rs. 3,25,75.000 on Revenue Account inclusive of the sum granted 'on account' be granted to the Government to defrey the charges which will come in course of payment during the financial year ending 31st day of March 1983 in respect of "Religious and Charitable Institution etc".

The Question was Proposed

MR. SPEAKER.—Hon'ble Member Sri B.V. Kakkilayya to initiate discussion on the Demands moved.

ಶ್ರೀ ಬಿ.ವಿ. ಕಕ್ಕಿಲಾಯ (ವಿಠಲ).—ಮಾನ್ಯ ಅಧ್ಯಕ್ಷರೇ, ಕಂದಾಯ ಮತ್ತು ಮುಜರಾಯಿ ಇಲಾಖೆಯ ಪರವಾಗಿ ಅನೇಕ ಬೇಡಿಕೆಗಳನ್ನು ಈ ಸದನದ ಮುಂದೆ ಸಚಿವದ್ವಯರು ಮಂಡಿಸಿದ್ದಾರೆ. ಮೊದಲನೆಯದಾಗಿ ಕಂದಾಯ ಇಲಾಖೆಯ ಬಗ್ಗೆ ಮಾತನಾಡುತ್ತಾ, ನೈಸರ್ಗಿಕ ಅನಾಹುತಗಳಿಗೆ ಈಡಾಗಿರತಕ್ಕವರಿಗೆ ಪರಿಹಾರ ಕೊಡತಕ್ಕ ವಿಚಾರದಲ್ಲಿ ಒಂದೆರಡು ಅಂಶಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

(ಉಪ ಸಭಾಧ್ಯಕ್ಷರು ಅಧ್ಯಕ್ಷರ ಪೀಠವನ್ನಲಂಕರಿಸಿದರು)

ಇದೇ ೧೦ನೇ ತಾರೀಖಿನ ದಿವಸ ಉಡುಪಿ ನಗರಸಭೆಯ ಪರಿಸರದಲ್ಲಿ ಆಕಸ್ಮಿಕವಾಗಿ ಭಾರೀ ಮಳೆ ಬಂದು ಸುಮಾರು ೨೦೦ ಮನೆಗಳು ಕೊಚ್ಚಿಕೊಂಡು ಹೋದವು ಎಂದು ಕೆಲವು ಸ್ಥಳೀಯ ಪತ್ರಿಕೆಗಳಲ್ಲಿ ವರದಿ

ಯಾಗಿದೆ. ನಾನೂ ಕೂಡ ಆ ಪ್ರದೇಶಕ್ಕೆ ಹೋಗಿದೆ. ನಾವು ವಿಚಾರಿಸಿ ತಿಳಿದುಕೊಂಡ ಮಟ್ಟಿಗೆ ಸುಮಾರು ೫೦೦ ಮನೆಗಳು ಕುಸಿದು ಬಿದ್ದಿವೆ. ೧೦೦೦ ಮನೆಗಳು ದುರಸ್ತಿ ಮಾಡುವುದಕ್ಕೆ ಕೂಲ ಸಾಧ್ಯವಾಗದ ಮಟಿಗೆ ಹಾನಿಗೀಡಾಗಿವೆ ಎಂದುದು ನಮ್ಮ ಗಮನಕ್ಕೆ ಬಂತು. ಸುಮಾರು ಶೇಕಡ ೨೫ರಷ್ಟು ಮಂದಿ ಮಕ್ಕಳು ಮತ್ತು ಮಹಿಳೆಯರು ಸೇರಿ ಮರಣ ಹೊಂದಿದ್ದಾರೆಂಬುದು ಕೂಡ ಪತ್ರಿಕೆಗಳಲ್ಲಿ ಬಂದಿದೆ. ಮೊನ್ನೆ, ಕೇಂದ್ರದ ಸಚಿವರು, ವಿತ್ತ ಮಂತ್ರಿಗಳು, ಕಂದಾಯ ಸಚಿವರು ಎಲ್ಲರೂ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿಕೊಂಡು ಬಂದಿದ್ದಾರೆ. ಈ ಸಂದರ್ಭದಲ್ಲಿ, ಒಂದು ಮಾತು ಹೇಳುವುದಾದರೆ, ಪತ್ರಿಕೆಯಲ್ಲಿ ಒಳ್ಳೆಯ ರೀತಿಯಲ್ಲಿ ಅದನ್ನು ಬರೆದಿದ್ದಾರೆ. 'ಮಾಯದ ಮಳೆ ಬಂತಯ್ಯ, ಬೆಳೆ ಬರುವಂಥದೆಲ್ಲ ಬಿತ್ತಯ್ಯ' ಎಂಬುದಾಗಿ ಸ್ಥಳೀಯ ಪತ್ರಿಕೆಯಲ್ಲಿ ಬರೆದಿದ್ದಾರೆ. ಸರ್ಕಾರದ ವಿತ್ತ ಸಚಿವರು ಪ್ರವಾಸ ಹಾಗೂ ಯುವಜನ ಸಚಿವರು ಮತ್ತು ಅಲ್ಲಿ ಇದ್ದಂತಹ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಎಲ್ಲರೂ ಹೋಗಿ ಕಷ್ಟಾರೆ ನೋಡಿದ್ದಾರೆ; ಅಲ್ಲದೆ ಆಶ್ವಾಸನೆಗಳನ್ನು ಕೂಡ ನೀಡಿದ್ದಾರೆ. ಅದರ ಬಗ್ಗೆ ಈಗ ಪ್ರಸ್ತಾಪಿಸಲಿಕ್ಕೆ ಹೋಗುವುದಿಲ್ಲ. ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾದರೆ, ಆ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾದರೆ, ಆ ಒಂದು ಅನಾಹುತ ಆಕಸ್ಮಿಕವಾದ ಮಳೆಯಿಂದ ಆಯಿತು ಎನ್ನುವ ರೀತಿಯಲ್ಲಿ ತಿಳಿದುಕೊಂಡು ಮಾನ್ಯ ಸಚಿವರು ತಮ್ಮ ಹೇಳಿಕೆಯಲ್ಲಿ ಹೇಳಿದ್ದಾರೆಂದು ನಾನು ಭಾವಿಸುವುದಿಲ್ಲ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಮಾನ್ಯವಾಗಿ ಏಪ್ರಿಲ್—ಮೇ ತಿಂಗಳಿನಲ್ಲಿ ಮಳೆ ಬರುತ್ತದೆ. ಮೇ ತಿಂಗಳ ಕೊನೆಗೆ ಮಳೆ ಆರಂಭವಾಗುತ್ತದೆ; ಜೂನ್ ೭ರಂದು ಮಾನ್ಸೂನ್ ಪ್ರಾರಂಭವಾಗುತ್ತದೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ.

೩–೩೦ ಪಿ. ಎಂ.

† ಈ ವರ್ಷ ಏನೋ ಆಕಸ್ಮಿಕವಾಗಿ ನಿರೀಕ್ಷೆ ಮಾಡಿದ್ದಕ್ಕಿಂತ ಮುಂಚಿತವಾಗಿ ದೊಡ್ಡ ಮಳೆ ಬಂತು ಎನ್ನುವುದು ನಿಜ. ಈ ಒಂದು ಅನಾಹುತ ಆಗದಿದ್ದರೂ ಸಹಾ ಇಂತಹ ಒಂದು ಅನಾಹುತ ಒಂದಲ್ಲಾ ಒಂದು ದಿನ ಉಡುಪಿ ನಗರದಲ್ಲಿ ಆಗುವಂತದ್ದೇ ಎಂಬುದಂತೂ ನಿಜ. ಅಂತಹ ಒಂದು ಪರಿಸ್ಥಿತಿ ಅಲ್ಲಿ ಇದೆ. ಕೆಲವು ವರ್ಷಗಳ ಹಿಂದೆ ನಡೆದ ಒಂದು ಘಟನೆಯನ್ನು ಇಲ್ಲಿ ಸ್ಮರಿಸಿಕೊಳ್ಳಬೇಕಾಗುತ್ತದೆ. ಮಂಗಳೂರು ಶಹರಿನ ಒಳಗೆ ಕೂಡಿಹಳ್ಳ ಎಂಬ ಸ್ಥಳದಲ್ಲಿ ಒಂದು ಕಛೇರಿ ಇದೆ. ಈ ಪ್ರದೇಶ ತಗ್ಗು ಪ್ರದೇಶವಾಗಿದೆ. ಇಲ್ಲಿ ಸುಮಾರು ನೂರು ಮನೆಗಳು ಇವೆ. ಆ ಪ್ರದೇಶದಲ್ಲಿ ರಾತ್ರಿ ೮ ಗಂಟೆಗೆ ದೊಡ್ಡ ಮಳೆ ಬಂತು. ಕೇವಲ ಅರ್ಧ ಗಂಟೆಯ ಮಳೆ. ನೀರು ಹೆಚ್ಚಾಗಿ ಅಲ್ಲಿದ್ದ ನಾವು ಮಕ್ಕಳು, ಹೆಂಗಸರ ಸಮೇತ ಪಕ್ಕದ ರಸ್ತೆಯಲ್ಲಿ ಎತ್ತರದ ಪ್ರದೇಶದಲ್ಲಿ ನಿಂತು ಮಳೆ ನಿಲ್ಲುವುದನ್ನೇ ಕಾಯಬೇಕಾಗಿ ಬಂತು. ಮನೆಗಳು ಕುಸಿದು ಬಿದ್ದವು. ಇಲ್ಲಿಗೆ ಅರ್ಧ ಗಂಟೆ ಮಳೆಗೆ ಇಷ್ಟೊಂದು ನೀರು ಹೇಗೆ ಬಂತು ಎಂದು ನೋಡಲಾಗಿ, ಅಲ್ಲಿ ನೀರು ಹರಿಯಲು ಇದ್ದ ಒಂದೇ ಒಂದು ಚರಂಡಿ ಮಣ್ಣು ಹಾಗೂ ಕಸದಿಂದ ಕಟ್ಟಿಕೊಂಡಿತ್ತು. ಬಂದ ನೀರು ಹೊರಗೆ ಹೋಗಲು ಅವಕಾಶ ಇಲ್ಲದೇ ರಾತ್ರಿ ಹೊತ್ತು ಈ ಅನಾಹುತವಾಯಿತು. ಉಡುಪಿ ನಗರದ ವಿಚಾರ ತಮಗೆ ಗೊತ್ತಿದೆ. ಉಡುಪಿ ನಗರದ ಪಕ್ಕದಲ್ಲಿ ಹೊಳೆಯೇನೂ ಇಲ್ಲ. ಹೀಗಾದರೂ ನೀರು ಹೇಗೆ ಬಂತು? ಮಣಿಪಾಲದ ಗುಡ್ಡದಲ್ಲಿ ಬಿದ್ದ ಮಳೆ ನೀರು ಹರಿದು ಸಮುದ್ರಕ್ಕೆ ಹೋಗಬೇಕಾದರೆ ಸುಮಾರು ೫–೬ ಕಿ ಮೀ. ದೂರದಲ್ಲಿ ಎಂದರೆ ಉಡುಪಿ ಪಕ್ಕದಲ್ಲಿ ಇರುವ ಕಲ್ಸಂಕ ಹತ್ತಿರ ಸುಮಾರು ೬ ಅಡಿ ಅಗಲ ಇರುವ ಹಳ್ಳದಲ್ಲಿ ನೀರು ಹರಿದು ಹೋಗಬೇಕು. ಬಹುಶಃ ಉಡುಪಿ ಮಠ ಸ್ಥಾಪನೆಯಾದಾಗ ಇದನ್ನು ನಿರ್ಮಿಸಿದ್ದೇನೋ. ಇವತ್ತು ಉಡುಪಿ ನಗರ ಬಡಾವಣೆಯಾಗಿದೆ. ಜನಸಂಖ್ಯೆ ಹೆಚ್ಚಾಗಿದೆ. ದೊಡ್ಡದೊಡ್ಡ ಕಟ್ಟಡಗಳು ಬಂದಿವೆ. ಸುತ್ತಲೂ ಬೇಕಾದಷ್ಟು ಮನೆಗಳು ಬಂದಿವೆ. ಕಿರಿದಾದ ೪ ರಸ್ತೆಗಳು ಈ ಒಂದು ಸಂಕದ ಮೇಲೆ ಹೋಗುತ್ತವೆ. ಆ ಒಂದು ರಸ್ತೆ ಕೆಳಗೆ ನೀರು ಹೋಗುವ ಜಾಗದಲ್ಲಿ ನೀರು ಸರಾಗವಾಗಿ ಹೋಗಲು ದುರಸ್ತಿ ಕಾರ್ಯವನ್ನು ಮಾಡಿ ಎಷ್ಟು ವರ್ಷವಾಗಿದೆಯೆಂಬುದನ್ನು ವಿಚಾರ ಮಾಡಿ ನೋಡಬೇಕಾಗುತ್ತದೆ. ಉಡುಪಿ ಮುನಿಸಿಪಾಲಿಟಿಯಲ್ಲಿ ಕಳೆದ ೮ ವರ್ಷಗಳಿಂದ ಜನರಿಂದ ಆರಿಸಲ್ಪಟ್ಟ ಪ್ರತಿನಿಧಿಗಳು ಇಲ್ಲ. ಚುನಾಯಿತ ಪ್ರತಿನಿಧಿಗಳು ಇದ್ದಾಗ ಜನರ ಪ್ರತಿನಿಧಿಗಳು ಈ ದುರಸ್ತಿ ಕಾರ್ಯವನ್ನು ನೋಡಿಕೊಳ್ಳುತ್ತಿದ್ದರು. ಈಗ ಇರುವ ಆಡಳಿತಾಧಿಕಾರಿಗಳ ಆಡಳಿತದಲ್ಲಿ ಎಷ್ಟು ಸಾರಿ ಈ ನೀರು ಹೋಗುವ ಸ್ಥಳವನ್ನು ಶುಚಿಗೊಳಿಸಿದ್ದಾರೆ ಎಂಬುದನ್ನು ಸರ್ಕಾರ ತಿಳಿದುಕೊಳ್ಳಬೇಕು. ಈ ನೀರು ಹೋಗುವ ತೋಡಿಗೆ ೮ ಕಣ್ಣಿನ ವೆಂಟೆಡ್ ಡ್ಯಾಂ ಕಟ್ಟಿದ್ದಾರೆ, ಇದನ್ನು ಕಟ್ಟುವಾಗ ಲೋಕೋಪಯೋಗಿ ಇಲಾಖೆಯವರು ಇಲ್ಲಿ ಗರಿಷ್ಟ ನೀರು

ಮಳೆ ಬಂದರೆ ಎಷ್ಟು ಬರಬಹುದೆಂದು ಅಂದಾಜು ಮಾಡಿ, ಇದನ್ನು ಕಟ್ಟಿದ್ದಾರೆಯೋ? ಈ ನಗರದ ಮಧ್ಯ ಹೋಗುವ ನೀರು ನಗರದಿಂದ ದೂರದಲ್ಲಿ ಹರಿದು ಸಮುದ್ರ ಸೇರುವ ಬಗ್ಗೆ ಈ ಡ್ಯಾಮ್ ಕಟ್ಟುವಾಗ ಲೋಕೋಪಯೋಗಿ ಇಲಾಖೆಯವರು ಯೋಚನೆ ಮಾಡಿದ್ದಾರೆಯೋ? ಇಲ್ಲ. ಜೂನ್ ೧೦ನೇ ತಾರೀಖು ಮಳೆ ಬಂತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೇ ತಿಂಗಳ ಕೊನೆ ಹಾಗೂ ಜೂನ್ ಮೊದಲ ವಾರ ಎಂದರೆ ೭ನೇ ತಾರೀಖಿನವರೆಗೆ ಮಾನ್‌ಸೂನ್ ಇರುತ್ತದೆ. ಈ ಜಾಗದಲ್ಲಿ ಮಳೆಯಾಗುವ ಬಗ್ಗೆ ಮುನ್ಸೂಚನೆಯನ್ನೂ ಸಹಾ ಆಕಾಶವಾಣಿ ನಿಲಯದವರು ರೇಡಿಯೋ ಮುಖಾಂತರ ಪ್ರಸಾರ ಮಾಡಿದ್ದರು, ಈ ಮುನ್ಸೂಚನೆಯನ್ನು ಕೊಡುತ್ತಿರುವುದಕ್ಕೆ ಅವರನ್ನು ಅಭಿನಂದಿಸಬೇಕಾಗಿದೆ. ಈ ಸಲ ಮಾನ್ಸೂನ್ ಬ್ರೇಕ್ ಆಗಿದೆ, ಕರ್ನಾಟಕ ಕರಾವಳಿಯಲ್ಲಿ ಜೋರಾದ ಮಾರುತ ಬರುವ ಸಂಭವವಿದೆ, ಹಾಗೂ ಕರಾವಳಿಯಲ್ಲಿ ದೊಡ್ಡ ಮಳೆ ಬರುತ್ತದೆಂದೂ, ಮೀನುಗಾರರು ಸಮುದ್ರಕ್ಕೆ ಹೋಗಬಾರದೆಂದು ಪದೇ ಪದೇ ರೇಡಿಯೋದಲ್ಲಿ ಪ್ರಸಾರ ಬಿತ್ತರಗೊಂಡಿದೆ. ಆದರೂ ಕೂಡಾ ಲೋಕೋಪಯೋಗಿ ಇಲಾಖೆಯವರು ಈ ಡ್ಯಾಮನ್ನು ದುರಸ್ತು ಮಾಡದಿರುವುದಕ್ಕೆ ಕಾರಣವೇನು? ಈ ಬಗ್ಗೆ ವ್ಯವಸ್ಥೆ ಏಕೆ ಮಾಡಲಿಲ್ಲ? ಕೆಲವಾರು ದಿನಗಳ ಮುಂಚಿತವಾಗಿಯೇ ಮುನ್ಸೂಚನೆ ಗೊತ್ತಿದ್ದರೂ ಏಕೆ ಈ ಕೆಲಸ ಕೈಗೊಳ್ಳಲಿಲ್ಲ? ಕಣ್ಣು ಮುಚ್ಚಿಕೊಂಡು ಏಕೆ ಇದ್ದರು? ಶ್ರೀಮತಿ ಮನೋರಮಾ ಮಧ್ವರಾಜ್ ಅವರು ಆ ಸಮಯದಲ್ಲಿ ಅಲ್ಲಿ ಇದ್ದರು. [illegible] ಈ ಬಗ್ಗೆ ಸರ್ಕಾರದ ಪರವಾಗಿ ಅಧಿಕಾರಿಗಳ ಕಿವಿಹಿಂಡಬಹುದಾಗಿತ್ತಲ್ಲಾ? ಆ ಕೆಲಸವನ್ನು ಅವರು ಮಾಡಿಲ್ಲ. ಇದು ಅವರ ಬೇಜವಾಬ್ದಾರಿಯೆಂದು ನಾನು ಖಂಡಿತವಾಗಿ ಹೇಳಿದರೆ ಯಾರೂ ಅನ್ಯಥಾ ಭಾವಿಸಬಾರದು. ಸಮುದ್ರದ ಪಕ್ಕದಲ್ಲಿ ಕಲ್ಸಂಕದಿಂದ ಕಲ್ಮಾಡಿಯಲ್ಲಿ ಒಂದು ಅಣೆಕಟ್ಟನ್ನು ಕಟ್ಟಿದ್ದಾರೆ. ಅಲ್ಲಿಂದ ನೀರು ಸಮುದ್ರಕ್ಕೆ ಹೋಗಬೇಕು. ಇದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಾ? ಇಂತಹ ಅನಾಹುತಗಳಾದರೆ ಬಡವರು ಹೆಚ್ಚು ಸಂಖ್ಯೆಯಲ್ಲಿ ಸಾಯುತ್ತಾರೆ ನಿಮ್ಮ ಯೋಜನಾ ಇಲಾಖೆ ಲೋಕೋಪಯೋಗಿ ಇಲಾಖೆ ಕಲೆತು ಕೆಲಸ ಮಾಡಬೇಕಾಗುತ್ತದೆ. ಅಣೆಕಟ್ಟು ಕಟ್ಟಿರುವುದರಿಂದ ನೀರು ಹೊರಕ್ಕೆ ಹೋಗದೇ ರಾತ್ರಿಯಲ್ಲಿ ೮–೧೦ ಅಡಿಗಳವರೆಗೆ ಹರಿದು ಹೋಗಿದೆ. ಮನೆಯ ಮಣ್ಣು ಕುಸಿದು ಮನೆಯಲ್ಲಿ ಇದ್ದ ಜನ ಸತ್ತುಹೋದರು ಎನ್ನುವ ವಿಷಯ ವಿಶಾದಕರವಾದುದಾಗಿದೆ. ಉಡುಪಿ ನಗರದಲ್ಲಿ ಅನೇಕ ಜನ ಮುಹಡಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಅದರ ಪಕ್ಕದಲ್ಲಿಯೇ ಉಸುಬಿನಿಂದ ಮನೆಗಳನ್ನು ಕಟ್ಟಿ ಬಾಡಿಗೆಗೆ ಕೊಟ್ಟಿರುತ್ತಾರೆ. ಇಲ್ಲಿ ಬಾಡಿಗೆ ಮನೆಯಲ್ಲಿ ಇದ್ದವರೇ ಜಾಸ್ತಿ ಜನ ಸತ್ತಿರುವುದು ಶ್ರೀನಿವಾಸ ಶೆಟ್ಟಿಗಾರ ಎನ್ನುವವರು ತಮ್ಮ ತಂಗಿ, ತಮ್ಮ, ಹೆಂಡತಿ ಜೊತೆಯಲ್ಲಿ ಉಡುಪಿಗೆ ಬಂದು ತಂಗಿದ್ದರು. ಮನೆಯಲ್ಲಿ ಇವರೊಬ್ಬರೇ ಇದ್ದು ಬೇರೆಯವರೆಲ್ಲಾ ಹೊರಗೆ ಹೋಗಿದ್ದರು. ಶ್ರೀನಿವಾಸ ಶೆಟ್ಟಿಗಾರ ಎನ್ನುವವರು ಆ ರಾತ್ರಿಯಲ್ಲಿ ನೀರಿನಲ್ಲಿ ಮುಳುಗಿ ಸಾಯುತ್ತಿದ್ದ ಮಕ್ಕಳ ಜೀವವನ್ನು ಉಳಿಸಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಇಂತಹ ಮನೆಗಳು ಅಲ್ಲಿ ಕುಸಿದು ಬಿದ್ದಿವೆ, ತಾವು ಹೋಗಿ ನೋಡಿದರೆ ಗೊತ್ತಾಗುತ್ತದೆ. ಕುಸಿದು ಬಿದ್ದಿರತಕ್ಕಂಥ ಮನೆಗಳ ಕೆಳಗೆ ಕಲ್ಲಿನ ಅಡಿಪಾಯವೇ ಇಲ್ಲ. ನಮ್ಮ ಕಡೆ ಕುಂದ ಎಂದು ಹೇಳುತ್ತೇವೆ; ಕಂಬಗಳು ಇಲ್ಲ. ಹಸಿ ಮಣ್ಣು ಸಿಡಿದ ಕಟ್ಟಿ ಬಾಡಿಗೆ ಕೊಟ್ಟು ಬಾಡಿಗೆಯನ್ನು ವಸೂಲು ಮಾಡುತ್ತಿದ್ದರು. ಮುನಿಸಿಪಾಲಿಟಿಯಲ್ಲಿ ಮನೆಗಳನ್ನು ಕಟ್ಟುವುದಕ್ಕೆ ಲೈಸೆನ್ಸ್ ಕೊಡುವುದಕ್ಕೆ ಮುಂದೆ ನಕಾಶೆಯನ್ನು ನೋಡತಕ್ಕವರು ಇದ್ದಾರೆಯೇ? ಲೈಸೆನ್ಸ್ ಕೊಡುವವರು ಯಾರಿದ್ದಾರೆ? ಬೆಂಗಳೂರು ನಗರದಲ್ಲಿ ಮನೆಕಟ್ಟಬೇಕಾದರೆ? ಪ್ಲಾನ್ ತಯಾರು ಮಾಡಬೇಕಾದರೆ? ಅದನ್ನು ಅಂಗೀಕಾರ ಮಾಡಬೇಕು.

ಶ್ರೀ ಎಂ. ವೀರಪ್ಪಮೊಯ್ಲಿ.—ಎಷ್ಟೋ ವರ್ಷಗಳಿಂದ ಇದ್ದಂತ ಮನೆಗಳು ಚರಿತ್ರೆಯಲ್ಲಿ ಹುಡುಕಲಿಕ್ಕೆ ಆಗುವುದಿಲ್ಲ. ಜೌಗು ಪ್ರದೇಶದಲ್ಲಿದ್ದಂತ ಹಳೇ ಮನೆಗಳು ಸುಮಾರು ೧೦೦ ವರ್ಷಗಳ ಹಿಂದೆ ಕಟ್ಟಿದ್ದಂತ ಮನೆಗಳು ಹೋಗಿವೆ.

ಶ್ರೀ ಬಿ. ವಿ. ಕಕ್ಕಿಲಾಯ.—ಇತ್ತೀಚಿಗೆ ಕಟ್ಟಿದಂತ ಮನೆಗಳು ಕೆಲವು ಬಿದ್ದುಹೋಗಿವೆ. ದೊಡ್ಡ ಮನೆಗಳು ಕೂಡ ಬಿದ್ದುಹೋಗಿವೆ. ದೊಡ್ಡ ದೊಡ್ಡ ಮನೆಗಳನ್ನು ಕಟ್ಟಿದವರು ಯಾರು? ತಾರಸಿ ಮನೆಗಳನ್ನು ಕಟ್ಟಬೇಕಾದರೆ ಮುನಿಸಿಪಾಲಿಟಿ ಲೈಸೆನ್ಸ್ ಇಲ್ಲದೇ ಹೇಗೆ ಕಟ್ಟಿದರು? ಒಟ್ಟಿನಲ್ಲಿ ತಮ್ಮ ಗಮನಕ್ಕೆ ನಾನು ತರುವುದೇನೆಂದರೆ, ಉಡುಪಿ ಮುನಿಸಿಪಾಲಿಟಿಯ ವ್ಯಾಪ್ತಿಯಲ್ಲಿ ಜನನಿಬಿಡವಾದಂತ ಪ್ರದೇಶದಲ್ಲಿ ಸಾಧಾರಣವಾಗಿ ಇಂಥ ಘಟನೆ ಯಾವತ್ತೂ ಬಂದಿಲ್ಲ, ಬಂದಾಗ ತೀವ್ರವಾದ ಆಘಾತವಾಗುತ್ತದೆ. ಅದನ್ನು ನಿವಾರಣೆ ಮಾಡಬೇಕಾಗಿದ್ದರೆ [illegible]ನಿಂದಲೂ ಯೋಜನೆ ಮಾಡಿಕೊಂಡು ಬಂದಿದ್ದರೆ, ಖಂಡಿತವಾಗಿಯೂ ನಿವಾರಣೆ ಮಾಡಲಿಕ್ಕೆ ಸಾಧ್ಯವಿತ್ತು. ಇನ್ನೊಂದು ವಿಚಾರ ಮೂಡುನಿರು

ತೊರೆ ಪ್ರದೇಶದಲ್ಲಿ ಎದುರು ಪ್ರದೇಶದಲ್ಲಿರುವ ಮನೆಗಳು ಕುಸಿದುಬಿದ್ದು ಹೋಗಿವೆ. ಅಲ್ಲಿಂದ ಬರತಕ್ಕ ಚರಂಡಿ ಬಂದು ಕಳಸಂಕ ತೋಡಿಗೆ ಸೇರುತ್ತೆ. ಆ ಚರಂಡಿಯಲ್ಲಿ ಒಂದು ಆಳ ಎತ್ತರದ ಮ್ಯಾನ್ ಹೋಲ್ ಕಟ್ಟಿದ್ದಾರೆ. ನೀರು ಹೇಗೆ ಹೋಗಬೇಕು. ಅಕಸ್ಮಾತ್ ಮಳೆ ಬಂದರೆ ಜನಗಳು ಉಳಿದು ಕೊಳ್ಳುತ್ತಾರೆಯೇ ಎಂಬುದನ್ನು ಅಧಿಕಾರಿಗಳು ಯೋಚನೆ ಮಾಡಲಿಲ್ಲವೆ? ಇಷ್ಟು ಅಜಾಗರೂಕತೆ ಮಾಡಿದ್ದರಿಂದ ದೇವರಿಗೆ ಸಮಾಧಾನವಾಗಲಿಲ್ಲವೇನೋ, ಮಳೆ ಬಂದು ಜನಗಳು ಸತ್ತರು, ಅಧಿಕಾರಿಗಳು ಯಾರು ಸಾಯಲಿಲ್ಲ. ಒಟ್ಟು ಸಾರಾಂಶ ಪ್ರಕೃತಿ ವಿಕೋಪಕ್ಕೆ ಒಳಗಾದಂತವರಿಗೆ ಸೂಕ್ತ ರಕ್ಷಣೆ ಕಾರ್ಯಕ್ರಮಗಳನ್ನು ಕೈಗೊಳ್ಳುವ ವಾಗ್ದಾನ ಮಾಡಿದ್ದಾರೆ. ಸಾರ್ವಜನಿಕರು ಸಾಕಷ್ಟು ಸಹಾಯ ಮಾಡಲಿಕ್ಕೆ ಮುಂದೆ ಬಂದಿದ್ದಾರೆ. ಬ್ಯಾಂಕಿನವರು ಸಾಕಷ್ಟು ಸಹಾಯವನ್ನು ಕೊಟ್ಟಿದ್ದಾರೆ. ಕೇಂದ್ರ ಸರ್ಕಾರದವರನ್ನು ಕೇಳಿದ್ದಾರೆ, ಅವರು ಕೊಡುತ್ತಾರೆಂಬ ಭರವಸೆ ಇದೆ. ೧೯೭೪ರಲ್ಲಿ ಇದೇ ರೀತಿ ಪ್ರಕೃತಿ ವಿಕೋಪಕ್ಕೆ ಒಳಗಾದಾಗ ಒಂದೂವರೆ ಕೋಟಿ ರೂಪಾಯಿಗಳನ್ನು ಕೇಂದ್ರದವರು ಕೊಟ್ಟಿದ್ದರು ಆಗ ಸುಮಾರು ೬೦೦೦ ಮನೆಗಳನ್ನು ಕಟ್ಟಿಕೊಟ್ಟಿದ್ದಾರೆ. ನಗರ ಪ್ರದೇಶಗಳು ಇಂಥ ಘಟನೆಗಳು ನಡೆಯದಹಾಗೆ ವ್ಯವಸ್ಥೆ ಮಾಡಬೇಕು. ಮುಖ್ಯವಾಗಿ ಉಡುಪಿ ನಗರದಲ್ಲಿ ಪೆಂಟೆಡ್ ಡ್ಯಾಂ, ಕಲ್ಮಾಡಿ ಅಣೆಕಟ್ಟಿನ ಬಗ್ಗೆ, ಇರತಕ್ಕ ಚರಂಡಿಗಳನ್ನು ದುರಸ್ತಿ ಮಾಡುವುದರ ಬಗ್ಗೆ ಸ್ವಲ್ಪ ಪರಿಶೀಲನೆ ಮಾಡಿ, ನಗರದ ಜನತೆಗೆ ಅನುಕೂಲವಾಗುವ ಹಾಗೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ಇಂಥ ಅಜಾಗರೂಕತೆ ಆಗದ ಹಾಗೆ ನೋಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಈ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇದೇ ವರ್ಷದ ಆರಂಭದಲ್ಲಿ ಗೋಪಿನಾಥಂ ಕಟ್ಟೆ ಹೊಡೆದುಹೋಯಿತು, ಅದಕ್ಕೆ ನಾವು ಜವಾಬ್ದಾರರಲ್ಲ ಎಂದು ಅಧಿಕಾರಿಗಳು ಹೇಳಿದರು. ಸರ್ಕಾರ ಜವಾಬ್ದಾರಿ ಅಂದರೆ, ಸರ್ಕಾರ ಹೊಡೆದು ಹಾಕಿತು ಎಂದು ಭಾವಿಸಿಕೊಳ್ಳಬಾರದು. ಅನಿರೀಕ್ಷಿತವಾದಂತ ಭಾರಿ ಪ್ರಮಾಣದ ಮಳೆ ಬಂದು ಕಟ್ಟೆಹೊಡೆದು ಹೋಯಿತು ಎಂದು ಹೇಳಿದರು. ಅಲ್ಲಿಗೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಸದಸ್ಯರುಗಳು, ಇಲಾಖೆಯ ಅಧಿಕಾರಿಗಳೊಂದಿಗೆ ಭೇಟಿ ಕೊಟ್ಟಿದ್ದೆವು. ಸಮಿತಿಯವರು ವರದಿ ಕೊಟ್ಟಿದ್ದಾರೆ. ಅದಕ್ಕೆ ಒಂದು ಉಚ್ಚ ಸಮಿತಿಯನ್ನು ಕೂಡ ನೇಮಕ ಮಾಡಿದ್ದರು. ಅಕಸ್ಮಾತ್ ಮಳೆ ಬಂದು ಹೊಡೆದು ಹೋಗಿಲ್ಲ. ಸರ್ಕಾರದವರು ಕೊಟ್ಟಂತ ಹಣವನ್ನು ವೆಚ್ಚ ಮಾಡುವುದರಲ್ಲಿ ಸಾಮಗ್ರಿಗಳನ್ನು ಉಪಯೋಗ ಮಾಡುವುದರಲ್ಲಿ, ಯೋಜನೆಯನ್ನು ತಯಾರು ಮಾಡುವುದರಲ್ಲಿ ಎಲ್ಲ ಹಂತಗಳಲ್ಲಿ ದುರ್ವ್ಯವಹಾರ ನಡೆದುದರ, ಭ್ರಷ್ಟಾಚಾರ ನಡೆದುದರ ಪರಿಣಾಮ ೫೦–೬೦ ಜೀವಗಳು ಹೋಗಬೇಕಾಗಿ ಬಂತು. ಇವತ್ತು ಅವರಿಗೆ ಬೇರೆ ಕಡೆ ಸ್ಥಳ ಕೊಟ್ಟಿದ್ದಾರೆ, ಶ್ಲಾಘನೆ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ೨–೩ ಸಾರಿ ಹೋಗಿದ್ದಾರೆ. ಅವರು ಜೀವನಕೊಂದು ದಾರಿ ಮಾಡಿಕೊಟ್ಟಿದ್ದಾರೆ. ಆಗಬಾರದ್ದು ಆಗಿ ಹೋಯಿತು. ಇದಕ್ಕೆ ಜವಾಬ್ದಾರರು ಯಾರಾಗಿರುತ್ತಾರೆ, ಅಂಥ ಅಧಿಕಾರಿಗಳನ್ನು ಹಾಗೆ ಬಿಡುವುದಕ್ಕೆ ಆಗುವುದಿಲ್ಲ. ಅಂತಹವರ ಬಗ್ಗೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆಂದು ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ.

ಇನ್ನು ಕಂದಾಯ ಇಲಾಖೆಯ ಬಗ್ಗೆ, ಅದರ ಕಾರ್ಯನಿರ್ವಹಣೆಯ ಬಗ್ಗೆ ಸಂಘಟನೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ. ಕಂದಾಯ ಇಲಾಖೆ ಅಂದರೆ ಇಡೀ ಸರ್ಕಾರದ ಇಲಾಖೆಗಳಿಗೆ ದೊಡ್ಡ ಸೌದ ಇದ್ದ ಹಾಗೆ. ಈ ಸೌಧ ತಳಪಾಯ ಇದ್ದಹಾಗೆ, ಕಂದಾಯ ಇಲಾಖೆಯ ಅಧಿಕಾರಿಗಳು ಎಲ್ಲಾ ಇಲಾಖೆಗಳ ಕಾರ್ಯಭಾರವನ್ನು ಕೆಲವು ಸಂದರ್ಭಗಳಲ್ಲಿ ನಿರ್ವಹಿಸಬೇಕಾಗುತ್ತದೆ. ಆದ್ದರಿಂದ ಸರ್ಕಾರ ಎನ್ನುವಾಗ ಸಾಮಾನ್ಯ ಜನತೆ, ನಮ್ಮ ರಾಜ್ಯದ ನಮ್ಮ ದೇಶದ ಜನತೆಗೆ ಸರ್ಕಾರ ಕಣ್ಣಿಗೆ ಕಾಣುವುದು ಕಂದಾಯ ಇಲಾಖೆಯ ಮೂಲಕ ನೇರವಾಗಿ ಜನತೆಗೆ ಸಂಪರ್ಕ ಕಲ್ಪಿಸುವಂತ ಈ ಒಂದು ಇಲಾಖೆ, ಅಷ್ಟು ದಕ್ಷತೆಯಿಂದ ಸಾಮಾನ್ಯ ಜನತೆಯ ಸಮೀಪಕ್ಕೆ ಹೋಗಿ ಸಮಸ್ಯೆಗಳನ್ನು ಅರಿತು ಕೊಂಡು ಸಕಾಲದಲ್ಲಿ ಪರಿಹಾರ ಮಾಡುವುದಕ್ಕೆ ಪ್ರಯತ್ನ ಮಾಡುತ್ತದೆ, ಅಷ್ಟು ಸರ್ಕಾರಕ್ಕೆ ಶಕ್ತಿ ಬರುತ್ತದೆ. ಜೊತೆಗೆ ಸರ್ಕಾರದ ಎಲ್ಲಾ ಇಲಾಖೆಗಳು ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಸರ್ಕಾರಕ್ಕೆ ಒಳ್ಳೆಯ ಹೆಸರು ಕೂಡ ಬರುತ್ತದನ್ನುವುದು ನನ್ನ ಆಭಾವನೆ. ಇದನ್ನು ಮಾನ್ಯ ಸಚಿವರು ಕೂಡ ಅಲ್ಲಗಳೆಯುವುಲ್ಲವೆಂದು ಭಾವಿಸುತ್ತೇನೆ. ಒರಿಸ್ಸಾ ಒಂದು ರಾಜ್ಯವನ್ನು ಬಿಟ್ಟರೆ, ಯು.ಪಿ. ಬಿಹಾರ ನನಗೆ ಪರಿಚಯವಿಲ್ಲ. ಕಂದಾಯ ಇಲಾಖೆಯ ಸ್ಟ್ರಕ್ಚರ್ ಏನಿದೆ, ಉತ್ತಮವಾಗಿದೆಯೆಂದು ಹೇಳಬಹುದು. ಅನೇಕ ರಾಜ್ಯಗಳ ಕಾರ್ಯನಿರ್ವಹಣೆಯ ಬಗ್ಗ ಕಂದಾಯ

ಇಲಾಖೆ ವ್ಯವಸ್ಥೆ ಏನಿದೆ, ಅದಕ್ಕಿಂತ ನಾವು ಹಿಂದೆ ಇದ್ದೇವೆಂದು ಹೇಳಬೇಕಾಗುತ್ತದೆ. ಹಿಂದೆ ಕಂದಾಯ ಇಲಾಖೆಯಲ್ಲಿ ಪಟೇಲರೂ ಶ್ಯಾನುಭೋಗರು ಎಂದು ಇದ್ದರು. ಪಟೇಲರು ಮತ್ತು ಶ್ಯಾನುಭೋಗರು ಆಜನ್ಮವಾಗಿ ಬಂದವರು ಎಂದು ಎಲ್ಲಾ ರಾಜ್ಯಗಳಲ್ಲಿಯೂ ಪರಿಗಣಿಸಿದ್ದರು. ಪ್ರಜಾ ಪ್ರಭುತ್ವ ಸಂಪ್ರದಾಯದಲ್ಲಿ ಮುಂದುವರೆಯುವಾಗ ಇವರನ್ನು ಮುಂದುವರಿಸಿಕೊಂಡು ಹೋಗುವುದು ಬೇಡ, ಇವರಿಗೆ ಕೆಲಸ ಕೊಡುವುದು ಸರಿಯಾದುದಲ್ಲ ಎಂದು ತೀರ್ಮಾನ ಮಾಡಲಾಯಿತು. ಆದರೆ, ಬೇರೆ ರಾಜ್ಯಗಳಲ್ಲಿ ಯಾವ ರೀತಿ ಮಾಡಿದ್ದಾರೆ. ಉದಹಾರಣೆಗೆ ಕೇರಳ ರಾಜ್ಯದಲ್ಲಿ ಇವರಿಗೆ ಎಸ್.ಎಸ್. ಎಲ್.ಸಿ ವರೆಗೆ ಶಿಕ್ಷಣ ಇರಬೇಕು. ಒಬ್ಬ ಸರ್ಕಾರಿ ನೌಕರನಿಗೆ ಯಾವ ಒಂದು ಆಸೆ ಆಕಾಂಕ್ಷೆಗಳಿಗೆ ಒಳ ಗಾಗದಂತೆ ಸಂಬಳವನ್ನು ನಿಗದಿ ಮಾಡಿದ್ದಾರೋ ಅದೇ ರೀತಿ ಮಾಡಿದ್ದಾರೆ. ಇವರನ್ನು ಸ್ಥಳದಿಂದ ಸ್ಥಳಕ್ಕೆ ವರ್ಗ ಮಾಡಬಹುದೆಂದು ಕೂಡ ತೀರ್ಮಾನ ಮಾಡಿದ್ದಾರೆ. ಇದನ್ನು ಒಪ್ಪಿಕೊಂಡಿರುವವರು ನಿವೃತ್ತಿಯಾಗುವ ತನಕ, ವಯಸ್ಸಾಗುವ ತನಕ ಕೆಲಸ ಮಾಡಬಹುದು. ಇವರು ರಾಜೀನಾಮೆ ಕೊಟ್ಟು ಹೋಗಿ ಎಂದು ಹೇಳಿದಾಗ ಅನೇಕ ಜನ ಅಧಿಕಾರದ ಗೌರವಕ್ಕೆ ಕುಂದು ಅಂಥ ರಾಜೀನಾಮೆ ಕೊಟ್ಟು ಹೋದರು. ಹೊಸ ಅಧಿಕಾರಿಗಳು ಬಂದರು ಇದು ಶ್ಯಾನುಭೋಗರಿಗೆ ಅದೇ ರೀತಿ ವಿಲೇಜ್ ಆಫೀಸರ್ಸ್‌ಗೆ ಅನ್ವಯಿಸುತ್ತದೆ. ನಮ್ಮ ರಾಜ್ಯದಲ್ಲಿ ವಂಶಪಾರಂಪರ್ಯವಾಗಿ ಬಂದಂಥ ಇರುವ ಪದ್ಧತಿಯನ್ನು ತೆಗೆದುಹಾಕಿದಿರಿ ಸ್ವಾಗತ. ಆದರೆ ತಾವು ಬದಲಿ ವ್ಯವಸ್ಥೆ ಏನು ಮಾಡಿದಿರಿ. ಶ್ಯಾನುಭೋಗರಿಗೆ ಪರಿಹಾರ ಕೊಟ್ಟಿರಿ, ಪಟೇಲರಿಗೆ ಅದೂ ಇಲ್ಲ. ಪಟೇಲರ ಮಟ್ಟಿಗೆ ಹೇಳುವುದಾದರೆ ಸುಮಾರು ೪೦ ಸಾವಿರ ಜನ ಇದ್ದಾರೆಂದು ತಿಳಿದು ಕೊಂಡಿದ್ದೇನೆ. ಅವರು ಕೂಡ ಸರ್ಕಾರಕ್ಕೆ ಸೇವೆ ಸಲ್ಲಿಸಿದ್ದಾರೆ. ಅವರು ಸರ್ಕಾರಕ್ಕೆ ಸೇವೆ ಸಲ್ಲಿಸಿರುವುದರಿಂದ ಅವರಿಗೆ ಸಲ್ಲತಕ್ಕದ್ದು ಏನಾದರೂ ಇದ್ದರೆ ಕೊಡುವುದು ಇದ್ದರೆ ಕೊಡಬೇಕು. ಅವನು ನ್ಯಾಯದಿಂದ ಕೆಲಸ ಮಾಡಿದ್ದಾನೆ, ತಾವು ಬದಲಿ ವ್ಯವಸ್ಥೆ ಏನು ಮಾಡಿದ್ದೀರಿ. ಶ್ಯಾನುಭೋಗ, ಪಟೇಲ್ ಇವರ ಬದಲಿಗೆ ನಮ್ಮಲ್ಲಿ ಗ್ರಾಮಲೆಕ್ಕಿಗ ಇದ್ದಾರೆ, ತಾವು ಚುನಾವಣೆ ಸಮಯದಲ್ಲಿ ಕೇರಳಕ್ಕೆ ಹೋಗಿದ್ದಿರಿ. ನಾನು ಅದೇ ಪ್ರದೇಶದಿಂದ ಬಂದಿರುವವನು. ಅಲ್ಲಿ ಪ್ರತಿಯೊಂದು ಗ್ರಾಮದಲ್ಲಿಯೂ ಸ್ವತಂತ್ರವಾದಂಥ ಆಫೀಸ್ ಇದೆ. ಆ ಗ್ರಾಮದ ಕಛೇರಿಯಲ್ಲಿ ಮೂರು ಜನ ಆಫೀಸರ್ಸ್ ಇದ್ದಾರೆ, ಒಬ್ಬರು ಲ್ಯಾಂಡ್ ರಿಫಾರಮ್ಸ್‌ಗೆ ಇರುತ್ತಾರೆ, ಒಬ್ಬರು ರೆವಿನ್ಯೂ ಕಲೆಕ್ಷನ್‌ಗೆ ಇರುತ್ತಾರೆ, ಇನ್ನೊಬ್ಬರು ಲ್ಯಾಂಡ್ ಅಸ್ಸೆಸ್‌ಮೆಂಟ್ ಇರುತ್ತಾರೆ. ಈ ಮೂರು ಜನ ಮುಖ್ಯವಾಗಿ ಕೆಲಸ ಮಾಡುತ್ತಾರೆ. ಈ ಮೂರು ಜನರು ಗ್ರಾಮದ ಉದ್ಯೋಗಸ್ತರು ಈ ಗ್ರಾಮದ ಅಧಿಕಾರಿಗಳಿಗೆ ಬೇಕಾದಷ್ಟು ಸಿಬ್ಬಂದಿ ಇದೆ. ಇದನ್ನು ತಾವು ಅಲ್ಲಿರತಕ್ಕ ಪ್ರತಿಯೊಂದು ಆಫೀಸ್‌ನಲ್ಲಿಯೂ ನೋಡಬಹುದು. ಬೆಳಿಗ್ಗೆ ೧೦ ಗಂಟೆಯಿಂದ ಸಂಜೆ ೫ ಗಂಟೆಯವರೆಗೂ ಅವರು ಅಲ್ಲೇ ಇರಬೇಕು. ನಮ್ಮಲ್ಲಿ ಏನಾಗುತ್ತದೆ ಸರ್ಕಾರ ಎಲ್ಲಿದೆ ಅಂಥ ಹುಡುಕಿದರೂ ಸರ್ಕಾರ ಸಿಕ್ಕುವುದಿಲ್ಲ. ಇನ್ನು ಗ್ರಾಮ ಲೆಕ್ಕಿಗ ಎಲ್ಲಿ ಸಿಕ್ಕುತ್ತಾನೆ. ಅವನಿಗೆ ನೀವು ಏನಾದರೂ ಮನೆ ಕೊಟ್ಟಿದ್ದೀರಾ? ಈಗ ಕಟ್ಟಿಕೊಡಲಿಕ್ಕೆ ಪ್ರಯತ್ನ ಮಾಡಿದ್ದೀರಿ. ತಾವು ಮನೆ ಕಟ್ಟಿಕೊಡಬೇಕು ಅಂದರೆ ಕೆಲವು ವರ್ಷ ಬೇಕಾಗುತ್ತದೆ. ಭೂ ಸುಧಾರಣೆ ಕಾನೂನು ಜಾರಿಗೆ ಬಂದಾಗ ಒಂದು ಸರ್ವೆ ನಂಬರ್ ತೆಗೆದುಕೊಳ್ಳಬೇಕಾಗಿದ್ದರೆ, ನಮ್ಮ ಬಡ ಗೇಣಿದಾರ ಈ ಗ್ರಾಮ ಲೆಕ್ಕಿಗರ ಹಿಂದೆ ಹೋಗಿ, ಎಷ್ಟು ಹಣ ಕೊಡಬೇಕು, ಎಷ್ಟು ಕಷ್ಟ ಇದೆ ಎನ್ನುವುದು ಎಲ್ಲರಿಗೂ ಗೊತ್ತು, ಇವೊತ್ತು ಗ್ರಾಮಲೆಕ್ಕಿಗನ ಕೈಗೆ ಶ್ಯಾನುಭೋಗ, ಪಟೇಲ ಇವರೆಲ್ಲರ ಅಧಿಕಾರವನ್ನು ಕೊಟ್ಟು ಅವನಿಗೆ ಇನ್ನೊಂದು ಜವಾಬ್ದಾರಿ ಕೆಲಸ ಪಂಚಾಯಿತಿ ಸೆಕ್ರೆಟರಿ ಅಂಥ ಮಾಡಿದರೆ ಆ ಪಂಚಾಯಿತಿ ಕೆಲಸ ಹೇಗೆ ಆಗಬೇಕು, ರೆವಿನ್ಯೂ ಕೆಲಸ ಹೇಗೆ ಆಗಬೇಕು ತಮ್ಮ ಮುಂದೆ ಒಂದು ಲೆಕ್ಕ ಹೇಳಬೇಕು ಎಂದರೆ ೧೯೮೦–೮೧ರ ರಿಪೋರ್ಟ್ ಆಫ್ ದಿ ಕಂಪ್ಟ್ರೋಲರ್ ಆಡಿಟರ್ ಜನರಲ್ ಆಫ್ ಇಂಡಿಯಾ ಇದರ ಪ್ರಕಾರ ಬೇರೆ ಬೇರೆ ಇಲಾಖೆಗಳ ಪರವಾಗಿ ರೆವಿನ್ಯೂ ಇಲಾಖೆಯ ಮೂಲಕ ವಸೂಲಾಗಬೇಕಾಗಿರುವ ಹಣ ಸೇಲ್ಸ್‌ಟ್ಯಾಕ್ಸ್ ೪೪.೬ ಕೋಟಿ ರೂಪಾಯಿ ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ೭.೧೧ ಕೋಟಿ, ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ೪೦ ಕೋಟಿ, ಸ್ಟೇಟ್ ಎಕ್ಸೈಜ್ ಡ್ಯೂಟಿ ೫.೧೪ ಕೋಟಿ ರೂಪಾಯಿ, ರೆವಿನ್ಯೂ ಸ್ಟ್ಯಾಂಪ್ ಡ್ಯೂಟಿ ಅಂಡ್ ರಿಜಿಸ್ಟ್ರೇಷನ್ ಫೀಸ್ ೫೪ ಲಕ್ಷ ರೂಪಾಯಿ ಫಾರೆಸ್ಟ್‌ನಲ್ಲಿ ೧೮ ಕೋಟಿ ೬೪ ಲಕ್ಷ ರೂಪಾಯಿ. ಮೋಟಾರ್ ವೆಹಿಕಲ್ ಟ್ಯಾಕ್ಸ್ ೧೭.೭೪ ಕೋಟಿ ರೂಪಾಯಿ, ಒಟ್ಟು ೮೩ ಕೋಟಿ ೩೩ ಲಕ್ಷ ರೂಪಾಯಿ ಸರ್ಕಾರಕ್ಕೆ ಬರಬೇಕಾದಂಥ ಹಣ ಇದೆ, ಗ್ರಾಮ ಮಟ್ಟದಲ್ಲಿ ಸರಿಯಾದಂಥ ವ್ಯವಸ್ಥೆಯನ್ನು ತಾವು ಮಾಡಿದರೆ ವಿಲೇಜ್ ಆಫೀಸರ್ಸ್ ತಾವು ಮಾಡಿದರೆ, ತೆರಿಗೆಗಳನ್ನು

ವಸೂಲು ಮಾಡಲಿಕ್ಕೆ ಪ್ರತ್ಯೇಕ ವ್ಯವಸ್ಥೆ ಮಾಡಿದರೆ, ತೆರಿಗೆಗಳನ್ನು ಚೆನ್ನಾಗಿ ವಸೂಲು ಮಾಡಲಿಕ್ಕೆ ಸಾಧ್ಯವಿದೆ. ಸಣ್ಣ ಸಣ್ಣ ಮುನಿಸಿಪಾಲಿಟಿಗಳಲ್ಲಿ ವ್ಯಾಪಾರ ವಹಿವಾಟು ನಡೆಯುತ್ತಿವೆ. ಅಗ್ರಿಕಲ್ಚರ್ ಇನ್‌ಕಮ್‌ಟ್ಯಾಕ್ಸ ಬಗ್ಗೆ ತಾವು ಇಲ್ಲಿ ಡಿಮ್ಯಾಂಡ್ ಮಾಡಿ ಕಳುಹಿಸಿದರೆ ಗ್ರಾಮಗಳಲ್ಲಿ ಯಾವ ವಿಲೇಜ್ ಆಫೀಸರ್ಸ್ ಇರುತ್ತಾರೆ ಅವರು ವಸೂಲು ಮಾಡಬೇಕು. ಈ ರೀತಿ ಮಾಡಿದರೆ ರೆವಿನ್ಯೂ ಕಲೆಕ್ಷನ್ ಹೆಚ್ಚಾಗಲಿಕ್ಕೆ ಸಾಧ್ಯವಿದೆ, ಇವೊತ್ತು ಏನಾಗಿದೆ ಎಂದರೆ ಪ್ರತಿಯೊಬ್ಬರು ಯಾವುದೇ ಕೆಲಸ ಆಗಬೇಕಾದರೂ ತಾಲ್ಲೂಕು ಆಫೀಸಿಗೆ ಹೋಗಬೇಕಾಗಿದೆ. ತನ್ನ ಮಗನಿಗೆ ಒಂದು ಕ್ಯಾಸ್ಟ್ ಸರ್ಟಿಫಿಕೇಟ್ ಬೇಕಾಗಲಿ, ಕಾಂಡಕ್ಟ್ ಸರ್ಟಿಫಿಕೇಟ್ ಬೇಕಾಗಲಿ, ಕಾರೆಕ್ಟರ್ ಸರ್ಟಿಫಿಕೇಟ್ ಬೇಕಾಗಲಿ ತಾಲೂಕ್ ಆಫೀಸ್‌ಗೆ ಹೋಗಬೇಕಾಗಿದೆ, ಅದೇ ಒಬ್ಬ ಅಂಗವಿಕಲ ಪೆನ್‌ಷನ್ ತೆಗೆದುಕೊಳ್ಳುವುದಕ್ಕೆ ಸರ್ಟಿಫಿಕೇಟ್ ಬೇಕು ಅಂದರೆ ತಾಲೂಕ್ ಆಫೀಸ್‌ಗೆ ಹೋಗಬೇಕು. ಗ್ರಾಮ ಲೆಕ್ಕಿಗ ಜನರ ಕೈಗೆ ಸಿಕ್ಕುವುದೇ ಕಷ್ಟ. ಆದುದರಿಂದ, ಈ ವ್ಯವಸ್ಥೆಯನ್ನು ಬದಲಾವಣೆ ಮಾಡಿ ಗ್ರಾಮ ಮಟ್ಟದಲ್ಲಿ ತಮ್ಮ ರೆವಿನ್ಯೂ ಆಡಳಿತವನ್ನು ಬಲಪಡಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ ಇನ್ನು ಹೋಬಳಿ ಮಟ್ಟದಲ್ಲಿ ರೆವಿನ್ಯೂ ಇನ್‌ಸ್ಪೆಕ್ಟರ್ ಇದ್ದಾರೆ. ಎಷ್ಟೋ ಹೋಬಳಿಗಳಲ್ಲಿ ರೆವಿನ್ಯೂ ಇನ್‌ಸ್ಪೆಕ್ಟರೇ ಇಲ್ಲ. ಎಷ್ಟೋ ಗ್ರಾಮಗಳಲ್ಲಿ ಗ್ರಾಮಲೆಕ್ಕಿಗರು ಇಲ್ಲ. ಇವರನ್ನೆಲ್ಲಾ ಏತಕ್ಕೆ ನೇಮಕ ಮಾಡುತ್ತಿಲ್ಲ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶೇಕಡ ೫೦ ಪರ್‌ಸೆಂಟ್ ಗ್ರಾಮ ಲೆಕ್ಕಿಗರು ಇಲ್ಲ. ಒಬ್ಬರಿಗೇ ೨-೩ ಗ್ರಾಮಗಳನ್ನು ಇನ್‌ಚಾರ್ಜ್ ಅಂಥ ಹಾಕುತ್ತಾರೆ, ಆಗ ಅವನು ಏನು [illegible] ಎಷ್ಟೋ ಕಡೆ ರೆವಿನ್ಯೂ ಇನ್‌ಸ್ಪೆಕ್ಟರ್ ಇಲ್ಲ, ಹೋಬಳಿ ಮಟ್ಟದಲ್ಲಿ [illegible]ಲ್ಲ, ಅವರು ಅಲ್ಲಿ [illegible]ರಲಿಕ್ಕೆ ಜಾಗ ಇಲ್ಲ, ತಾಲ್ಲೂಕ್ ಆಫೀಸ್‌ಗೆ ಹೋದರೆ ಒಬ್ಬರು ತಹಶೀಲ್ದಾರ್ ಇರುತ್ತಾರೆ. ಅವನ ತಲೆಯ ಮೇಲೆ ಎಲ್ಲಾ ತರಹದ ಕೆಲಸಗಳನ್ನು ಹಾಕಿರುತ್ತಾರೆ. ಈಗ ಕೊನೆಗೆ ತಾಲ್ಲೂಕ್ ಮ್ಯಾಜಿಸ್ಟ್ರೇಟ್ ಕೂಡ ಆಗಿದ್ದಾರೆ. ಅವರಿಗೆ ಕ್ರಿಮಿನಲ್ ಅಧಿಕಾರ ಜಾರಿಗೆ ಕೊಟ್ಟಿದ್ದೀರಿ. ಇನ್ನು ಅನೇಕ ಕಡೆಗಳಲ್ಲಿ ತಹಶೀಲ್ದಾರೇ ಇರುವುದಿಲ್ಲ, ಅಲ್ಲಿರತಕ್ಕ ಬಿ.ಡಿ.ಓ.ಗೆ ತಹಶೀಲ್ದಾರ್ ಇನ್‌ಚಾರ್ಜ್ ಕೊಟ್ಟಿರುತ್ತಾರೆ. ಇನ್ನು ಕೆಲವು ಕಡೆ ಬಿ.ಡಿ.ಓ. ಇದ್ದರೆ ಅವರಿಗೆ ತಹಶೀಲ್ದಾರ್ ಇನ್‌ಚಾರ್ಜ್ ಕೊಟ್ಟಿರುತ್ತಾರೆ. ಇವೊತ್ತು ರೆವಿನ್ಯೂ ಇಲಾಖೆಯ ಮೇಲೆ ಎಲ್ಲಾ ಇಲಾಖೆಯವರು ತಮ್ಮ ತಮ್ಮ ಭಾರವನ್ನು ಹೊರಿಸುತ್ತಿದ್ದಾರೆ, ಇದನ್ನು ಕಡಿಮೆ ಮಾಡಬೇಕೆಂದು ಹೇಳುತ್ತೇನೆ. ಇವೊತ್ತು ಅಸಿಸ್ಟೆಂಟ್ ಕಮಿಷನರ್ ಏನಿದ್ದಾರೆ ಅವರು ತಮ್ಮ ಸ್ವಂತ ಕೆಲಸ ಮಾಡುವುದನ್ನು ಬಿಟ್ಟು ಮುನಿಸಿಪಾಲಿಟಿಗಳಿಗೆ ಅಡ್ಮಿನಿಸ್ಟ್ರೇಟರ್ ಆಗಿ ಹೋಗಿದ್ದಾರೆ. ಈ ತರಹ ಮಾಡಿದರೆ ನಿಮ್ಮ ಕೆಲಸ ಹೇಗೆ ಸರಿಯಾಗಿ ಆಗುತ್ತದೆ. ರೆವಿನ್ಯೂ ಇಲಾಖೆ ಪ್ರಮುಖವಾದಂಥ ಇಲಾಖೆಯಾಗಿರುವುದರಿಂದ ಆ ಇಲಾಖೆಗೆ ಸಾಕಷ್ಟು ಜನ ಸಿಬ್ಬಂದಿ ನೇಮಿಸಿ, ಅವರಿಗೆ ಬೇಕಾದಂಥ ಕಟ್ಟಡಗಳು, ಸವಲತ್ತುಗಳನ್ನು ಕೊಡಬೇಕು. ಇದು ಗ್ರಾಮ ಮಟ್ಟದಲ್ಲಿ ಹೋಬಳಿ ಮಟ್ಟದಲ್ಲಿ ಮುಖ್ಯವಾಗಿ ಆಗಬೇಕು. ತಮ್ಮ ಆಡಳಿತ ಯಂತ್ರವನ್ನು ಬಲಪಡಿಸಿ, ಆದಷ್ಟುಮಟ್ಟಿಗೂ ತಾಲ್ಲೂಕ್ ಆಫೀಸಿಗೆ ಜನ ಪ್ರವಾಹದೋಪಾದಿಯಲ್ಲಿ ಬರುವುದನ್ನು ದಯಮಾಡಿ ಕಡಿಮೆ ಮಾಡಬೇಕು. ಇನ್ನು ಭೂ ಸುಧಾರಣೆ ವಿಚಾರ ತಮ್ಮ ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟಿದೆ, ೧೯೭೪-೭೫ರಿಂದ ಅಂದರೆ ಆರೇಳು ವರ್ಷಗಳಿಂದ ಇದು ಬಹಳ ಮುಖ್ಯವಾದಂಥ ಕಾರ್ಯ ಸಾಮಾಜಿಕ ಬದಲಾವಣೆಯನ್ನು ತರತಕ್ಕಂಥ ಕಾರ್ಯ, ಅಂಥ ಆ ಕಾರ್ಯವನ್ನು ರೆವಿನ್ಯೂ ಇಲಾಖೆಗೆ ಕೊಟ್ಟಿದ್ದಾರೆ. ಹಿಂದೆ ಭೂ ಸುಧಾರಣೆಯ ಪರವಾಗಿ, ಆ ಕಾರ್ಯವನ್ನು ಮಾಡುವುದಕ್ಕೆ ಸಚಿವ ಮಟ್ಟದಲ್ಲಿ ಒಬ್ಬರು ರಾಜ್ಯ ಮಂತ್ರಿಗಳು ಇದ್ದರು. ಅವರನ್ನು ಕ್ಯಾಬಿನೆಟ್ ದರ್ಜೆ ಮಂತ್ರಿಯನ್ನಾಗಿ ಮಾಡಿ ಭೂ ಸುಧಾರಣೆ ಕಾರ್ಯವನ್ನು ತ್ವರಿತಗತಿಯಿಂದ ಮಾಡುವುದಷ್ಟೇ ಅಲ್ಲ ಕಾನೂನು ಬದ್ಧವಾಗಿ ನ್ಯಾಯಬದ್ಧವಾಗಿ ಅದನ್ನು ನಡೆಸಬೇಕು, ಹೈಕೋರ್ಟ್ ಮತ್ತಿತರ ಕೋರ್ಟ್‌ಗಳಿಗೆ ಕೇಸುಗಳು ಹೋಗುವುದಕ್ಕೆ ಅವಕಾಶ ಆಗದಂತೆ ಸರ್ಕಾರದ ಮಟ್ಟದಲ್ಲಿ ಆಗಾಗ್ಗೆ ನೋಡಿಕೊಂಡು ಏನೇನು ತಿದ್ದುಪಡಿ ಮಾಡಬೇಕು, ಏನೇನು ಬದಲಾವಣೆ ಮಾಡಬೇಕು ಅದರ ಬಗ್ಗೆ ಸಕಾಲದಲ್ಲಿ ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ಸಲಹೆಗಳನ್ನು ಕೊಟ್ಟಿದ್ದೆವು.

೪-೦೦ ಪಿ.ಎಂ.

ಒಂದು ಸಣ್ಣ ವ್ಯವಸ್ಥೆ ಇತ್ತು. ಅದನ್ನೂ ಕೂಡ ಬೇಡವೆಂದು ಮಾಡಿದರು. ಸ್ಟೇಟ್ ಮಿನಿಸ್ಟರ್ ಅಂತ ಮಾಡಿದ್ದರು, ಅನಂತರ ಆ ಸ್ಟೇಟ್ ಮಿನಿಸ್ಟರ್ ಬೇಡವೆಂದು ಮಾಡಿದರು. ನಾನು ಈಗ ಅದನ್ನೆಲ್ಲಾ ಹೇಳುವುದಕ್ಕೆ ಹೋಗುವುದಿಲ್ಲ. ಇದು ತಮಗೆ ಬಿಟ್ಟ ಪ್ರಶ್ನೆ. ನಾನು ತಮ್ಮನ್ನು

ಕೇಳುತ್ತಿದ್ದೇನೆ. ಈ ಒಂದು ಭೂ ಸುಧಾರಣಾ ಕಾರ್ಯಕ್ರಮ ಏನು ಹಾಕಿಕೊಂಡಿದ್ದೀರಿ ಇದರ ಬಗ್ಗೆ ತಮಗೆ ನಿಷ್ಠೆ ಇರಬೇಕು. ಇದನ್ನು ನಾವು ಸರ್ವಾನುಮತದಿಂದ ಅಂಗೀಕರಿಸಿದ್ದೇವೆ. ಇದರಲ್ಲಿ ಯಾವುದೇ ಪಕ್ಷದ ಪ್ರಶ್ನೆ ಇಲ್ಲ. ಬಡ ಗೇಣೀದಾರರು ಯಾರಿದ್ದಾರೆ, ಭೂಮಿಯನ್ನು ಉಳುವವರು ಯಾರಿದ್ದಾರೆ ಅವರೇ ಆ ಭೂಮಿಯ ಒಡೆಯರಾಗಬೇಕೆಂದು ನಾವು ಅವತ್ತು ಮಾಡಿದ್ದೇವೆ. ಅದಕ್ಕೆ ತಾವು ವಿರೋಧವಾಗಿದ್ದೀರೆಂದು ನಾನು ಹೇಳುತ್ತಿಲ್ಲ. ಇದರಲ್ಲಿ ಎಂಥ ಸಮಸ್ಯೆಗಳೇ ಬಂದರೂ ಅವುಗಳನ್ನು ಇತ್ಯರ್ಥಮಾಡಬೇಕು. ಇವತ್ತಿಗೇ ಇದು ಮುಗಿದುಹೋಗುತ್ತದೆ ಎಂದು ಯಾರೂ ತಿಳಿದುಕೊಳ್ಳಬಾರದು. ಇದು ಸಾಮಾಜಿಕ ಪರಿವರ್ತನೆಯ ಕಾರ್ಯಕ್ರಮ ಇದು ಸಾವಿರಾರು ವರ್ಷಗಳಿಂದ ಬೆಳೆದುಕೊಂಡು ಬಂದಿರುವ ಒಂದು ದೊಡ್ಡ ಪಿಡುಗು. ಇದನ್ನು ತೆಗೆದು ಹೊಸ ಸಂಪ್ರದಾಯವನ್ನು ಹಾಕಬೇಕಾದರೆ ನಾವೆಲ್ಲರೂ ಬಹಳವಾಗಿ ಶ್ರಮಿಸಬೇಕಾಗುತ್ತದೆ, ಅದನ್ನು ಕೂಲಂಕಷವಾಗಿ ಪರಿಶೀಲಿಸಬೇಕಾಗುತ್ತದೆ. ಎಲ್ಲಾದರೂ ತೊಡಕುಗಳು ಕಂಡುಬಂದರೆ ಅವುಗಳನ್ನು ಸರಿಪಡಿಸಿಕೊಳ್ಳಬೇಕಾಗುತ್ತದೆ. ಅಂಥ ಒಂದು ವ್ಯವಸ್ಥೆ ಇದರಲ್ಲಿರಬೇಕು. ತಮ್ಮ ರೆವಿನ್ಯೂ ಇಲಾಖೆಯಲ್ಲಿ ಒಂದು ಸೆಲ್ ಎಂದು ಮಾಡಿದ್ದೀರಿ. ಇದರಿಂದ ಆ ಕೆಲಸವಾಗುವುದಿಲ್ಲವೆಂದು ನಾನು ಅಂದುಕೊಂಡಿದ್ದೇನೆ. ನಾನು ಸಿ.ಪಿ.ಐ. ನವನು. ಈ ಸೆಲ್‌ಗಳ ವಿಚಾರ ನನಗೆ ಚೆನ್ನಾಗಿ ಗೊತ್ತಿದೆ. ಸೆಲ್ ಎಂದರೆ ಕೆಲವರಿಗೆ ಕೆಲವು ಜವಾಬ್ದಾರಿಗಳನ್ನು ಕೊಡುತ್ತಾರೆ, ಅವರು ಅವುಗಳನ್ನು ಕೂಲಂಕಷವಾಗಿ ಚರ್ಚೆಮಾಡುತ್ತಾರೆ. ಅನಂತರ ಅದರ ವರದಿಯನ್ನು ಮೇಲ್ಪಟ್ಟವರು ಅಷ್ಟೇ ಜವಾಬ್ದಾರಿಯಿಂದ ಚರ್ಚೆಮಾಡಿ ತೀರ್ಮಾನ ಕೈಗೊಳ್ಳಬೇಕಾಗುತ್ತದೆ. ಇಲ್ಲದೇ ಹೋದರೆ ಒಂದೊಂದು ಸೆಲ್ ಒಂದೊಂದು ರೀತಿಯಲ್ಲಿ ಕೆಲಸಮಾಡುತ್ತಾ ಹೋದರೆ ಆಗ ಅದು ಯಾವುದೂ ಉಳಿಯುವುದಿಲ್ಲ ಇದರಲ್ಲಿ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ವಿಷಯಗಳೆಲ್ಲವೂ ಅಡಕವಾಗಿವೆ. ಆದ್ದರಿಂದ ಈ ಸದನದ ಎಲ್ಲ ಸದಸ್ಯರ ಬಹುಮತ ಮತ್ತು ಬೆಂಬಲವನ್ನೂ ಪಡೆದು ಕೆಲಸಮಾಡಿದರೆ ಮಾತ್ರ ಇದು ಸಾಧ್ಯವಾಗುತ್ತದೆ, ಯಶಸ್ವಿಯಾಗುತ್ತದೆ ಎಂದು ನನ್ನ ಸಲಹೆ. ೧೯೭೯–೮೦ ಇದು ಒಂದು ಕಾಲದ ಘಟ್ಟ. ೧೯೮೦ ರಿಂದ ೮೨ರವರೆಗೆ ತಾವು ಕೆಲವು ಅಂಕಿಅಂಶಗಳನ್ನು ಇಲ್ಲಿ ಕೊಟ್ಟಿದ್ದೀರಿ. ಆದರೆ ಇದನ್ನು ಏತಕ್ಕೆ ಕೊಟ್ಟಿದ್ದೀರೋ ಗೊತ್ತಿಲ್ಲ. ಅವತ್ತೂ ತಮ್ಮ ಪಕ್ಷದ ಸರ್ಕಾರವೇ ಇತ್ತು. ಇವತ್ತೂ ತಮ್ಮ ಪಕ್ಷದ ಸರ್ಕಾರವೇ ಇದೆ. ಆದರೆ ಅದರ ಮುಖ್ಯ ಮಂತ್ರಿಗಳು ಬೇರೆಬೇರೆಯವರು ಇರಬಹುದು. ಈ ಭೂ ಸುಧಾರಣಾ ಕಾರ್ಯಕ್ರಮವನ್ನು ಜಾರಿಗೆ ಕೊಡುವಾಗ ಸರ್ಕಾರ ಬದಲಾವಣೆಯಾಗಿದೆ, ಆದ್ದರಿಂದ ನಾವು ಈ ಕೆಲಸಕ್ಕೆ ನಾವು ವಿಘ್ನ ಮಾಡುತ್ತೇವೆಂದು ನಮ್ಮ ಪಕ್ಷದವರು ಯಾರು ಹೇಳುವುದಿಲ್ಲ, ಇವತ್ತು ರಾಜಕೀಯವಾಗಿ ನಾವೂ, ನೀವೂ ಬೇರೆ ಬೇರೆ ಕಡೆ ಇರಬಹುದು, ಅದು ಇಲ್ಲಿ ಮುಖ್ಯ ಪ್ರಶ್ನೆಯಲ್ಲ. ಇದಕ್ಕೆ ಪಕ್ಷದ ಬಣ್ಣವನ್ನು ಕೊಡುವುದು ಬೇಡ. ತಾವು ಯಾವುದೋ ಒಂದು ಉದ್ದೇಶವನ್ನು ಇಟ್ಟುಕೊಂಡು ಇದನ್ನು ಎರಡು ಭಾಗವಾಗಿ ಮಾಡಿದ್ದೀರಿ. Progress achieved up to 1979 is, 5,32,627 that is the number of applications disposed. Progress achieved from 1-1-1980 to February, 1982 is 2,76,437. ಅಂದರೆ ತಮ್ಮ ಲೆಕ್ಕದ ಪ್ರಕಾರ ೧೯೭೯ರ ಕೊನೆಯವರೆಗೆ ೬೦ ಪರ್ಸೆಂಟ್ ಕೆಲಸವಾಗಿದ್ದರೆ, ಅನಂತರದ್ದು ಕಡಿಮೆಯಾಗಿದೆ. ಇದು ತೀವ್ರಗತಿಯಿಂದ ಕೆಲಸಮಾಡಬೇಕೆಂದು ಮಾಡಿದ್ದು ತಮಗೆ ಅಂದರೆ ಮಾನ್ಯ ಸುಬ್ಬಯ್ಯ ಶೆಟ್ಟಿಯವರಿಗೆ, ಮಾನ್ಯ ಮೊಯ್ಲಿಯವರಿಗೆ ಗೊತ್ತಿದೆ. ಆದರೆ ೭೯ ರಿಂದ ೮೨ರವರೆಗೆ ಈ ಕೆಲಸಮಾಡುವುದಕ್ಕೆ ತಡೆ ಹಿಡಿಯಲಾಗಿತ್ತು, ಆಗ ನಾವು ಸತ್ಯಾಗ್ರಹ ಮಾಡಿದ್ದೆವು. ಆ ಕಾಲದಲ್ಲಿ ಪ್ರೋಗ್ರೆಸ್ ಎಷ್ಟಿತ್ತು ಎಂಬುದನ್ನು ನೋಡಿ ಆಗ ೬೦ ಪರ್ಸೆಂಟ್ ಇತ್ತು. ಈಗ ೮೦ರಿಂದ ೮೨ರವರೆಗೆ ತಮ್ಮ ಪ್ರೋಗ್ರೆಸ್ ೩೭ ಪರ್ಸೆಂಟ್‌ಗೆ ಇಳಿದಿದೆ. ನಮ್ಮ ಕಾಲದಲ್ಲಿ ಜಾಸ್ತಿ ಇದ್ದುದು ತಮ್ಮ ಕಾಲಕ್ಕೆ ಸ್ವಲ್ಪ ಕಡಿಮೆಯಾಗಿದೆ. ಇದಕ್ಕೆ ಕಾರಣವೂ ಇರಬಹುದು. ಆಗ ಸುಲಭವಾದ ಕೇಸುಗಳು ಏನು ಇದ್ದುವು ಅವುಗಳನ್ನು ಇತ್ಯರ್ಥ ಮಾಡಿದ್ದೀರಿ, ಈಗ ಕಷ್ಟವಾಗಿರತಕ್ಕ ಕೇಸುಗಳು ಇರುವುದರಿಂದ ಸ್ವಲ್ಪ ಕಡಿಮೆಯಾಗಿದೆ ಎಂದು ತಾವು ಹೇಳಬಹುದು.

ಶ್ರೀ ಎಂ. ಎಂ. ಖಾರ್ಗೆ.—ಬಡವರಿಗೆ, ಹರಿಜನಗಿರಿಜನರಿಗೆ ನ್ಯಾಯವನ್ನು ಒದಗಿಸಿಕೊಡಬೇಕೆಂಬ ಉದ್ದೇಶದಿಂದ ನಾವು ಹೆಚ್ಚಿನ ರೀತಿಯಲ್ಲಿ ಟ್ರಿಬ್ಯುನಲ್‌ಗಳನ್ನು ತೆರೆಯುವ ವ್ಯವಸ್ಥೆ ಮಾಡಿದ್ದೇವೆ.

ಶ್ರೀ ಬಿ. ವಿ. ಕಕ್ಕಿಲಾಯ.—ಹೆಚ್ಚಿನ ರೀತಿಯಲ್ಲಿ ಟ್ರಿಬ್ಯುನಲ್‌ಗಳನ್ನು ಮಾಡಿದ್ದರಿಂದ ನಿಮ್ಮ ಉದ್ದೇಶ ಒಂದು ರೀತಿಯಲ್ಲಿ ಸಫಲವಾಗಿದ್ದರೆ ಇನ್ನೊಂದು ರೀತಿಯಲ್ಲಿ ಆಗಿಲ್ಲ ಎಂದು ನಾನು ಹೇಳ

ಬೇಕಾಗಿದೆ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಸಂಖ್ಯಾ ದೃಷ್ಟಿಯಲ್ಲಿ ತಾವು ಟ್ರಿಬ್ಯುನಲ್‌ಗಳನ್ನು ಜಾಸ್ತಿ ಮಾಡಿದ್ದೀರಿ. ಆದರೆ ಅವುಗಳ ಗುಣದ ದೃಷ್ಟಿಯಿಂದ ಹೇಳುವುದಾದರೆ, ಈ ಟ್ರಿಬ್ಯುನಲ್‌ಗಳಲ್ಲಿ ಇತ್ಯರ್ಥವಾದ ತೀರ್ಪುಗಳ ಪೈಕಿ ೩೪ ಸಾವಿರ ತೀರ್ಪುಗಳು ಇವತ್ತು ಹೈ ಕೋರ್ಟಿನಲ್ಲಿ ಬಿದ್ದಿವೆ.

ಹೈಕೋರ್ಟಿಗೆ ಹೋದ ತೀರ್ಪುಗಳು ಕೂಡ ಏನಾಯಿತು ಎನ್ನುವುದನ್ನು ನಾವು ಗಮನಿಸಬೇಕು. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ನಾನು ಮಾನ್ಯ ವೀರಪ್ಪ ಮೊಯಿಲಿಯವರು ಒಮ್ಮೆ ಸೆಮಿನಾರ್‌ಗೆ ಒಪ್ಪಿಕೊಂಡು ಮಂಗಳೂರಿಗೆ ಹೋಗಿದ್ದೆವು. ನಮ್ಮ ಜೊತೆಯಲ್ಲಿ ಮಾನ್ಯ ಕೊಡಗಿಯವರು, ಕಾಪು ಸಂಜೀವಶೆಟ್ಟರು ಇದ್ದರು, ಇಲ್ಲಿ ಭೂಸುದಾರಣೆ ಶಾಸನ ಯಾವರೀತಿ ಜಾರಿಗೆ ತರಬೇಕು ಎಂಬುದರ ಬಗ್ಗೆ ಚರ್ಚೆ ಮಾಡಿದೆವು. ಅದರಲ್ಲಿ ಹೊಸ ಟ್ರಿಬ್ಯುನಲ್ ಸದಸ್ಯರೂ ಇದ್ದರು. ಭೂ ಸುದಾರಣೆಯ ಬಗ್ಗೆ ನಾವು ಕೆಲವು ವಿಚಾರಗಳನ್ನು ಹೇಳಿದೆವು. ಮತ್ತೆ ಒಂದೆರಡು ತೀರ್ಪುಗಳನ್ನು ನಾವು ಅಲ್ಲಿಯೇ ಕೊಟ್ಟೆವು. ಅದಕ್ಕೆ ಈವತ್ತಿನವರೆಗೆ ಉತ್ತರ ಬರಲ್ಲಿಲ್ಲ. ಒಂದು ಕೇಸ್‌ನಲ್ಲಿ ಅಣ್ಣ ತಮ್ಮಂದಿರು ಜೊತೆಗೆ ಸೇರಿಕೊಂಡು ಜಾಯಿಂಟಾಗಿ ಜಮೀನನ್ನು ಕರೀದಿಮಾಡಿದರು. ಒಬ್ಬ ತಮ್ಮ ಜಮೀನಿನಲ್ಲಿಯೇ ಇದ್ದ ಅಣ್ಣ ಬೇರೆ ಒಂದು ಕಡೆ ಇದ್ದ. ನಾವು ಟ್ರಿಬ್ಯೂನಲ್‌ನಲ್ಲಿ ಸದಸ್ಯರಾಗಿದ್ದಾಗ ಅರ್ಜಿ ಬಂದಿತ್ತು. ನಾವು ಹೇಳಿದೆವು, ಈ ವ್ಯವಹಾರ ಭೂ ನ್ಯಾಯ ಮಂಡಲಿಗೆ ಸಂಬಂಧಪಟ್ಟಿದ್ದಲ್ಲ. ಇದು ಇಲ್ಲಿ ವ್ಯವಹಾರ ಮಾಡಲಿಕ್ಕೆ ಸಾಧ್ಯವಿಲ್ಲವೆಂದು ತೀರ್ಪುಕೊಟ್ಟೆವು. ಅವರು ಹೈಕೋರ್ಟಿಗೆ ಹೋದರು. ನಮ್ಮ ತೀರ್ಪು ಹೈಕೋರ್ಟ್ ಎತ್ತಿ ಹಿಡಿದರು. ಎತ್ತಿ ಹಿಡಿದಮೇಲೆ ಮತ್ತೆ ಟ್ರಿಬ್ಯೂನಲ್‌ನಲ್ಲಿ ವ್ಯವಹಾರ ಮಾಡಲಿಲ್ಲ, ಅವರ ಮಗ ಹೈಕೋರ್ಟಿಗೆ ಹೋದ. ಇಂಥ ಸರ್ವೆ ನಂಬರಿನಲ್ಲಿ ಗೇಣಿದಾರ. ಇಂಥ ಸರ್ವೆ ನಂಬರಿಗೆ ಒಳಪಟ್ಟ ಭೂಮಿ ಅವನಿಗೆ ಹಕ್ಕುಬಂದಿದೆ ಎಂದು ಸ್ಪಷ್ಟಪಡಿಸಿ ತೀರ್ಪನ್ನು ಕೊಟ್ಟರು. ಹೀಗೆ ತೀರ್ಪನ್ನುಕೊಟ್ಟು ಪರತಶ್ತಿಗೇನ್ನು ಬರೆಯುವಾಗ ಕಾನೂನಿಗೆ ವಿರುದ್ಧವಾಗಿ ಹೈಕೋರ್ಟಿನಲ್ಲಿಯೂ ಹೇಳಿದ್ದಾರೆ. ಇಂಥ ಒಂದೇ ಒಂದು ಉದಾಹರಣೆ ಹೇಳಿದೆ. ಈವತ್ತು ಸ್ಪೀಕಿಂಗ್ ಆರ್ಡರ್ ಕೊಡಬೇಕೆಂದು ಹೈಕೋರ್ಟ್ ಆರ್ಡರ್ ಇದೆ. ೧೯೭೪ರ ನಂತರ ಹೊಸ ಟ್ರಿಬ್ಯುನಲ್‌ಗಳು ಆದಮೇಲೆ ಬಂದಿದೆ ಟ್ರಿಬ್ಯುನಲ್‌ಗಳಲ್ಲಿ ಸ್ಪೀಕಿಂಗ್ ಆರ್ಡರ್ ಕೊಟ್ಟದ್ದು ಎಷ್ಟು, ನಾನ್ ಸ್ಪೀಕಿಂಗ್ ಆರ್ಡರ್ ಕೊಟ್ಟದು ಎಷ್ಟು ಎಂಬುದರ ಬಗ್ಗೆ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆಯೇ. ಒಂದು ವರ್ಷದಲ್ಲಿ ಕೊಟ್ಟಂಥ ತೀರ್ಪುಗಳು ಎಷ್ಟು ಸ್ಪೀಕಿಂಗ್ ಆರ್ಡರ್ ಎಷ್ಟು. ವಿಚಾರಣೆ ನಡೆದದ್ದು ಎಷ್ಟು ನೋಟೀಸ್ ಕೊಡದೆ ಇರುವುದು ಎಷ್ಟು ಎಂದು ಈರೀತಿ ಟ್ರಿಬ್ಯುನಲ್‌ಗಳು ಕೊಡುವುದು ಇದ್ದರೆ ಸರ್ಕಾರಕ್ಕೆ ಗೌರವ ತರುತ್ತಿತ್ತು. ಭೂ ಸುದಾರಣೆ ಯಾವ ಉದ್ದೇಶದಿಂದ ಮಾಡಿದ್ದರೋ ಆ ಒಂದು ಉದ್ದೇಶ ಈಡೇರಲಿಕ್ಕೆ ಸಾಧ್ಯವಾಗುತಿತ್ತು. ಅದರ ಬದಲು ಭೂ ಸುದಾರಣೆ ಯಾವರೀತಿಯಾಗಿದೆ ಎಂದರೆ ಕೆಎಸ್‌ಆರ್‌ಟಿಸಿ ಅವ್ಯವಹಾರ ಮಾಡಿ ಸರಿಯಾಗಿ ನಡೆಸದೆ ರಾಷ್ಟ್ರೀಕರಣದ ವಿರುದ್ಧವಾಗಿ ಜನತೆಯಲ್ಲಿ ಯಾವರೀತಿ ಒಂದು ಭಾವನೆ ಬೆಳೆದುಬಂದಿತೋ ಅದೇ ರೀತಿಯಲ್ಲಿ ಭೂಸುದಾರಣೆ ಶಾಸನವು ಜಾರಿಗೆ ತಂದು ಕಾನೂನಿನಲ್ಲಿ ಇಲ್ಲದ ರೀತಿಯಲ್ಲಿ ತೀರ್ಪನ್ನುಕೊಟ್ಟು ಯಾರ ಜಮೀನನ್ನು ಯಾರಿಗೋ ಕೊಟ್ಟಿರುತ್ತಾರೆ. ಇದರಿಂದ ಭೂಸುದಾರಣಾ ಕ್ರಾಂತಿಯ ಉದ್ದೇಶಕ್ಕೆ ಕೊಡಲಿ ಪೆಟ್ಟು ಆಗಿದೆ. ಇದನ್ನು ಮತ್ತೆ ಪರಿಶೀಲಿಸಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಭೂ ಸುದಾರಣೆ ಕ್ರಾಂತಿಯನ್ನು ಮಾಡುತ್ತೇವೆಂದು ಹೊರಟಿದ್ದರಿಂದ ಇಲ್‌ಲೀಗಲ್ ಆಗಿ ಭೂಮಿಯನ್ನು ಪಡೆಯುವುದಕ್ಕೆ ಒಂದು ಅವಕಾಶವಾಯಿತು. ಟ್ರಿಬ್ಯುನಲ್‌ಗಳಲ್ಲಿ ಸದಸ್ಯರೂ ಕೂಡ ತಾಳ್ಮೆ ಇಲ್ಲದೆ ತೀರ್ಪುಗಳನ್ನು ಕೊಟ್ಟಿರುತ್ತಾರೆ. ರೇಕಾರ್ಡ್‌ಗಳನ್ನು ಕೂಡ ಆಧಾರವಾಗಿ ಇಟ್ಟುಕೊಂಡು ಒಂದು ಕಡೆ ವಾದ ಮಾಡಿ ತಮ್ಮ ಇಚ್ಛಾನುಸಾರ ತೀರ್ಪು ಕೊಟ್ಟಿರತಕ್ಕಂಥದ್ದು ತಮ್ಮ ಗಮನಕ್ಕ ಬಂದಿರಬಹುದು. ಇಂಥ ಅಧಿಕಾರಿಗಳ ಮೇಲೆ ತೀವಕ್ರಮ ತೆಗೆದುಕೊಳ್ಳಬೇಕೆಂದು ಕೂಡ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಏತಕ್ಕಂದರೆ ಭೂಸುಧಾರಣೆ ಕಾನೂನಾಗಿ ಬಂದಮೇಲೆ ಹೈಕೋರ್ಟಿಗೆ ೩೪ ಸಾವಿರ ಅರ್ಜಿಗಳು ಹೋದವು. ಆ ೩೪ ಸಾವಿರ ಅರ್ಜಿಗಳೂ ಕೂಡ ವಾಪಸ್ ಬರಲಿಕ್ಕೆ ಇದೆ ಎಂದು ಹೇಳಿದ್ದಾರೆ. ಇದು ಮಹಾಪೂರವಾಗಿ ಬರುತ್ತಿದೆ. ಇದನ್ನೆಲ್ಲಾ ನಾವು ಯೋಚನೆ ಮಾಡಬೇಕಾಗಿದೆ, ಇದು ಪೂರ್ತಿಯಾಗದ ತನಕ ಈ ಭೂ ಸುಧಾರಣಾ ಕಾಯಿದೆ ಪೂರ್ತಿಯಾಯಿತು ಎಂದು ತಿಳಿದುಕೊಳ್ಳುವುದಕ್ಕೆ ಆಗುವುದಿಲ್ಲ. ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುವು[illegible]ದೆಂದರೆ ಈಗ ತಾವು ಭೂಸುಧಾರಣಾ ಟ್ರಿಬ್ಯುನಲ್‌ಗಳು ಎಂದು ಮಾಡಿರುವುದು ಏನು ಇದ[illegible] ತಾಲ್ಲೂಕಿಗೆ ಒಂದು ಟ್ರಿಬ್ಯುನಲ್‌ನಂತೆ ಮಾಡಬೇಕು. ಯಾರು ತಮ್ಮಲ್ಲಿ ಬಂದು ಮೆಂಬರ್ ಆಗಬೇಕೆಂದು ಕೇಳುತ್ತಾರೋ ಅವರ ಬಗ್ಗೆ ಗಮನಕೊಡಬೇಕು. ತಾಲ್ಲೂಕಿಗೆ ಒಂದು

ಟ್ರಿಬ್ಯೂನಲ್ ಮಾಡಬೇಕು. ಹೀಗೆ ತಾಲ್ಲೂಕಿಗೆ ಒಂದು ಟ್ರಿಬ್ಯೂನಲ್ ಮಾಡುವಾಗ ನನ್ನ ಪ್ರಾರ್ಥನೆ ಏನೆಂದರೆ ಯಾವುದೇ ಒಂದು ಕಾಲಕ್ಕೆ ಶಾಸಕರಾಗಿ ಇರತಕ್ಕಂಥವರನ್ನು ಅಂದರೆ ಈಗಿನ ಶಾಸಕರನ್ನು ಹಾಕಬಾರದು ಎಂದು ಹೇಳುತ್ತಿಲ್ಲ. ಈಗಿನವರನ್ನೂ ಕೂಡ ಹಾರಿಸಿ. ಅವರವರ ಕ್ಷೇತ್ರದ ಬಗ್ಗೆ ಮಾಹಿತಿ ಕೊಡತಕ್ಕಂಥವರನ್ನು ಹಾಕಬೇಕು. ಅವರು ಹಿಂದೆ ಯಾವುದೇ ಸಂದರ್ಭದಲ್ಲಿ ಜನರ ಮನ್ನಣೆಯನ್ನು ಪಡೆದಿರಬೇಕು. ಶಾಸನ ಸಭೆಯಲ್ಲಾಗಲಿ. ಪಾರ್ಲಿಮೆಂಟಿನಲ್ಲಾಗಲೀ ತಾಲ್ಲೂಕ್ ಬೋರ್ಡಿನಲ್ಲಾಗಲಿ. ಯಾವುದೇ ಒಂದು ಸಂಸ್ಥೆ ಜನ ಓಟುಕೊಟ್ಟು ಆರಿಸಿದಂತವರಾಗಿರಬೇಕು. ಅವರು ಪ್ರಾಮಾಣಿಕವಾಗಿ ರಾಜಕೀಯದಲ್ಲಿ ಚೆನ್ನಾಗಿ ಪಳಗಿರಬೇಕು. ಅವರು ಯಾವ ಪಕ್ಷದವರೇ ಆಗಿರಲಿ ಪಕ್ಷದ ಬಗ್ಗೆ ಹೇಳುತ್ತಾ ಇಲ್ಲ. ಈಗಿನ ರಾಜಕೀಯದಲ್ಲಿ ರಾಜಕೀಯವನ್ನು ಒಂದು ಉದ್ಯೋಗವಾಗಿ ಇಟ್ಟುಕೊಂಡಿರುತ್ತಾರೆ. ಇದನ್ನು ಗಮನದಲ್ಲಿಟ್ಟುಕೊಂಡು ರಾಜಕೀಯವನ್ನು ಒಂದು ಉದ್ಯೋಗ ಮಾಡಿಕೊಂಡು ಒಂದು ಬ್ಯಾಗ್ ಹಿಡಿದುಕೊಂಡು ಕಂಡಕ್ಟರ್‌ಗಿರಿ ಮಾಡುತ್ತಿರುವುದನ್ನು ನಾವು ನೀವು ಕೇಳಿದ್ದೇವೆ. ಜನರಸೇವೆ ಮಾಡುವುದಕ್ಕೆ ದಾರಿದ್ರ್ಯವಿಲ್ಲ. ಬೇಕಾದಷ್ಟು ಜನರು ಇದ್ದಾರೆ. ಅಂಥವರನ್ನು ಆರಿಸಿ ಸಿರ್ದಾಕ್ಷಿಣ್ಯವಾಗಿ ನ್ಯಾಯ ದೊರಕಿಸಿಕೊಡುವಂಥವರನ್ನು ಹಾಕಿ ಟ್ರಿಬ್ಯೂನಲ್‌ಗಳನ್ನು ಮಾಡಿ. ತಾಲ್ಲೂಕ್ ಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ ಸ್ಥಾಪನೆ ಮಾಡಿದ ಟ್ರಿಬ್ಯೂನಲ್‌ಗಳಿಗೆ ಏಕಾಏಕಿ ಸಂಪೂರ್ಣವಾದ ಪವರ್ ಕೊಡಬೇಕೆಂದು ಹೇಳುವುದಿಲ್ಲ. ಅದನ್ನು ಮುಂದಕ್ಕೆ ಯೋಚನೆ ಮಾಡಿ ಈವತ್ತಿನ ದಿವಸ ತಾವು ಹೇಳಿದ್ದೀರಿ ರೆವ್ಯೂ ಮಾಡುತ್ತೇವೆಂದು. ಇದರಲ್ಲಿ ಹೇಳಿದ್ದೀರಿ. ರೆವ್ಯೂ ವರ್ಕ್ ಪರಿಣಾಮ ಏನಾಯಿತು. ರೆವ್ಯೂಮಾಡುವಾಗ ಎಲ್ಲರ ಸಹಕಾರ ಬೇಕು. ರೆವ್ಯೂ ಮಾಡಬೇಕೆಂದು ಎಷ್ಟೋದಿವಸಗಳಿಂದ ಕೇಳುತಿದ್ದವರಲ್ಲಿ ನಾನೂ ಒಬ್ಬ. ನೀವು ರೆವ್ಯೂ ಮಾಡುವಾಗ ಸ್ಪೀಕಿಂಗ್ ಆರ್ಡರ್ ಇಲ್ಲವೆ ಮಾಡಿದ್ದನ್ನು ಏನು ಮಾಡುತ್ತೀರಿ. ರೆಕಾರ್ಡ್‌ಗಳಿಗೆ ವಿರುದ್ಧವಾಗಿದು ಭೂಸುಧಾರಣೆಗೆ ಸಂಬಂಧವಿಲ್ಲದೆ ಇರತಕ್ಕಂಥ ಭೂಮಿಯನ್ನು ಹಂಚಿದಾಗ ಏನುಮಾಡುತ್ತೀರಿ. ಹಿಂದೆ ಟ್ರಿಬ್ಯೂನಲ್‌ಗಳಲ್ಲಿ ಕೊಟ್ಟಿರತಕ್ಕಂಥದ್ದಕ್ಕೆ ಹೈಕೋರ್ಟಿನಿಂದ ರಿವಿಶನ್ ಬಂದಾಗ್ಯೂ ತೀರ್ಪು ವಿರುದ್ಧವಾಗಿದೆ. ಮೊದಲು ಕೊಟ್ಟಿರುವುದು ಸರಿಯೋ, ಆಮೇಲೆ ಕೊಟ್ಟಿದ್ದು ಸರಿಯೋ ಎಂಬುವನ್ನು ಸರಿಯಾಗಿ ತೀರ್ಮಾನಮಾಡಿ ಸರಿಯಾದ ಮಾರ್ಗದರ್ಶನ ಕೊಡುವಂತೆ ಆಡಳಿತ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಮತ್ತೆ ಇನ್ನು ಒಂದೆರಡು ಸಣ್ಣ ವಿಚಾರಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನೆರೆಯಬಗ್ಗೆ ಈಗಾಗಲೇ ಹೇಳಿದ್ದಾರೆ. ತಮ್ಮ ಗಮನಕ್ಕೆ ತರುವುದೇನೆಂದರೆ ಆಡಳಿತ ಬಗ್ಗೆ ಸಲಹೆಗಳನ್ನು ಕೊಟ್ಟಿದ್ದಾರೆ ರೆವಿನ್ಯೂ ಇಲಾಖೆಯವರ ಆಡಳಿತದ ಬಗ್ಗೆ ಹೇಳುತ್ತೇನೆ. ನೆರೆ ಹಾವಳಿ ಪರಿಹಾರವನ್ನು ಕೇಂದ್ರಸರ್ಕಾರದವರು ಕೊಡುತ್ತಾರೆ, ಕರ್ನಾಟಕ ರಾಜ್ಯ ಸರ್ಕಾರದವರು ಸಹ ಕೊಡುತ್ತಾರೆ. ಅದೇರೀತಿ ಬರಗಾಲ ಬಂದಾಗಲೂ ಪರಿಹಾರವನ್ನು ಕೊಡುತ್ತೀರಿ. ನಮ್ಮ ರಾಜ್ಯದ ಹೆಚ್ಚಿನ ಭಾಗ ಬರಗಾಲ ಪೀಡಿತಪ್ರದೇಶ ಒಂದು ಕಡೆ ಆದರೆ, ಇನ್ನೊಂದು ಕಡೆ ನೆರೆ ಹಾವಳಿಗೆ ತುತ್ತಾಗುವ ಪ್ರದೇಶಗಳು ಎರಡೂ ಇವೆ. ಬರಗಾಲ ಪೀಡಿತ ಪ್ರದೇಶಗಳ ಬಗ್ಗೆ ಅನೇಕ ಸಲ ಈ ಸದನದಲ್ಲಿ ಚರ್ಚೆ ಮಾಡಿದ್ದೇವೆ. ಚರ್ಚೆಮಾಡಿ ತಮ್ಮ ಅಮೂಲ್ಯ ಸಮಯವನ್ನು ತೆಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ ಬೇರೆಯವರು ಮಾತನಾಡಲಿಕ್ಕೆ ಇದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ನೆರೆಹಾವಳಿ ಪರಿಹಾರವನ್ನು ಕೊಡುವಂತಹ ಕಾಲದಲ್ಲಿ ಯಾವ ರೀತಿಯಲ್ಲಿ ಹಣ ಖರ್ಚಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಲೆನಾಡು ಪ್ರದೇಶಗಳಲ್ಲಿ ಹಾಗೆಯೇ ಮೈಸೂರು ಭಾಗದ ಕಾವೇರಿನದಿ ಪ್ರವೇಶಗಳಲ್ಲಿ ಆಗಾಗ್ಗೆ ನೆರೆಹಾವಳಿಗೆ ತುತ್ತಾಗಿರತಕ್ಕ ಪ್ರದೇಶಗಳಿರುತ್ತವೆ. ಗೋಪಿನಾಥಂ ಕೆರೆ ಒಡೆದು ಲಕ್ಷಾಂತರ ರೂಪಾಯಿಗಳ ನಷ್ಟವಾಗಿದೆ. ನೆರೆಹಾವಳಿಗೆ ತುತ್ತಾಗತಕ್ಕ ಪ್ರದೇಶಗಳನ್ನು ಆಯ್ಕೆ ಮಾಡಿಕೊಂಡು ಒಂದು ಶಾಶ್ವತವಾದ ಯೋಜನೆಯನ್ನು ಸಿದ್ಧಮಾಡಿಕೊಳ್ಳಬೇಕು ಸಮುದ್ರದ ಪಕ್ಕದಲ್ಲಿರುವ ದಕ್ಷಿಣ ಜಿಲ್ಲೆ ಮತ್ತು ಮಲೆನಾಡು ಪ್ರದೇಶಗಳು ನೆರೆಗೆ ಸತತವಾಗಿ ಬಲಿಯಾಗುವ ಪ್ರದೇಶಗಳು. ನೆರೆ ಬಂದಾಗ ತಪ್ಪಿಸಿಕೊಂಡು ಹೋಗಲಿಕ್ಕೆ ನಾವು ಮಾಡಬೇಕಾದ ಕೆಲಸವೇನೆಂದರೆ ರಸ್ತೆಗಳು ಮತ್ತು ಸೇತುವೆಗಳು ಆಗಬೇಕು. ಇಂತಹವುಗಳೆಲ್ಲಾ ಶಾಶ್ವತವಾದ ಯೋಜನೆಯಲ್ಲಿ ಸೇರಿಸಬೇಕಾಗುತ್ತದೆ. ನಮ್ಮ ಕ್ಷೇತ್ರದಲ್ಲಿ ನೆರೆ ಬಂದಾಗ ಇರತಕ್ಕ ಸೇತುವೆಗಳು ಮರಳು ತುಂಬಿಕೊಂಡು ನೀರು ರಸ್ತೆಯನ್ನು ಮುಚ್ಚಿಹಾಕುತ್ತದೆ. ನಮ್ಮಲ್ಲಿ ನೈಸರ್ಗಿಕ ವ್ಯತ್ಯಾಸದಿಂದ ವಿಪರೀತ ಮಳೆಯಾಗಿ ಸಣ್ಣಸಣ್ಣ ಹಳ್ಳಿಗಳು ಕೂಡ ನೆರೆಗೆ ಅನುಕೂಲ ಮಾಡಿಕೊಳ್ಳುತ್ತವೆ, ಹಂತ ಹಂತವಾಗಿ

ಹಳ್ಳಿಗಳಲ್ಲಿ ಇರತಕ್ಕ ಮರಳನ್ನು ತೆಗದು, ಹಳ್ಳಗಳಾಗುವ ಕಡೆ ನಮ್ಮ ಕಡೆ ಕಟ್ಟೆವುಣಿ ಎಂದು ಹೇಳು ತ್ತಾರೆ. ಕಲ್ಲುಕಟ್ಟಿ ನೀರನ್ನು ತಡೆಗಟ್ಟತಕ್ಕಂತಹ ಯೋಜನೆಗಳನ್ನು ಸಿದ್ಧಪಡಿಸಲು ತಾಲ್ಲೂಕು ಬೋರ್ಡ್ ನವರ ಜೊತೆಯಲ್ಲಿ ಚರ್ಚೆಮಾಡಿ ಯೋಜನೆಗಳನ್ನು ತಯಾರು ಮಾಡಿ ಅದಕ್ಕೆ ಸಾಕಷ್ಟು ಹಣವನ್ನು ಕೇಂದ್ರ ಸರ್ಕಾರದಿಂದ ಪಡೆದುಕೊಂಡು , ನೆರೆ ಬಂದಾಗ ಪರಿಹಾರವನ್ನು ಪದೇಪದೇ ಕೊಡತಕ್ಕದ್ದನ್ನು ನಿಲ್ಲಿಸಲು ಯೋಜನಾಬದ್ಧವಾದ ಕಾರ್ಯಕ್ರಮವನ್ನು ಹಾಕಿಕೊಂಡರೆ ಅನುಕೂಲವಾಗಬಹುದು.

ಭೂಮಿ ಕೊರೆತದ ಬಗ್ಗೆ ಹೇಳಬೇಕೆಂದರೆ ಕೇರಳ ಸರ್ಕಾರ ಈಗಾಗಲೇ ಒಂದು ಯೋಜನೆಯನ್ನು ಸಿದ್ಧಪಡಿಸಿಕೊಂಡಿದೆ. ಸಮುದ್ರದ ಪಕ್ಕದಲಿರತಕ್ಕ ನಮ್ಮ ಹಿರಿಯ ಸದಸ್ಯರಾದ ಭಾಸ್ಕರಶೆಟ್ಟರು ಈಗ ಸಭೆಯಲ್ಲಿ ಇಲ್ಲ. ಅವರು ಮಳೆ ಬಂದಾಗಲೆಲ್ಲಾ ನನ್ನ ಕ್ಷೇತ್ರದಲ್ಲಿ ಇಷ್ಟು ಮನೆಗಳು ಹೋದವು ಎಷ್ಟು ಬೆಳೆ ನಷ್ಟವಾಯಿತು ತೆಂಗಿನಮರಗಳು ಹಾಳಾದವು ಎಂದು ಯಾವಾಗಲೂ ಪರಿಹಾರವನ್ನು ಕೇಳಿ ಪಡೆದು ಕೊಂಡಿರುತ್ತಾರೆ. ಅದೇ ರೀತಿ ನಮ್ಮ ಯು.ಟಿ.ಫರೀದ್ ಕ್ಷೇತ್ರದಲ್ಲಿ ಬೆಂಗರೆ, ಕಡಕ್‌ಪುರ ಇಲ್ಲಿ ಭೂಮಿ ಕೊರೆತದಿಂದ ನಷ್ಟವಾದ ಮೇಲೆ ಪರಿಹಾರವನ್ನು ಸರ್ಕಾರ ಕೊಟ್ಟಿದೆ. ಯಾವ್ಯಾವ ಪ್ರದೇಶಗಳಲ್ಲಿ ನೆರೆಹಾವಳಿ ಇದೆ, ಯಾವ್ಯಾವ ಪ್ರದೇಶದಲ್ಲಿ ಭೂಮಿ ಕೊರೆತವಿದೆ ಎಂಬುದನ್ನು ಕುಳಿತುಕೊಂಡು ಸಮಗ್ರವಾದ ಒಂದು ಯೋಜನೆಯನ್ನು ತಯಾರು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಲು ಸಾಧ್ಯವಾದರೆ ವರ್ಲ್ಡ್‌ಬ್ಯಾಂಕಿನಿಂದ ಸಹಾಯವನ್ನು ಪಡೆದು ಶಾಶ್ವತವಾದ ಒಂದು ಯೋಜನೆಯನ್ನು ಮಾಡಬೇಕು,

ಇನ್ನು ಶಾನುಬೋಗರುಗಳಿಗೆ ಕೊಟ್ಟಂತೆ ಪಟೇಲರುಗಳಿಗೂ ಕೂಡ ಪರಿಹಾರವನ್ನು ಕೊಡಬೇ ಕೆಂದು ಕೇಳುತ್ತೇನೆ. ನಮ್ಮ ರಾಜ್ಯದಲ್ಲಿ ಪಟೇಲರುಗಳು ೪೦ ಸಾವಿರ ಜನ ಇದ್ದಾರೆ. ಜನರಿಗೆ ಇರತಕ್ಕ ಕಷ್ಟವನ್ನು ತಪ್ಪಿಸಲು ಹೋಬಳಿಗಳ ಮಟ್ಟಗಳಲ್ಲಿ ರೆವಿನ್ಯೂ ಕಛೇರಿಗಳನ್ನು ಮಾಡಬೇಕು. ಪ್ರತಿ ಯೊಂದು ವಿಷಯಕ್ಕೂ ತಾಲ್ಲೂಕಿಗೆ ಹೋಗುವುದನ್ನು ಮೊದಲು ತಪ್ಪಿಸಬೇಕು. ಸರಿಯಾದ ರೀತಿ ಯಲ್ಲಿ ಕೆಲಸ ಮಾಡತಕ್ಕಂತಹ ಯುವಕ ಅಧಿಕಾರಿಗಳನ್ನು ನೇಮಕಮಾಡಿ ಬಡ ಜನರ ಸಮಸ್ಯೆಗಳನ್ನು ಬಗೆಹರಿಸಲು ಅವರವರ ಸ್ಥಳಗಳಲ್ಲೇ ಒಂದೊಂದು ಆಫೀಸು ಮಾಡಿ ನ್ಯಾಯ ದೊರಕಿಸಿ ಕೊಡಬೇಕು. ನಾನು ನಿಮ್ಮ ಬೇಡಿಕೆಗೆ ಬೆಂಬಲ ಕೊಡದಿದ್ದರೂ ತಾವು ಮಂಜೂರು ಮಾಡಿಕೊಂಡು ಹೋಗುತ್ತೀರಿ, ಒಳ್ಳೆಯ ಕೆಲಸಗಳನ್ನು ಮಾಡುತ್ತೀರಿ ಎಂಬ ಭರವಸೆಯನ್ನು ಇಟ್ಟುಕೊಂಡು ಇಟ್ಟಿರತಕ್ಕ ಹಣವನ್ನು ಒಳ್ಳೆಯ ರೀತಿಯಲ್ಲಿ ಉಪಯೋಗ ಮಾಡಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಂ. ಶಿರ್‍ನಾಳಿ ಚಂದ್ರಶೇಖರ್ (ಹೊಸನಗರ)—ಸನ್ಮಾನ್ಯ ಸಭಾಧ್ಯಕ್ಷರೇ ಕಂದಾಯ ಇಲಾಖೆಯ ಮೇಲಿನ ಬೇಡಿಕೆಯನ್ನು ಸಂಪೂರ್ಣವಾಗಿ ಬೆಂಬಲಿಸಿ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಬಯಸುತ್ತೇನೆ. ತಾಲ್ಲೂಕಿಗೆ ಒಂದಕ್ಕಿಂತ ಹೆಚ್ಚಿಗೆ ಭೂ ಪಂಚಾಯಿತಿಗಳನ್ನು ನೇಮಕ ಮಾಡುವುದರ ಮೂಲಕ ತೀವ್ರಗತಿಯಲ್ಲಿ ಭೂಸುಧಾರಣೆ ಕಟ್ಟಳೆಗಳನ್ನು ನಿಕಾಲ್ ಮಾಡತಕ್ಕ ವ್ಯವಸ್ಥೆ ಮಾಡಿದ್ದಾರೆ ಬಹಳ ಶ್ಲಾಘನೀಯವಾದ ಕೆಲಸ. ಒಂದು ಪಂಚಾಯಿತಿ ಇರುವುದರಿಂದ ಕೇಸುಗಳು ಬೇಗ ತೀರ್ಮಾನ ವಾಗುವುದಿಲ್ಲವೆಂದು ತಿಳಿದು ಹೆಚ್ಚು ಭೂಪಂಚಾಯಿತಿಗಳನ್ನು ನೇಮಿಸಿ ಭೂಸುಧಾರಣಾ ಕೇಸುಗಳನ್ನು ಬೇಗ ಇತ್ಯರ್ಥ ಮಾಡತಕ್ಕ ಒಂದು ಸತ್ಯವಾದ ಕೆಲಸವನ್ನು ಸರ್ಕಾರ ಮಾಡಿದೆ. ಇಂತಹ ತಾರೀಖಿಗೆ ಇಷ್ಟು ಕೇಸುಗಳು ತೀರ್ಮಾನವಾಗಬೇಕು ಎನ್ನುವ ಆದೇಶ ಕಳುಹಿಸುವುದರ ಮೂಲಕ ಪಂಚಾಯಿತಿಗಳು ತ್ವರಿತವಾಗಿ ಕೆಲಸ ಮಾಡುವಂತೆ ಮಾಡಿದ್ದಾರೆ. ಇದೇರೀತಿ ತೀರ್ಮಾನವಾಗಬೇಕು ಎನ್ನುವ ನ್ಯೂನ್ಯತೆ ಗಳನ್ನು ಮಾಡುವುದರ ಮೂಲಕ ಪಂಚಾಯತಿಗಳಿಗೆ ತಗಾದೆಯನ್ನು ಮಾಡಿ ತೀವ್ರವಾಗಿ ಕೆಲಸಗಳು ಆಗುವಂತೆ ಮಾಡಿದೆ. ತಗಾದೆ ಮಾಡಿರುವುದರಿಂದ ಒತ್ತಾಯ ಮಾಡಿದ್ದರಿಂದ ಅನೇಕ ಸಾರಿ ತಪ್ಪು ನಿರ್ಣಯಗಳಾಗಿವೆ. ಭೂನ್ಯಾಯ ಮಂಡಳಿಯ ತೀರ್ಪು ಕೊನೆಯದಲ್ಲ ಕಾನೂನು ಪ್ರಕಾರ ಹೈಕೋರ್ಟ್ ನಲ್ಲಿ ಚಾಲೇಂಜ್ ಮಾಡಬಹುದು. ಹೈಕೋರ್ಟ್‌ನಲ್ಲಿ ಅಂತಿಮ ತೀರ್ಮಾನವಾಗುವುದಿಲ್ಲ. ಅಂತಿಮ ತೀರ್ಮಾನವಾಗಬೇಕಾದರೆ ಪುನಃ ಭೂನ್ಯಾಯ ಮಂಡಳಿಗೆ ಬರಬೇಕಾಗುತ್ತದೆ. ಪುನಃ ಟ್ರಿಬ್ಯೂನಲ್ ಕುಳಿತುಕೊಂಡು ತೀರ್ಮಾನ ಮಾಡಬೇಕು. ಮತ್ತೆ ಅದು ಹೈಕೋರ್ಟ್‌ಗೆ ಹೋಗುತ್ತದೆ ಇದಕ್ಕೊಂದು ಪರಿಹಾರ ಬೇಡವೆ ? ಹೈಕೋರ್ಟ್ ಮತ್ತು ಭೂನ್ಯಾಯ ಮಂಡಳಿಗಳ ಮಧ್ಯೆ ಒಂದು ಅಪೀಲು ಕೋರ್ಟ್ ಮಾಡಿ ಅದರಲ್ಲಿ ನ್ಯಾಯ ಪರಿಣತರು ಇದ್ದು ಒಂದು ಅಂತಿಮ ತೀರ್ಮಾನ ಕೊಡುವ ವ್ಯವಸ್ಥೆ ಯನ್ನು ನಿರ್ಮಾಣಮಾಡಿ ಎಂದು ಸಲಹೆಯನ್ನು ಸರ್ಕಾರಕ್ಕೆ ಕೊಟ್ಟಿದ್ದೆವೆ. ಆದರೆ ಈ ಸಲಹೆಯನ್ನು ಕೊಟ್ಟರೂ ನಾವು reactioners ಎಂದು ಕರೆಸಿಕೊಂಡಿದ್ದಾಯಿತು. ಯಾವಾಗ ನಮ್ಮನ್ನು ಆ ರೀತಿ

ಕರೆದರೋ ನಾವು ಸುಮ್ಮನೆ ಕುಳಿತುಕೊಂಡಿದ್ದೇವೆ. ಇವತ್ತು ಭೂ ಸುಧಾರಣಾ ಕಾನೂನು ರೀತ್ಯಾ ತಮಗೆ ಏನಾಗಿದೆ ಅಂದರೆ ನೀವು ಒಂದು ಸುತ್ತೋಲೆಯನ್ನು ಉಪ–ವಿಭಾಗಾಧಿಕಾರಿಗಳವರಿಗೆ ಈ ರೀತಿ ಮಾಡಿ ಎಂದು ಕಳುಹಿಸುತ್ತೀರಿ. ಟ್ರಿಬ್ಯೂನಲ್‌ನಲ್ಲಿರತಕ್ಕ ಅಧಿಕಾರಿ ನಿಮ್ಮ ಹಿಡಿತದಲ್ಲಿರುತ್ತಾರೆ. ನಿಮ್ಮ ಕೈಯ್ಯಲ್ಲಿ ಕಾನೂನು ಇದೆ ಅಲ್ಲಿ ನಿಮ್ಮ ಸುತ್ತೋಲೆಗೆ ಕಿಮ್ಮತ್ತು ಇಲ್ಲ. ಅಸಿಸ್ಟೆಂಟ್ ಕಮಿಷನ್‌ರವರು ಕಂದಾಯ ಇಲಾಖೆಗೆ ಸೇರಿರತಕ್ಕವರು ನಿಮ್ಮ ಸುತ್ತೋಲೆಗೆ ಒತ್ತಾಸೆ ಮಾಡುತ್ತಾರೆ ಆದರೆ ಅಲ್ಲಿರತಕ್ಕ ಖಾಸಗಿ ಸದಸ್ಯರು ಏನಿದ್ದಾರೆ ಅವರು ನಿಮ್ಮ ಸುತ್ತೋಲೆಯನ್ನು ಅದು ನಿಮಗೆ ಗೀತಾ, ಬೈಬಲ್ ಇರಬಹುದು ಇಲ್ಲಿ ಕಾನೂನು ಏನು ಹೇಳುತ್ತದೆ ಎನ್ನುವ ಮಾತನ್ನು ಹೇಳುತ್ತಾರೆ ಆಗ ನಿಮ್ಮ ಸುತ್ತೋಲೆಯ ಪರಿಣಾಮ ನಡೆಯುವುದಿಲ್ಲ. ಅದಕ್ಕಾಗಿ ನಾನು ಹೇಳುವುದೇನೆಂದರೆ ಭೂನ್ಯಾಯ ಮಂಡಳಿ ಮತ್ತು ಹೈಕೋರ್ಟ್ ಮಧ್ಯದಲ್ಲಿ ಅನ್ಯಾಯಗಳನ್ನು ಪರಿಶೀಲನೆ ಮಾಡುವುದಕ್ಕೆ ಯಾವುದಾದರೂ ಇಲಾಖೆ ಮಾಡಬೇಕೆಂದು ನನ್ನ ಒತ್ತಾಸೆ. ಮಾನ್ಯ ಬಸವಲಿಂಗಪ್ಪನವರು ಕಂದಾಯ ಮಂತ್ರಿಗಳಾಗಿದ್ದಾಗ ಇದಕ್ಕೊಂದು ತಿದ್ದುಪಡಿಯನ್ನು ತಂದರು. ಅವರು ಕಂದಾಯ ಮಂತ್ರಿಗಳಾಗಿದ್ದಾಗ ಯಾರೋ ಒಬ್ಬರು ಅರ್ಜಿ ಕೊಟ್ಟರು ಅವರ ಮನಸ್ಸಿಗೆ ಅದು ಸರಿ ಅನಿಸಿ ಅದಕ್ಕೊಂದು ತಿದ್ದುಪಡಿಯನ್ನು ತಂದಿದ್ದರು. ನೀರಾವರಿ ಜಮೀನು ಇದ್ದು ನೀರಾವರಿ ಸೆಸ್ಸು ೧೫೦ ಪಟ್ಟು ಪರಿಹಾರ ಮಾಡಿದರೆ ಸಿಕ್ಕಾಪಟ್ಟೆಯಾಗುತ್ತದೆ ಇದು ಬಹಳ ಅನ್ಯಾಯ ಇದನ್ನು ತೆಗೆಯಬೇಕೆಂದು ಅವರ ಮನಸ್ಸಿಗೆ ಬಂತು. ಯಾರೋ ಒಬ್ಬರು ಅರ್ಜಿ ಕೊಟ್ಟರು.

೪–೩೦ ಪಿ.ಎಂ.

ನಂತರ ಶ್ರೀ ಬಸವಲಿಂಗಪ್ಪನವರಿಗೆ ಇದು ಸರಿ ಎಂದು ಕಂಡುಬಂದಿರಬೇಕು. ಅವರು ಇದಕ್ಕೆ ಕೂಡಲೇ ತಿದ್ದುಪಡಿ ತಂದರು. ಯಾವ ಕಾರಣಕ್ಕೂ ಭೂಕಂದಾಯಕ್ಕೆ ೧೫೦ ಪಟ್ಟು ನೀರಾವರಿ ತೆರಿಗೆ ಸೇರಿಸಬಾರದೆಂದು ತಿದ್ದುಪಡಿ ತಂದರು. ಇದರಿಂದ ಅತ್ಯಂತ ನಗೆಪಾಟಲು ಆಗಿದ್ದೇನೆಂದರೆ, ನಮ್ಮ ಶಿವಮೊಗ್ಗದಲ್ಲಿ ತುಂಗಾ ಮತ್ತು ಭದ್ರಾ ನದಿಗಳು ಹರಿಯುತ್ತವೆ. ಈ ಭಾಗದಲ್ಲಿರುವಂತಹ ಖುಷ್ಕಿ ಜಮೀನಿನ ಭೂಕಂದಾಯ ಒಂದು ಇಲ್ಲವೇ ಎರಡು ರೂಪಾಯಿಗಳು ಮಾತ್ರ ಇತ್ತು. ಇದಕ್ಕೆ ನೀರಾವರಿ ತೆರಿಗೆ ಸೇರಿಸಿದರೆ ಮಾತ್ರ ಜಾಸ್ತಿಯಾಗುತ್ತದೆ, ಇಲ್ಲದಿದ್ದರೆ ಜಾಸ್ತಿಯಾಗುವುದಿಲ್ಲ. ನಮ್ಮ ತೀರ್ಥಹಳ್ಳಿ, ಹೊಸನಗರದ ಕಡೆ ಭೂಕಂದಾಯ ಹತ್ತು ರೂಪಾಯಿಗಳೆಂದು ಇದ್ದರೆ ಮತ್ತು ವರ್ಷದಲ್ಲಿ ಒಂದು ಬೆಳೆಯಾದರೆ ಭೂಕಂದಾಯದ ನೂರೈವತ್ತರಷ್ಟು ಹಾಗೂ ವರ್ಷದಲ್ಲಿ ಎರಡು ಬೆಳೆಯಾದರೆ ಭೂಕಂದಾಯದ ಮುನ್ನೂರರಷ್ಟು ಪರಿಹಾರ ಕೊಡಬೇಕಾಗುತ್ತದೆ. ಆದಕಾರಣ ಇದಕ್ಕೆ ತಿದ್ದುಪಡಿ ಮಾಡದಿದ್ದರೆ ಜನರು ನಮ್ಮನ್ನು ಹಾಸ್ಯ ಮಾಡುತ್ತಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ.—ಈಗ ತಿದ್ದುಪಡಿಯಾಗಿದೆ. ಈಗಾಗಲೇ ಅದು ಜಾರಿಯಲ್ಲಿದೆ.

ಶ್ರೀ ಎಸ್. ಎಂ. ಶಿನ್ನಾಳಿ ಚಂದ್ರಶೇಖರ್.—ಹಾಗಿದ್ದರೆ ಸಂತೋಷ. ಫಾರಂ ನಂಬರ್ ೧೧ರಲ್ಲಿ ಹೆಚ್ಚುವರಿ ಜಮೀನು ಇರುವವರು ಸರ್ಕಾರಕ್ಕೆ ತಿಳಿಸಬೇಕಾಗುತ್ತದೆ. ಬುದ್ಧಿವಂತ ಜನರು ಏನು ಮಾಡುತ್ತಾರೆಂದರೆ, ಹೆಚ್ಚುವರಿ ಭೂಮಿಯನ್ನು ತಾವೇ ಉಳಿಸಿಕೊಳ್ಳಬೇಕೆಂದುಕೊಂಡು ತಮ್ಮ ಕುಟುಂಬದ ಸದಸ್ಯರೇ ಗೇಣಿದಾರರೆಂದು ಅರ್ಜಿ ಕೊಡಿಸುತ್ತಾರೆ. ಇದರಿಂದ ಒಂದೊಂದು ತಾಲ್ಲೂಕ್‌ನಲ್ಲಿ ಕೆಲವೇ ಎಕರೆಗಳಷ್ಟು ಇಲ್ಲವೇ ಕೆಲವೇ ಗುಂಟೆಗಳಷ್ಟು ಹೆಚ್ಚುವರಿ ಜಮೀನು ಸರ್ಕಾರಕ್ಕೆ ಸಿಗುತ್ತಿದೆ. ಭೂರಹಿತ ರೈತರಿಗೆ ಹಂಚಲು ಜಮೀನು ಸಿಗುತ್ತಲೇ ಇಲ್ಲ. ಆದ್ದರಿಂದ ಇದನ್ನು ತಾವು ಸ್ವಲ್ಪ ಪರಿಶೀಲನೆ ಮಾಡಬೇಕು.

ಇನ್ನು ಭೂಮಾಲೀಕರಿಗೆ ಗೇಣಿದಾರರಿಂದ ಪರಿಹಾರ ಕೊಡಿಸುವ ಸಲುವಾಗಿ ಪಿ.ಎಲ್.ಡಿ. ಬ್ಯಾಂಕ್‌ನಿಂದ ಸಾಲ ಕೊಡಿಸುವ ವ್ಯವಸ್ಥೆ ಇದೆ. ಈ ರೀತಿ ಪಡೆದ ಸಾಲದ ಹಣವನ್ನು ಭೂಮಾಲೀಕರಿಗೆ ಸಂದಾಯ ಮಾಡುತ್ತಿಲ್ಲ. ಸಣ್ಣ ಭೂಮಾಲೀಕರಿಗೆ ಪರಿಹಾರ ಕೊಡುತ್ತಿದ್ದೀರಿ, ಆದರೆ ದೊಡ್ಡ ಭೂಮಾಲೀಕರಿಗೆ ಕೊಡುತ್ತಿಲ್ಲ. ಇದರ ಬಗ್ಗೆ ಒಂದು ಅಂತ್ಯ ತೀರ್ಮಾನವನ್ನು ತಾವು ಕೈಕೊಳ್ಳಬೇಕು. ಇಡೀ ಕರ್ನಾಟಕ ರಾಜ್ಯದಲ್ಲಿರುವ ಎಲ್ಲ ಭೂಮಾಲೀಕರಿಗೆ ಪರಿಹಾರ ಕೊಡಲು ೪೦ ಕೋಟಿ ರೂ.ಗಳಿಗಿಂತ ಜಾಸ್ತಿ ಬೇಕಾಗುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ.—ಎಲ್ಲ ಸೇರಿಸಿದರೆ ೧೧೦ ಕೋಟಿ ರೂಪಾಯಿಗಳಾಗುತ್ತದೆ.

ಶ್ರೀ ಎಸ್. ಎಂ. ಶ್ರೀನಾಳಿ ಚಂದ್ರಶೇಖರ್.—ತಾವು ಕೇಂದ್ರ ಸರ್ಕಾರದಿಂದ ಸಹಾಯ ಪಡೆದು ಕೊಂಡಾದರೂ ಎಲ್ಲರಿಗೂ ಪರಿಹಾರ ಕೊಡುವಂತಹ ಒಂದು ಅಂತಿಮ ತೀರ್ಮಾನ ಕೈಕೊಳ್ಳಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ದರಖಾಸ್ತು ಕಮಿಟಿ ಎಂದು ಮಾಡಿದ್ದೀರಿ. ಈ ಕಮಿಟಿಗೆ ಸಾಕಷ್ಟು ಅಧಿಕಾರವನ್ನು ತಾವು ಕೊಟ್ಟಿಲ್ಲ. ಏಕೆಂದರೆ, ಈ ಕಮಿಟಿಯ ಸದಸ್ಯರು ಸಲಹೆಗಳನ್ನು ಮಾತ್ರ ಕೊಡಬಹುದು. ಈ ಕಮಿಟಿಯಲ್ಲಿ ರೇಂಜ್ ಫಾರೆಸ್ಟ್ ಆಫೀಸರ್ ಅವರೂ ಸಹ ಸದಸ್ಯರಾಗಿದ್ದಾರೆ. ಎಲ್ಲರ ಅಭಿಪ್ರಾಯ ಪಡೆದ ನಂತರ ಕೆಲವರಿಗೆ ಸಾಗುವಳಿ ಚೀಟಿ ಕೊಡಲಾಗುತ್ತದೆ. ಸಾಗುವಳಿ ಚೀಟಿ ಕೊಟ್ಟ ಮೇಲೆ ಫಾರೆಸ್ಟ್ ಇಲಾಖೆಯವರು ಆ ಜಾಗ ತಮಗೆ ಸೇರಬೇಕೆಂದು ವಿತಂಡವಾದ ಮಾಡುತ್ತಾರೆ. ಉದಾಹರಣೆಗೆ ಹೇಳಬೇಕೆಂದರೆ, ನಮ್ಮ ಶಿವಮೊಗ್ಗ ಜಿಲ್ಲೆಯ ವಿಟಗೊಂಡಕೊಪ್ಪದಲ್ಲಿ ೬೦ ಜನರಿಗೆ ಸಾಗುವಳಿ ಚೀಟಿ ಕೊಟ್ಟ ಮೇಲೆ ಅರಣ್ಯ ಇಲಾಖೆಯವರು ಆ ಜಾಗ ನಮಗೆ ಸೇರಿದ್ದು, ಅದರಲ್ಲಿ ಒಂದು ಇಂಚ್ ಜಾಗವನ್ನು ಸಹ ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತಿದ್ದಾರೆ. ದರಖಾಸ್ತು ಕಮಿಟಿಯಲ್ಲಿ ರೇಂಜ್ ಫಾರೆಸ್ಟ್ ಆಫೀಸರ್ ಸಹ ಇರುತ್ತಾರೆ. ಕಮಿಟಿ ಸದಸ್ಯರೆಲ್ಲಾ ವಿಚಾರವಿನಿಮಯ: ಮಾಡಿದ ನಂತರವೇ ಒಂದು ಅಂತಿಮ ತೀರ್ಮಾನ ತೆಗೆದುಕೊಂಡು ಸಾಗುವಳಿ ಚೀಟಿ ಕೊಡಲಾಗುತ್ತದೆ. ಸಾಗುವಳಿ ಚೀಟಿ ಕೊಟ್ಟ ನಂತರ ಅರಣ್ಯ ಇಲಾಖೆಯವರು ಆ ಜಾಗ ತಮಗೆ ಸೇರಬೇಕೆಂದು ಹೇಳುವುದರಲ್ಲಿ ಅರ್ಥವೇನಿದೆ ? ಕೆಲವರು ೧೦–೨೦ ವರ್ಷಗಳ ಕಾಲ ಸಾಗುವಳಿ ಮಾಡಿದ ನಂತರವೂ ಸಹ ಅರಣ್ಯ ಇಲಾಖೆಯವರು ಅದು ತಮಗೆ ಸೇರಿದ್ದು ಎಂದು ಹೇಳುತ್ತಾರೆ. ಇದು ಸರಿಯೇ ಎಂಬುದನ್ನು ತಾವು ಪರಿಶೀಲನೆ ಮಾಡಬೇಕು. ಮುಖ್ಯವಾಗಿ ತಾವು ದರಖಾಸ್ತು ಸಮಿತಿಗೆ ಹೆಚ್ಚಿನ ಒಂದು ಅಧಿಕಾರ ಕೊಡಬೇಕು. ಇಲ್ಲದಿದ್ದರೆ ಅದು ಇದ್ದರೂ ಒಂದೇ, ಇಲ್ಲದಿದ್ದರೂ ಒಂದೆ ಎಂದು ನಾನು ಹೇಳುತ್ತೇನೆ. ನಾನು ಹೋದ ಸಲ ಮತ್ತು ಅದರ ಹಿಂದಿನ ಸಲ ಹೇಳಿದಂತೆ ಒಂದೊಂದು ತಾಲ್ಲೂಕ್‌ನಲ್ಲಿಯೂ ಐದಾರು ಸಾವಿರ ದರಖಾಸ್ತು ಅರ್ಜಿಗಳಿವೆ. ಆದರೆ ಹಂಚಲು ಇರುವ ಭೂಮಿ ಮಾತ್ರ ೨೦೦ ಎಕರೆಗಳಿಂದ ಹಿಡಿದು ೩೦೦ ಎಕರೆಗಳ ವರೆಗೆ ಮಾತ್ರ. ಇಷ್ಟನ್ನು ಎಲ್ಲರಿಗೂ ಹಂಚಲು ಹೋದರೆ ಕೆಲವು ಗುಂಟೆಗಳಷ್ಟು ಜಮೀನು ಸಹ ಸಿಗವುದಿಲ್ಲ. ಇದಕ್ಕೆ ಫಾರೆಸ್ಟ್ ಇಲಾಖೆಯವರೇ ಕಾರಣ. ಇದರ ಜೊತೆಗೆ ಹೆಚ್ಚಿನ ಅರಣ್ಯ ಬೆಳೆಸಬೇಕೆಂಬ ಉದ್ದೇಶದಿಂದ ರೆವಿನ್ಯೂ ಭೂಮಿಯನ್ನು ಮತ್ತು ಗೋಮಾಳದ ಜಮೀನನ್ನು ಅರಣ್ಯ ಇಲಾಖೆಯವರಿಗೆ ವಹಿಸಿಕೊಟ್ಟಿದ್ದೀರಿ. ಇಂತಹ ಜಮೀನುಗಳಲ್ಲಿ ಯಾರಾದರೂ ಸಾಗುವಳಿ ಮಾಡಿದ್ದಾರೆಯೋ ಹೇಗೆ ಎಂಬುದನ್ನು ನೋಡದೆ, ಸ್ಥಳ ಪರಿಶೀಲನೆ ಮಾಡದೆ ವಹಿಸಿಕೊಟ್ಟಿದ್ದಾರೆ. ಇದರಿಂದ ನೂರಾರು ಕುಟುಂಬಗಳು ಕಷ್ಟದಲ್ಲಿ ಸಿಕ್ಕಿವೆ. ಇಂತಹ ಜಮೀನುಗಳಲ್ಲಿ ಹತ್ತು ಇಪ್ಪತ್ತು ವರ್ಷಗಳಷ್ಟು ಹಳೆಯದಾದ ಅಡಿಕೆ ಮತ್ತು ತೆಂಗಿನ ಮರಗಳೂ ಸಹ ಇವೆ. ಇದೇ ಕಾರಣದಿಂದ ದರಖಾಸ್ತು ಮೂಲಕ ಹಂಚಲು ಒಂದೊಂದು ತಾಲ್ಲೂಕ್‌ನಲ್ಲಿ ೧೫೦ ಎಕರೆಗಳಷ್ಟು ಜಮೀನೂ ಸಹ ದೊರೆಯುತ್ತಿಲ್ಲ. ಇದೇ ಕಾರಣದಿಂದ ೫–೬ ಸಾವಿರ ಜನರು ದಾರುಣ ಪರಿಸ್ಥಿತಿಯಲ್ಲಿದ್ದಾರೆ. ಇವರ ಒಂದು ಕಷ್ಟವನ್ನು ಹೋಗಲಾಡಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಪೇಜ್ ೩೭ರಲ್ಲಿ ಈ ರೀತಿ ಹೇಳಿದ್ದಾರೆ :—

> "೧೯೮೧ರ ಪ್ರಾರಂಭದಲ್ಲಿ ೧,೭೬ ೪೭೦ ಎಕರೆ ೧೮ ಗುಂಟೆಗಳಷ್ಟು ವಿಸ್ತಾರದ ಭೂಮಿ ರಾಜ್ಯದಲ್ಲಿ ಹಂಚಿಕೆಗಾಗಿ ಲಭ್ಯವಿತ್ತು. ಇದರಲ್ಲಿ ೧,೧೭೫ ಎಕರೆ ೧೩ ಗುಂಟೆಗಳನ್ನು ಹರಿಜನ ಗಿರಿಜನ ಸಮುದಾಯಗಳಿಗೆ ಸೇರಿದ ೫೩೭ ವ್ಯಕ್ತಿಗಳಿಗೆ ಮತ್ತು ೬೦೨ ಎಕರೆ ೧೯ ಗುಂಟೆಗಳಷ್ಟು ವಿಸ್ತಾರದ ಭೂಮಿಯನ್ನು ಇತರ ಸಮುದಾಯಗಳಿಗೆ ಸೇರಿದ ೪೪೦ ವ್ಯಕ್ತಿಗಳಿಗೆ ಮಂಜೂರು ಮಾಡಲಾಯಿತು"

ಎಂದು. ಈ ಒಂದು ಲೆಕ್ಕವನ್ನು ನೋಡಿದರೆ, ಆನೆಯ ಹೊಟ್ಟೆಗೆ ಆರ್‌ಕಾಸಿನ ಮಜ್ಜಿಗೆಯನ್ನು ಕುಡಿಸಿದಂತೆ ಕಾಣುತ್ತದೆ. ಒಂದು ಲಕ್ಷ ಚಿಲ್ಲರೆ ಎಕರೆಯಷ್ಟು ಭೂಮಿಯಲ್ಲಿ ಇಷ್ಟು ಕಡಿಮೆ ಪ್ರಮಾಣದಲ್ಲಿ ಹಂಚಿರಲು ಕಾರಣವೇನು ? ಇದನ್ನು ತಮ್ಮ ಗಮನಕ್ಕೆ ತಂದು ಇಲ್ಲಿ ಹೇಳಿದ್ದಾರೆಯೋ ಹೇಗೆ ಎಂಬುದನ್ನು ತಾವು ತಿಳಿಸಬೇಕು. ಇಂತಹ ವರದಿಯನ್ನು ಮೊದಲು ತಮ್ಮ ಗಮನಕ್ಕೆ ತರಬೇಕಾಗಿತ್ತು. ತಮ್ಮ ಗಮನಕ್ಕೆ ತರದೆ ಇಲ್ಲಿ ಹೇಳಿರುವುದು ಸರಿಯಲ್ಲ. ಈ ಬಗ್ಗೆ ತಾವು ಸಂಬಂಧಪಟ್ಟ ಅಧಿಕಾರಿಗಳಿಗೆ ಚಾಟಿ ಏಟು ಕೊಡಬೇಕು. ಇಲ್ಲದಿದ್ದರೆ ನಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ.—ತಮಗೆಲ್ಲಾ ತಿಳಿದಿರುವಂತೆ ಕಳೆದ ಒಂದೂವರೆ ಮತ್ತು ಎರಡು ವರ್ಷಗಳಿಂದ ಈ ಒಂದು ಕೆಲಸ ನಡೆದಿರಲಿಲ್ಲ. ಎಲ್ಲಿಯವರೆಗೆ ಲ್ಯಾಂಡ್-ಗ್ರ್ಯಾಂಟ್ ಕಮಿಟಿಗಳನ್ನು ರಚನೆ ಮಾಡಿರಲಿಲ್ಲವೋ ಅಲ್ಲಿಯವರೆಗೆ ಭೂಮಿಯನ್ನು ಹಂಚಿಕೆ ಮಾಡುವುದು ಬೇಡ ಎಂಬ ಒಂದು ನಿರ್ಣಯವನ್ನು ತೆಗೆದುಕೊಂಡ ಮೇಲೆ ಯಾರಿಗೂ ಭೂಮಿಯನ್ನು ಹಂಚಿಕೆ ಮಾಡಲಿಲ್ಲ. ಆದರೆ ಈಗ ಒಂದು ಟಾರ್ಗೆಟ್‌ನ್ನು ಫಿಕ್ಸ್ ಮಾಡಿ 30ನೇ ಜೂನ್‌ನೊಳಗಾಗಿ ಗೋಮಾಳ ಹಾಗೂ ಸಾಗುವಳಿಗೆ ಯೋಗ್ಯವಾದ ಹೆಚ್ಚುವರಿ ಜಮೀನನ್ನು ಹಂಚಿಕೆ ಮಾಡಬೇಕು ಮತ್ತು ಈ ಪ್ರಚಾರದಲ್ಲಿ ಕಮಿಟಿಗಳು ಇಲ್ಲದಿದ್ದರೂ ಸಹ ಸಂಬಂಧಪಟ್ಟ ಅಸಿಸ್ಟೆಂಟ್ ಕಮೀಷನರ್ ಅವರು ಮತ್ತು ತಹಶೀಲ್‌ದಾರರು ಖುದ್ದಾಗಿ ಸ್ಥಳ ಪರಿಶೀಲನೆ ಮಾಡಿ ಈ ಒಂದು ಕೆಲಸವನ್ನು ಆದಷ್ಟು ಬೇಗ ಮಾಡಬೇಕೆಂದು ಆದೇಶ ಕೊಟ್ಟಿದ್ದೇವೆ. ಇನ್ನು ಒಂದೆರಡು ತಿಂಗಳುಗಳಲ್ಲಿ ಈ ಕೆಲಸ ಮುಗಿಯುತ್ತದೆ. ಆದ್ದರಿಂದ ಈ ಬಗ್ಗೆ ಅಧಿಕಾರಿಗಳನ್ನು ದೂರುವುದಕ್ಕೆ ಕಾರಣವೇನೂ ಇಲ್ಲ.

ಶ್ರೀ ಎಸ್. ಎಂ. ಶ್ರೀರಾನ್ನಳಿ ಚಂದ್ರಶೇಖರ್.—ಇದನ್ನು ತಮ್ಮ ವರದಿಯಲ್ಲಿ ಸ್ಪಷ್ಟನೆ ಮಾಡಿದ್ದರೆ ಚೆನ್ನಾಗಿರುತ್ತಿತ್ತು. ಇನ್ನು ಕಂದಾಯ ಇಲಾಖೆ ಎಂಬುದು ಬಹಳ ಬೆಲೆಬಾಳುವ ಇಲಾಖೆ. ಈ ಮೊದಲು ಹಳ್ಳಿಗಳಿಗೆ ತಹಶೀಲ್‌ದಾರರು ಜಮಾಬಂದಿಗೆ ಬಂದರೆ ಸಾಕು, ರೈತರು ಪಂಚೆ, ಬೆಣ್ಣೆ, ಅಕ್ಕಿ, ಕೋಳಿ ಮುಂತಾದವನ್ನೆಲ್ಲಾ ತಂದೊಪ್ಪಿಸಿ ತಮ್ಮ ಕಷ್ಟ ಸುಖಗಳನ್ನು ಹೇಳಿಕೊಳ್ಳುತ್ತಿದ್ದರು. ಮಾನ್ಯ ಬಂಗಾರಪ್ಪನವರು ರೆವಿನ್ಯೂ ಮಂತ್ರಿಗಳಾಗಿದ್ದಾಗ ಪ್ರತಿ ತಾಲ್ಲೂಕ್‌ನಲ್ಲಿಯೂ ಅಲ್ಲಿನ ಸಂಬಂಧಪಟ್ಟ ಶಾಸಕರು, ತಾಲ್ಲೂಕ್ ಬೋರ್ಡಿನ ಅಧ್ಯಕ್ಷರು ಮತ್ತು ರೇಂಜ್ ಫಾರೆಸ್ಟ್ ಅಧಿಕಾರಿ ಅವರು ಇರುವಂತಹ ಒಂದು ಸಮಿತಿಯನ್ನು ಮಾಡಿ ಆ ಸಮಿತಿಯ ಮೂಲಕ ಆಯಾ ತಾಲ್ಲೂಕ್‌ನಲ್ಲಿ ಎಷ್ಟೆಷ್ಟು ಜನರು ಬಗರ್-ಹುಕುಂ ಸಾಗುವಳಿ ಮಾಡುತ್ತಿದ್ದಾರೆಂಬ ವಿವರಗಳನ್ನು ತರಿಸಿಕೊಂಡರು. ಆ ಸಮಯದಲ್ಲಿ ನಾವು ಇಡೀ ತಾಲ್ಲೂಕ್‌ನಲ್ಲಿ ತಿರುಗಾಡಿ ಯಾರು ಯಾರು ಎಷ್ಟೆಷ್ಟು ಎಕರೆ ಜಮೀನನ್ನು ಬಗರ್-ಹುಕುಂ ಸಾಗುವಳಿ ಮಾಡಿದ್ದಾರೆಂಬ ಬಗ್ಗೆ ಒಂದು ಪಟ್ಟಿಯನ್ನು ತಯಾರಿಸಿ ಕಳಿಸಿಕೊಟ್ಟೆವು. ಅದು ಈಗ ವಿಧಾನಸೌಧದ ಕಛೇರಿಯಲ್ಲಿದೆ. ಇದಕ್ಕೆ ತಾವು ಏನಾದರು ಒಂದು ಅಂತಿಮ ವ್ಯವಸ್ಥೆಯನ್ನು ಮಾಡಿದರೆ ತಮಗೆ ಪುಣ್ಯ ಬರುತ್ತದೆ ಏಕೆಂದರೆ, ಕೆಲವರು ಕಳೆದ 20-30 ವರ್ಷಗಳಿಂದ ಬಗರ್-ಹುಕುಂ ಸಾಗುವಳಿ ಮಾಡಿದ ಉದಾಹರಣೆಗಳೂ ಸಹ ಇವೆ.

ಆದರಿಂದ ಸರ್ಕಾರಕ್ಕೆ ಏನು ಲುಕ್ಸಾನಾಗುತ್ತದೆ ಅನ್ನುವುದನ್ನು ತಾವು ನೋಡಬೇಕು. ಅವರು ಕಂದಾಯ ಕೊಡುತ್ತಾ ಇಲ್ಲ, ವಾಟರ್‌ಸೆಸ್ ಇನ್ನು ತೆರಿಗೆಗಳನ್ನು ಕೊಡುತ್ತಾ ಇಲ್ಲ. ಅವರು ಅಲ್ಲಿ ಬೆಳೆದಿದ್ದನ್ನು ತಿಂದುಕೊಂಡು ಸರ್ಕಾರಕ್ಕೆ ಕೊಡಬೇಕಾದ ಯಾವ ತೆರಿಗೆಗಳನ್ನೂ ಕೊಡದೆ ಬಹಳ ಸುಖವನ್ನು ಅನುಭವಿಸುತ್ತಿದ್ದಾರೆ. ಅಧಿಕಾರಿಗಳನ್ನು ಕೇಳಿದರೆ ಈ ವಿಚಾರದಲ್ಲಿ ಬಹಳ ನಿಸ್ಸಹಾಯಕರಾಗಿದ್ದಾರೆ. ಇವೊತ್ತಿನ ಒಂದು ಇಂಚು ಅರಣ್ಯ ಭೂಮಿಯನ್ನು ಕೊಡಬೇಕಾದರೆ ಕೇಂದ್ರ ಸರ್ಕಾರಕ್ಕೆ ಅದು ಹೋಗಬೇಕು ಎಂದು ಹೇಳುತ್ತಾರೆ. ಇತ್ತ ಹೆಣ್ಣೂ ಅಲ್ಲ ಅತ್ತ ಗಂಡೂ ಅಲ್ಲ ಶಿಖಂಡಿ ಇದ್ದ ಹಾಗೆ ಆ ಕೆಲಸ ನಡೆಯುತ್ತಾ ಇದೆ. ಅಂದರೆ ಅದು ಅತ್ತ ಫಾರೆಸ್ಟೂ ಅಲ್ಲ. ಇತ್ತ ಸಾಗುವಳಿ ಜಮೀನೂ ಅಲ್ಲ ಹಾಗೆ. ಆದುದರಿಂದ ತಾವು ಇದರ ಬಗ್ಗೆ ಒಂದು ನಿಲುವನ್ನು ತೆಗೆದುಕೊಂಡು ಅಂತಿಮ ತೀರ್ಮಾನ ಮಾಡಬೇಕೆಂದು ನಾನು ಕೇಳುವುದಕ್ಕೆ ಬಯಸುತ್ತೇನೆ.

ಇನ್ನು ರಿಜಿಸ್ಟ್ರೇಷನ್ ಬಗ್ಗೆ ಹೇಳುವುದಾದರೆ ಇವೊತ್ತಿನ ದಿವಸ ಸಬ್‌ರಿಜಿಸ್ಟ್ರಾರ್‌ರವರ ಆಫೀಸಿನಲ್ಲಿ ಏನು ರಿಜಿಸ್ಟ್ರೇಷನ್ ನಡೆಯುತ್ತಾ ಇದೆ ಅದನ್ನು ಯಾರಾದರೂ ಹೋಗಿ ಸರ್‌ಪ್ರೈಸ್ ವಿಸಿಟ್ ಮಾಡಿದ್ದಾರೆಯೋ? ಹಿಂದಿನ ಮಂತ್ರಿಗಳು ಸರ್‌ಪ್ರೈಸ್ ವಿಸಿಟ್ ಮಾಡಿ ಅವರು ಏನು ಹೊಡೆಯುತ್ತಿದ್ದರು ಅದನ್ನು ಹಿಡಿಯುತ್ತಿದ್ದರು. ಸರ್ಕಾರಕ್ಕೆ ಈ ರಿಜಿಸ್ಟ್ರೇಷನ್‌ನಿಂದ ಲಕ್ಷಾನುಗಟ್ಟಲೆ ಲುಕ್ಸಾನು ಆಗುವುದನ್ನು ಕಂಡುಹಿಡಿಯುತ್ತಿದ್ದೀರಾ? ಅದು ಹೇಗೆಂದರೆ ಅವರಿಗೆ ನೂರು ರೂಪಾಯಿ ಖರ್ಚು ಮಾಡಿದರೆ ಸಾಕು ಲಕ್ಷಾನುಗಟ್ಟಲೆ ಬೆಲೆ ಬಾಳತಕ್ಕಂಥಾ ಆಸ್ತಿಯನ್ನು ಸುಲಭ ಬೆಲೆಗೆ ಅಂದರೆ ಕಡಿಮೆ ಬೆಲೆಗೆ ರಿಜಿಸ್ಟ್ರೇಷನ್ ಮಾಡಿಸಿಕೊಳ್ಳುವುದರಿಂದ ಸರ್ಕಾರಕ್ಕೆ ಬರಬೇಕಾದ ಆದಾಯ ಕಡಿಮೆಯಾಗಿದೆ. ಸರ್ಕಾರಕ್ಕೆ ನಿಜವಾಗಿಯೂ ಬಹಳ ಲುಕ್ಸಾನು ಆಗುತ್ತಾ ಇದೆ ಎಂದು ಹೇಳುತ್ತೇನೆ. ತಾವು ಹೋಗಿ ಸರ್‌ಪ್ರೈಸ್ ವಿಸಿಟ್ ಮಾಡಿ ಅದನ್ನೆಲ್ಲಾ ಕಂಡುಹಿಡಿಯಬೇಕು. ತಾವು ಇನ್ನೂ ಯುವಕರು, ತಮಗೆ ಮುಂದೆ ಭವಿಷ್ಯ ಚೆನ್ನಾಗಿದೆ, ತಾವು ಬಹಳ ಬುದ್ಧಿವಂತರು, ಚೆನ್ನಾಗಿ ಕೆಲಸ ಮಾಡಬೇಕು. ಅವರವರ ಮನೆಗೆ ನುಗ್ಗಿ ಆ ಆಫೀಸರನ್ನು ಜಗ್ಗಾಡಿಸಿದರೆ ನಿಮಗೇ ಗೊತ್ತಾಗುತ್ತದೆ, ಸರ್ಕಾರಕ್ಕೆ ಅವರು ಎಷ್ಟು ಲುಕ್ಸಾನು

ಮಾಡುತ್ತಿದ್ದಾರೆ ಎನ್ನುವುದು ತಮಗೇ ಅರಿವಾಗುತ್ತದೆ. ಈ ಬಗ್ಗೆ ತಾವು ಗಮನ ಕೊಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಆರ್.ಆರ್ ರಿಕಾರ್ಡ್ ವಿಷಯ. ಈ ಬಗ್ಗೆ ರೈತರಿಗೆ ಏನಾದರೂ ಬೇಕಾದರೆ ತಾಲ್ಲೂಕ್ ಆಫೀಸಿಗೆ ಹೋಗಿ ತಿರುಗಬೇಕು. ಈ ಆರ್.ಆರ್ ಬುಕ್ ಅನ್ನು ತಹಶೀಲ್ದಾರರಿಗೆ ಕೊಟ್ಟಿದ್ದೀರಿ. ಅಲ್ಲಿ ತಾಲ್ಲೂಕು ಆಫೀಸಿಗೆ ಹೋಗಿ ಆ ರೈತ ಬರೆದುಕೊಂಡು ಬರಬೇಕು. ಯಾವನೋ ಒಬ್ಬ ವಿಲೇಜ್ ಅಕೌಂಟೆಂಟ್ ಭ್ರಷ್ಟಾಚಾರ ಮಾಡಿದ ಎಂದು ಈ ರೀತಿ ಮಾಡಿದ್ದೀರಿ. ಪ್ರತಿಯೊಬ್ಬ ರೈತನೂ ತನ್ನ ಕೆಲಸಗಳನ್ನು ಬಿಟ್ಟುಬಿಟ್ಟು ತಾಲ್ಲೂಕು ಆಫೀಸಿಗೆ ಹೋಗಬೇಕು ಎಂದರೆ ಬಹಳ ಕಷ್ಟವಾಗುತ್ತದೆ. ಈವಾಗ ಏನೋ ಪಟ್ಟಾ ಕೊಡುವ ವ್ಯವಸ್ಥೆ ಮಾಡಿದ್ದೀರಿ. ಆ ಕೆಲಸವನ್ನು ಇನ್ನೂ ತೀವ್ರವಾಗಿ ಮಾಡಬೇಕು ಅಥವಾ ವಿಲೇಜ್ ಅಕೌಂಟೆಂಟ್‌ಗೆ ಅಧಿಕಾರ ಕೊಟ್ಟರೂ ಒಳ್ಳೆಯದು. ಆತ ಆ ಹಳ್ಳಿಯಲ್ಲೇ ಇರುವುದರಿಂದ ರೈತಾಪಿ ಜನರಿಗೆ ತಿರುಗುವುದೂ ತಪ್ಪುತ್ತದೆ, ಹೆಚ್ಚು ಖರ್ಚು ಮಾಡಿಕೊಂಡು ಬರುವುದೂ ತಪ್ಪುತ್ತದೆ. ಪ್ರತಿಯೊಬ್ಬನೂ ತಾಲ್ಲೂಕು ಆಫೀಸಿಗೆ ಹೋಗಿ ಅದನ್ನು ಬರೆದುಕೊಂಡು ಬರಬೇಕಾದರೆ ಅವನಿಗೆ ಎಷ್ಟು ಖರ್ಚಾಗಬಹುದು, ಎಷ್ಟು ತೊಂದರೆಯಾಗಬಹುದು ಅದನ್ನು ಗಮನಿಸಿದರೆ ಒಳ್ಳೆಯದು. ಇದರ ಬಗ್ಗೆ ತಾವು ರೈತನಿಗೆ ಹೆಚ್ಚು ಖರ್ಚು ಇಲ್ಲದೆ, ಸುಲಭವಾಗಿ ದೊರೆಯುವ ಹಾಗೆ ಒಂದು ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ. ತಾವು ಈ ಮೊದಲು ಹೇಳಿದ ಹಾಗೆ ಪ್ರತಿಯೊಬ್ಬ ಗ್ರಾಮ ಲೆಕ್ಕಿಗನಿಗೂ ಆದಷ್ಟು ಬೇಗ ಆ ಗ್ರಾಮದಲ್ಲಿ ಮನೆಕಟ್ಟಿ ಕೊಡುವ ವ್ಯವಸ್ಥೆ ಮಾಡಿದರೆ ಪ್ರತಿಯೊಬ್ಬ ರೈತನಿಗೂ ಸಹಾಯವಾಗಬಹುದು. ಆ ಗ್ರಾಮ ಲೆಕ್ಕಿಗ ಯಾವಾಗಲೂ ಹಳ್ಳಿಯಲ್ಲೇ ಇದ್ದರೆ ರೈತನಿಗೆ ತುಂಬಾ ಸಹಾಯವಾಗುತ್ತದೆ. ಒಂದು ಕಾಲದಲ್ಲಿ ಶ್ಯಾನುಭೋಗ ಎಂದರೆ ಆ ಗ್ರಾಮದಲ್ಲಿರತಕ್ಕಂಥಾ ದೊಡ್ಡ ಮನುಷ್ಯರು ಕರೆದು ಊಟ ಹಾಕುತ್ತಿದ್ದರು. ಈವಾಗ ಯಾರೂ ಅವನಿಗೆ ಊಟವನ್ನೇ ಹಾಕುವುದಿಲ್ಲ, ಅವನ ಪಾಡು ಬಹಳ ಕಷ್ಟ, ಅದರಲ್ಲೂ ಕೂಡ ಯಾರಾದರೂ ಹಿಂದುಳಿದ ವರ್ಗದವರಾಗಲಿ ಅಥವಾ ಎಸ್.ಸಿ ಮತ್ತು ಎಸ್.ಟಿ ಗೇ ಸೇರಿದಂಥಾವರಾಗಲಿ ಜನ ಇದ್ದರೆ ಆ ಹಳ್ಳಿಯಲ್ಲಿ ಅವನು ಇರುವುದಕ್ಕೆ ಕಷ್ಟವಾಗುತ್ತದೆ. ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ ಈ ಆರ್.ಆರ್, ದಾಖಲೆಗೆ ತಾಲ್ಲೂಕ್ ಆಫೀಸಿನಲ್ಲಿ ತಹಶೀಲ್ದಾರರ ಒಳ ಇಡುವ ಬದಲು ವಿಲೇಜ್ ಅಕೌಂಟೆಂಟ್‌ಗೆ ಕೊಟ್ಟರೆ ಕೆಲಸ ತೀವ್ರವಾಗಿ ಆಗುತ್ತದೆ. ಆ ರೀತಿ ಮಾಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ಫ್ರಾಗ್‌ಮೆಂಟೇಷನ್ ಆಫ್ ಹೋಲ್ಡಿಂಗ್ಸ್ ಬಗ್ಗೆ ಒಂದು ಆಕ್ಟ್ ಮಾಡಿದ್ದೀರಿ. ಅದನ್ನು ಮಾಡಕೂಡದು. ಆದರಿಂದ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯವರಿಗಂತೂ ತುಂಬಾ ಅಪಾಯ ಇದೆ. ಅಲ್ಲಿ ದೊಡ್ಡ ಜಮೀನ್ದಾರರು ಯಾರೂ ಇಲ್ಲ. ಎಲ್ಲರಿಗೂ ಕೂಡ ೧೦–೭೫ ಸೆಂಟ್ಸ್ ಇರುವುದೇ ಜಾಸ್ತಿ. ಯಾರಿಗಾದರೂ ಒಂದು ಎಕರೆ ಇದ್ದರೆ ಅವನೇ ದೊಡ್ಡವನು. ಅವನಿಗೆ ಈ ಫ್ರಾಗ್‌ಮೆಂಟೇಷನ್ ಆಫ್ ಹೋಲ್ಡಿಂಗ್ಸ್‌ನಿಂದ ನೇರವಾಗಿ ಅಪಾಯ ಇದೆ. ಬಾಕಿಯವರಿಗೂ ಅಪಾಯ ಇದೆ. ಅದು ಹೇಗೆಂದರೆ ತನಗೆ ಹುಟ್ಟಿದ ಹೆಣ್ಣು ಮಗಳಿಗೆ ಏನಾದರೂ ಅಲ್ಪಸ್ವಲ್ಪ ದಾನ ಕೊಡೋಣ ಎಂದರೆ ಈ ಫ್ರಾಗ್‌ಮೆಂಟೇಷನ್ ಆಫ್ ಹೋಲ್ಡಿಂಗ್ಸ್ ಪ್ರಕಾರ ಕೊಡುವ ಹಾಗಿಲ್ಲ. ನಮ ಕಡೆಯಲ್ಲಿ ವರ್ಷಕ್ಕೆ ೩ ಬೆಳೆ ಬೆಳೆಯುವುದರಿಂದ ಅಲ್ಲಿರತಕ್ಕಂಥಾ ಜಮೀನಿಗೆ ತುಂಬಾ ವ್ಯಾಲ್ಯೂಯೇಷನ್ ಇದೆ. ಆದುದರಿಂದ ಇದರ ಬಗ್ಗೆ ತಾವು ಸೂಕ್ಷ್ಮವಾದ ಬದಲಾವಣೆ ಮಾಡಬೇಕು ಎಂದು ಮಾನ್ಯ ಅಧ್ಯಕ್ಷರ ಮುಖಾಂತರ ತಮ್ಮನ್ನು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ಜಿಲ್ಲೆಯಲ್ಲಿ ಅತಿವೃಷ್ಟಿ ಮತ್ತು ಅನಾವೃಷ್ಟಿ ಆಗಾಗ್ಗೆ ಬರುತ್ತಲೇ ಇದೆ, ಇದಕ್ಕೆ ಒಂದು ಖಾಯಂ ಪರಿಹಾರ ಇಲ್ಲ, ಅದರ ಬಗ್ಗೆ ಏನಾದರೂ ಖಾಯಂ ಪರಿಹಾರ ಮಾಡುವುದಕ್ಕೆ ಕಂಡು ಹಿಡಿಯಬೇಕು ಎಂದು ಹೇಳುತ್ತೇನೆ. ಶಿವಮೊಗಾ ಜಿಲ್ಲೆಯ ಸುಮಾರು ೭೫ ಗ್ರಾಮಗಳು ರೈನ್ ಷಾಡೋ ಏರಿಯಾ ಆಗಿದೆ. ಅಲ್ಲಿ ಹೆಚ್ಚು ಮಳೆ ಬೀಳುವುದೇ ಇಲ್ಲ. ಅದು ಒಳ್ಳೇ ಸಮಯದಲ್ಲಿ ಕೈಕೊಟ್ಟು ಬಿಡುತ್ತದೆ. ಅದು ಒಳ್ಳೆ ಹೂವು ಬಿಡುವ ಕಾಲದಲ್ಲಿ ಕೈಕೊಡುತ್ತದೆ ಇಲ್ಲವೇ ಕೊನೆಯಲ್ಲಿ ಕೈಕೊಡುತ್ತದೆ. ಅದಕ್ಕೋಸ್ಕರವಾಗಿ ಇದಕ್ಕೆ ಒಂದು ಖಾಯಂಪರಿಹಾರ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಆ ಬಗ್ಗೆ ಖಾಯಂಪರಿಹಾರ ಮಾಡದೇ ಹೋದರೆ ಆ ರೈತರು ಸರ್ಕಾರದ ಕಂದಾಯವಾಗಲಿ ಅಥವಾ ತೆರಿಗೆಯಾಗಲಿ ಕೊಡುವುದಕ್ಕೆ ಕಷ್ಟವಾಗುತ್ತದೆ. ಆದುದರಿಂದ ಅಂಥಾ ಜಾಗಗಳಲ್ಲಿ ಬೋರ್‌ವೆಲ್‌ಗಳನ್ನು ತೆಗೆಸುವುದಾಗಲಿ ಅಥವಾ ಸ್ಪ್ರಿಂಕ್ಲಿಂಗ್ ತೆಗೆಸುವುದಾಗಲಿ ಕಾರ್ಯಕ್ರಮ ಹಾಕಿಕೊಂಡು ಕೆಲಸ ಮಾಡಬೇಕು.

ಇನ್ನು ಮಾನ್ಯ ಮಂತ್ರಿಗಳಾದ ಶ್ರೀ ಕಸಬೆಯವರ ಇಲಾಖೆ ಬಗ್ಗೆ ಒಂದೇ ಒಂದು ಮಾತನ್ನು ಹೇಳಬಯಸುತ್ತೇನೆ. ಅದೇನೆಂದರೆ ಮಾನ್ಯ ಮಂತ್ರಿಗಳಾದ ಕಸಬೆಯವರು ದೇವಸ್ಥಾನಗಳಲ್ಲಿ ಪೂಜೆ ಮಾಡುವವರಿಗೆ ಎಲ್ಲಾ ಕಡೆಯೂ ೧೮೦–೧೦೦ ರೂಪಾಯಿ ಸಂಬಳ ಕೊಡುತ್ತೇವೆಂದು ಆದರೆ ಇದುವರೆಗೂ ಮಾಡಿಲ್ಲಾ. ಅವರಿಗೆ ಇವೊತ್ತಿನ ದಿವಸ ೧೦–೧೦ ರೂಪಾಯಿ ಕೊಡುತ್ತಿದ್ದೀರಲ್ಲಾ ಅದರಿಂದ ಹೇಗೆ ಜೀವನ ಮಾಡುವುದಕ್ಕಾಗುತ್ತದೆ ಹೇಳಿ. ನೀವು ಅವರಿಗೆಲ್ಲಾ ೧೦೦–೧೦೦ ರೂಪಾಯಿ ಕೊಡುತ್ತೇವೆಂದು ಹೇಳಿಕೊಂಡು ತಿರುಗಿದಿರಲ್ಲಾ ಕೊಟ್ಟಿದ್ದೀರಾ? ಇವಾಗ ಅವರೆಲ್ಲಾ ನಮ್ಮನ್ನು ಕೇಳುತ್ತಿದ್ದಾರೆ, ಸ್ವಾಮಿ, ೧೦೦ ರೂಪಾಯಿಯನ್ನು ಯಾವಾಗ ಕೊಡಿಸುತ್ತೀರಾ ಎಂದು ಕೇಳುತ್ತಿದ್ದಾರೆ. ಆದುದರಿಂದ ಈ ಸಂದರ್ಭದಲ್ಲಿ ತಮ್ಮನ್ನು ಕೇಳಿಕೊಳ್ಳುವುದೇನೆಂದರೆ ತಾವು ಅವರಿಗೆಲ್ಲಾ ೧೦೧–೧೦೦ ರೂಪಾಯಿ ಕೊಡುತ್ತೇವೆಂದು ಹೇಳಿದಿರಲ್ಲಾ ಅದನ್ನು ಯಾವಾಗ ಕೊಡುತ್ತೀರಾ ಎಂದಿನಿಂದ ಮಾಡುತ್ತೀರಾ ದಯವಿಟ್ಟು ಅದನ್ನಾದರೂ ಹೇಳಿ ಸ್ವಾಮಿ. ಇನ್ನು ಈ ದೇವಸ್ಥಾನದ ಸಂಬಂಧ ವಿಚಾರವಾಗಿಯೇ ಹೇಳಬೇಕಾದರೆ ಬೆಂಗಳೂರು ನಗರದಲ್ಲಿ ಹಾಗೂ ಇನ್ನು ನಗರಗಳಲ್ಲಿ ದೇವಸ್ಥಾನಕ್ಕೆ ಸೇರಿದಂಥಾ ಅನೇಕ ಸ್ವತ್ತುಗಳು ಇವೆ. ಇದನ್ನು ಯಾರು ಅನುಭವಿಸಿಕೊಂಡು ಬರುತ್ತಿದ್ದಾರೊ ಅವರಿಗೆ ಪರಿಹಾರ ಕೊಟ್ಟು ನೀವು ತೆಗೆದುಕೊಳ್ಳಬೇಕು. ಏತಕ್ಕೆಂದರೆ ಲಕ್ಷಾಂತರ ರೂಪಾಯಿ ಬೆಲೆ ಬಾಳತಕ್ಕಂಥಾ ಆಸ್ತಿಗಳನ್ನು ಕಡಿಮೆ ಬೆಲೆಯಲ್ಲಿ ಅಂದರೆ ತಿಂಗಳಿಗೆ ೨೫–೩೦ ರೂಪಾಯಿ ಬಾಡಿಗೆ ಫಿಕ್ಸ್ ಮಾಡಿಕೊಂಡು ಬಹಳ ಕಾಲದಿಂದ ಇವರು ಅನುಭವಿಸಿಕೊಂಡು ಬರುತ್ತಿದ್ದಾರೆ. ಇದರಿಂದ ದೇವಸ್ಥಾನದ ಉತ್ಪತ್ತಿ ಬಹಳ ಕಡಿಮೆಯಾಗಿರುವುದೂ ಅಲ್ಲದೆ ಇವರುಗಳು ಬಹಳ ಸುಖವನ್ನು ಅನುಭವಿಸಿಕೊಂಡು ಬರುತ್ತಿದ್ದಾರೆ. ಇದನ್ನು ತಪ್ಪಿಸಲು ಹಾಗೂ ದೇವಸ್ಥಾನದ ಉತ್ಪತ್ತಿಯನ್ನು ಹೆಚ್ಚಿಸಲು ಅದನ್ನೆಲ್ಲಾ ನೀವು ತೆಗೆದುಕೊಂಡು ಈಗ ಯಾವ ರೀತಿ ಬಾಡಿಗೆ ಇದೆಯೋ ಅದನ್ನು ನೋಡಿ ಸರಿಯಾದ ರೀತಿಯಲ್ಲಿ ಬಾಡಿಗೆ ಫಿಕ್ಸ್ ಮಾಡುವ ಹಾಗೆ ಮಾಡಬೇಕು. ಇದರಿಂದ ದೇವಸ್ಥಾನದ ಉತ್ಪತ್ತಿಯೂ ಹೆಚ್ಚುತ್ತದೆ, ಇದನ್ನು ತಾವು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಈ ಸ್ವತ್ತುಗಳನ್ನೆಲ್ಲಾ ತಾವು ತೆಗೆದುಕೊಂಡು, ಇದನ್ನು ಒಂದು ತಹಬಂದಿಗೆ ತಂದು ದೇವಸ್ಥಾನದ ಉತ್ಪತ್ತಿಯನ್ನು ಹೆಚ್ಚಿಸಿ ಆ ಉತ್ಪತ್ತಿಯಲ್ಲಿ ಶಾಲಾಕಾಲೇಜುಗಳು ನಿರ್ಮಾಣ ಮಾಡುವ ಹಾಗೆ ಮಾಡಬೇಕು. ಈಗ ತಿರುಪತಿ ದೇವಸ್ಥಾನದವರು ಯಾವ ರೀತಿಯಾಗಿ ಆ ಉತ್ಪತ್ತಿಯಲ್ಲಿ ಶಾಲಾಕಾಲೇಜುಗಳನ್ನು ನಡೆಸುತ್ತಿದ್ದಾರೋ ಅದೇ ರೀತಿಯಾಗಿ ಇಲ್ಲೂ ಏತಕ್ಕೆ ಮಾಡಬಾರದು ? ಇಲ್ಲಿ ಬರತಕ್ಕಂಥಾ ದೇವಸ್ಥಾನದ ಉತ್ಪತ್ತಿಯಲ್ಲಿ ಶಾಲಾಕಾಲೇಜುಗಳನ್ನು ಏತಕ್ಕೆ ಕಟ್ಟಬಾರದು. ತಮಗೆ ಹೇಳಬೇಕಾದರೆ ನಮ್ಮ ರಾಜ್ಯದಲ್ಲಿ ಸವದತ್ತಿ ಎಲ್ಲಮ್ಮನ ದೇವಸ್ಥಾನ ಇದೆ. ಅದರಲ್ಲಿ ಉತ್ಪತ್ತಿ ಬಹಳ ಚೆನ್ನಾಗಿದೆ ಅದರಲ್ಲಿ ಬರತಕ್ಕಂಥಾ ಉತ್ಪತ್ತಿಯನ್ನು ತೆಗೆದುಕೊಂಡು ಒಳ್ಳೆಯ ಕೆಲಸಕ್ಕಾಗಿ ಅಂದರೆ ಶಾಲಾಕಾಲೇಜು ಕಟ್ಟಡಕ್ಕಾಗಲಿ. ಒಂದು ಹೈಸ್ಕೂಲ್ ನಿರ್ಮಾಣ ಮಾಡುವುದಾಗಲಿ ಇಂಥಾ ಒಳ್ಳೆಯ ಕೆಲಸಗಳಿಗೆ ಏತಕ್ಕೆ ಉಪಯೋಗಿಸಬಾರದು ಸ್ವಾಮಿ ? ಇದರ ಬಗ್ಗೆ ತಾವು ಪರಿಶೀಲನೆ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಕೊನೆಯದಾಗಿ ಒಂದೇ ಒಂದು ವಿಚಾರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈಗ ಮುಸಲ್ಮಾನರ ಆಸ್ತಿಪಾಸ್ತಿಗಳ ಬಗ್ಗೆ ಒಂದು ವಕ್ಫ್ ಬೋರ್ಡ್ ಅಂತ ಮಾಡಿದ್ದೀರಿ. ಅದೇ ರೀತಿಯಾಗಿ ನಮ್ಮ ಹಿಂದೂ ದೇವಸ್ಥಾನಗಳ ಆಸ್ತಿಪಾಸ್ತಿ ಬಗ್ಗೆ ಒಂದು ಬೋರ್ಡ್ ಏತಕ್ಕೆ ಮಾಡಬಾರದು ಸ್ವಾಮಿ? ಹಾಗೆ ಮಾಡಿದರೆ ಇವತ್ತಿನ ದಿವಸ ನಮ್ಮ ಅನೇಕ ಹಿಂದೂ ದೇವಸ್ಥಾನಗಳು ಏನು ದುರಸ್ತಾಗಿವೆ ಅದನ್ನು ಉದ್ಧಾರ ಮಾಡಬಹುದು, ಅದರ ಬಗ್ಗೆ ತಾವು ಒಂದು ಕಾರ್ಯಕ್ರಮ ಹಾಕಿಕೊಳ್ಳಬೇಕು ಎಂದು ಹೇಳುತ್ತೇನೆ. ವಕ್ಫ್ ಬೋರ್ಡ್ ರೀತಿ ಕೆಲಸ ಮಾಡುವ ಹಾಗೆ ಈ ಹಿಂದೂ ದೇವಸ್ಥಾನಗಳ ಬಗ್ಗೆಯೂ ಕೆಲಸ ಮಾಡಿದರೆ ಅನೇಕ ದೇವಸ್ಥಾನಗಳನ್ನು ಮೇಲಕ್ಕೆತ್ತುವುದಕ್ಕೆ ಆಸ್ಪದವಾಗುತ್ತದೆ. ಮತ್ತು ಅವುಗಳ ಉತ್ಪತ್ತಿಯನ್ನು ಸಹ ಜಾಸ್ತಿ ಮಾಡುವುದಕ್ಕೆ ಅನುಕೂಲವಾಗುತ್ತದೆ. ತಾವು ಈಗ ಅನೇಕ ಮಠಗಳ ಆಸ್ತಿಗಳನ್ನು ತೆಗೆದುಕೊಂಡು ಅದಕ್ಕೆ ಪರಿಹಾರ ಕೊಡುತ್ತಿದ್ದೀರಿ. ಪರಿಹಾರವನ್ನು ಏಕಗಂಟಿನಲ್ಲಿ ಕೊಟ್ಟಿಲ್ಲ. ಮೇಲೆ ಅವಕ್ಕೆ ಎಷ್ಟು ಪರಿಹಾರ ಕೊಡಬೇಕೋ ಅಷ್ಟು ಕೊಡುತ್ತಾ ಇಲ್ಲ. ತಮಗೆ ಈ ಸಂದರ್ಭದಲ್ಲಿ ಹೇಳಬೇಕಾದರೆ ನಮ್ಮ ಕಡೆ ಭೀಮಸೇನ ಮುತ್ತುಂಗ ಮಠ ಅನ್ನುವುದು ಇತ್ತು. ಆ ಮಠಕ್ಕೆ ಸಾವಿರಾರು ಎಕರೆ ಜಮೀನು ಇತ್ತು. ಅದನ್ನು ತಾವು ತೆಗೆದುಕೊಂಡು ಅವರಿಗೆ ೫ ಸಾವಿರ ರೂಪಾಯಿ ಪರಿಹಾರ ಕೊಟ್ಟಿದ್ದೀರಿ. ಈ ೫ ಸಾವಿರ ರೂಪಾಯಿ ಅವರು ತೆಗೆದುಕೊಂಡು ಅಷ್ಟರಲ್ಲಿ ಏನು ಕೆಲಸ ಮಾಡುವುದಕ್ಕೆ ಆಗುತ್ತದೆ. ಅಷ್ಟು ದುಡ್ಡಿನಲ್ಲಿ ಅವರ ಕೆಲಸಗಳನ್ನು ನಡೆಸು

ವುದಕ್ಕಾಗುತ್ತದೆಯೋ? ಅವೆಲ್ಲವನ್ನೂ ಸಹ ಸರಿಯಾಗಿ ಲೆಕ್ಕ ಹಾಕಿ ನೋಡಬೇಕು. ತಾವು ಇದನ್ನು ವ್ಯತ್ಯಾಸ ಪರಿಶೀಲಿಸಿ ಅವರಿಂದ ತಾವು ತೆಗೆದುಕೊಂಡಂಥಾ ಜಮೀನಿಗೆ ಕೊಟ್ಟಿರತಕ್ಕಂಥಾ ಪರಿಹಾರ ಸರಿಯೋ ಅನ್ನುವುದನ್ನು ಯೋಚನೆ ಮಾಡಿ, ಆ ಜಮೀನಿಗೆ ಸರಿಯಾದ ಪರಿಹಾರ ಕೊಡಬೇಕು ಎಂದು ಹೇಳಿ, ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಬಿ. ಹೆಗೆರೆ (ಚಿಕ್ಕೋಡಿ).—ಮಾನ್ಯ ಅಧ್ಯಕ್ಷರೇ, ಕಂದಾಯ ಇಲಾಖೆ ಬಗ್ಗೆ ನಾನು ಕೆಲವೊಂದು ಸಂಗತಿಗಳನ್ನು ಹೇಳಬಯಸುತ್ತೇನೆ ಜೊತೆಗೆ ಕೆಲವು ಸಲಹೆಗಳನ್ನೂ ಸಹ ಮಾಡಬಯಸುತ್ತೇನೆ. ಕಂದಾಯ ಇಲಾಖೆ ಏನು ಇದೆ ಇದು ನಮ್ಮ ದೇಶದಲ್ಲಿ ತಾಯಿ ಇಲಾಖೆ, ಇದು ಒಂದು ದೊಡ್ಡ ಇಲಾಖೆ. ಈ ಕಂದಾಯ ಇಲಾಖೆ ಸರಿಯಾಗಿ ನಡೆದರೆ ನಮ್ಮ ರಾಜ್ಯದ ಆಡಳಿತ ಸರಿಯಾಗಿ ನಡೆಯುತ್ತದೆ. ಈ ಕಂದಾಯ ಇಲಾಖೆಯಲ್ಲಿ ಏನಾದರೂ ಲೋಪದೋಷಗಳು ಕಂಡುಬಂದರೆ ಎಲ್ಲದರಲ್ಲೂ ಕೂಡ ಲೋಪದೋಷಗಳು ಕಂಡುಬರುತ್ತದೆ. ಇಂಥಾ ಒಂದು ವಿಶೇಷವಾದ ಪ್ರಸಂಗ ಇದರಲ್ಲಿ ಇರುವುದರಿಂದ ನಮ್ಮ ಹಿಂದಿನ ಸರ್ಕಾರ ಪ್ರಗತಿಪರವಾದ ಹೆಜ್ಜೆ ಇಟ್ಟು ನಮ್ಮ ರಾಜ್ಯದಲ್ಲಿ ಮಹತ್ವದ ಕ್ರಾಂತಿಕಾರಕವಾದ ಭೂಸುಧಾರಣೆಯನ್ನು ಜಾರಿಗೆ ತರುವುದಕ್ಕೆ ಒಂದು ಕಾನೂನು ಮಾಡುವುದಕ್ಕೆ ಸಾಧ್ಯವಾಯಿತು. ನಮ್ಮ ದೇಶದಲ್ಲಿ ಈ ಬಗ್ಗೆ ಉತ್ತಮವಾದ ಒಂದು ಕಾನೂನನ್ನೇ ಮಾಡಿದರು. ಅದೇ ರೀತಿಯಾಗಿ ಈಗಿನ ಸರ್ಕಾರದವರು ಬಹಳ ಮುತುವರ್ಜಿ ವಹಿಸಿ ಈ ಕೆಲಸವನ್ನು ಆದಷ್ಟು ಬೇಗ ಮುಗಿಸಬೇಕೆಂದು ಪ್ರಯತ್ನ ಮಾಡಿದೆ. ಅದಕ್ಕಾಗಿ ಹಿಂದಿನ ಸರ್ಕಾರಕ್ಕೂ ಮತ್ತು ಈಗಿನ ಸರ್ಕಾರಕ್ಕೂ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇನ್ನೊಂದು ಇದರಲ್ಲಿ ವಿಶೇಷವಾದ ಸಂಗತಿ ಏನೆಂದರೆ ಈ ಕಿರುಹೊತ್ತಿಗೆಯಲ್ಲಿ ಇದರ ಬಗ್ಗೆ ಮಾನ್ಯ ಮಂತ್ರಿಗಳು ೧-೧-೧೯೭೫ ರಿಂದ ೧೯೭೭ರ ವರೆಗೆ ಎಷ್ಟು ಕೇಸುಗಳು ಇತ್ಯರ್ಥವಾಗಿದೆ ಇನ್ನು ಎಷ್ಟು ಕೇಸುಗಳು ಇವೆ ಈ ಬಗ್ಗೆ ಏನೇನು ಕೆಲಸ ಆಗಿದೆ ಅನ್ನುವುದರ ಬಗ್ಗೆ ಅಂಕಿಸಂಖ್ಯೆಗಳನ್ನು ಕೊಟ್ಟಿದ್ದಾರೆ. ಈ ಪೀರಿಯಡ್‌ನಲ್ಲಿ ನಾವು ಹೆಚ್ಚಾಗಿ ಕಾರ್ಯ ಮಾಡಿದ್ದೇವೆ ಎನ್ನುವ ಅರ್ಥದಲ್ಲಿ ಅದನ್ನು ಅವರು ತೋರಿಸಿದ್ದಾರೆ. ಆದರೆ ಹೆಚ್ಚಾಗಿ ಏನೂ ಮಾಡಿಲ್ಲ. ಅದು ಹೆಚ್ಚಿಗೆಯೂ ಆಗುವುದಿಲ್ಲ. ಈ ಪ್ರಕಾರ ನೋಡಿದರೆ ಪರ್ಸೆಂಟೇಜ್ ಸಹ ಕಡಿಮೆ ಇದೆ, ೧೦೦ ಟ್ರಿಬ್ಯೂನಲ್‌ಗಳನ್ನು ಹೆಚ್ಚು ಮಾಡಿ, ಸಾಧನೆಯಲ್ಲೂ ಕೂಡ ಹೆಚ್ಚು ಮಾಡಿದ್ದೇವೆ ಎಂದು ಹೇಳುವುದರಲ್ಲಿ ಏನೂ ಅರ್ಥವಿಲ್ಲ. ಇಲ್ಲಿ ೩ ವಿಧವಾದ ಸಂಖ್ಯೆಗಳನ್ನು ಹೇಳಿದ್ದಾರೆ. ಒಂದನೆಯದು ಪ್ರೋಗ್ರೆಸ್ ಅಚೀವ್ಡ್ ಅಪ್‌ಟು ೩೧-೧೨-೧೯೭೬, ಪ್ರೋಗ್ರೆಸ್ ಅಚೀವ್ಡ್ ಅಪ್‌ಟು ಡಿಸೆಂಬರ್ ೧೯೭೭, ಪ್ರೋಗ್ರೆಸ್ ಅಚೀವ್ಡ್ ಡ್ಯೂರಿಂಗ್ ದಿ ಪೀರಿಯಡ್ ೧-೧-೧೯೭೭ ಎಂದು ಹೇಳಿ ೩ ಸಂಖ್ಯೆಗಳನ್ನು ಕೊಟ್ಟಿದ್ದಾರೆ. ನಾವು ಹೆಚ್ಚಾಗಿ ಕೆಲಸಮಾಡಿದ್ದೇವೆ ಎನ್ನುವ ಉದ್ದೇಶ ಇದರಲ್ಲಿದೆ. ಇದು ಸರಿಯಲ್ಲ. ಆ ರೀತಿ ಅಂಕಿಸಂಖ್ಯೆಗಳನ್ನು ತೋರಿಸಿದರೂ ಕೂಡ ಇದರಲ್ಲಿ ಹೆಚ್ಚಾಗಿ ಮಾಡಿರುವುದು ಏನೂ ಇಲ್ಲ. ಅದಾದಮೇಲೆ ಇಲ್ಲಿ ಸೆಕ್ಷನ್ ೪೮(ಎ) ಪ್ರಕಾರ ಅರ್ಜಿ ಸಲ್ಲಿಸಿದ್ದು, ಕೊನೆಗೆ ನಿಕಾಲಿ ಆಗಿರುವ ಬಗ್ಗೆ ಅದನ್ನು ಅಂಕಿಸಂಖ್ಯೆಗಳ ಮೂಲಕ ತೋರಿಸಿದ್ದಾರೆ. ಇದರಲ್ಲಿ ರೈತರ ವಿರುದ್ಧ ಎಷ್ಟು ಕೇಸ್ ನಿಕಾಲ್ ಆಗಿವೆ, ರೈತರಿಗೆ ಅನುಕೂಲಕರವಾಗಿ ಎಷ್ಟು ಕೇಸುಗಳು ಆಗಿವೆ ಎನ್ನುವಂಥ ಅಂಕಿಸಂಖ್ಯೆಗಳನ್ನು ತೋರಿಸಿದ್ದಾರೆ, ಇಲ್ಲಿ ಹೇಳಿರುವಂತೆ ೮,೦೯,೦೭೪ ಅರ್ಜಿಗಳು ನಿಕಾಲ್ ಆಗಿವೆ. ಇದರಲ್ಲಿ ೪,೭೩,೭೦೨ ಕೇಸ್‌ಗಳು ಅರ್ಜಿದಾರರ ಪರವಾಗಿ ನಿಕಾಲ್ ಆಗಿವೆಯೆಂದು ಕೊಟ್ಟಿದ್ದಾರೆ. ಅಂದರೆ ಇದರ ಅರ್ಥ ೩,೩೫,೮೭೭ ಅರ್ಜಿದಾರರ ವಿರುದ್ಧ ಕೇಸ್‌ಗಳು ನಿಕಾಲ್ ಆಗಿವೆ. ಮಾನ್ಯ ಮಂತ್ರಿಯವರ ಗಮನಕ್ಕೆ ನಾನು ಇದನ್ನು ಹೇಳಬಯಸುತ್ತಿದ್ದೇನೆ, ಇನ್ನು ಏನು ರೈತರ ವಿರುದ್ಧ ನಿಕಾಲಿಯಾಗಿವೆ ಇವೆಲ್ಲಾ ಹೆಚ್ಚಾಗಿ ಸಣ್ಣ ರೈತರ ವಿರುದ್ಧ ನಿಕಾಲಿ ಆಗಿದೆ, ನಾನು ಈ ಬಗ್ಗೆ ಇನ್ನೂ ಡೀಟೈಲ್ ಆಗಿ ಹೇಳುತ್ತೇನೆ. ಸರ್ಕಾರಕ್ಕೆ ಈ ವಿಷಯವಾಗಿ ನಿಜವಾದ ತಿಳುವಳಿಕೆ ಕೊಡಬಯಸುತ್ತೇನೆ. ಅಲ್ಲಿ ನಡೆದಿರತಕ್ಕಂಥ ನಿಜವಾದ ಪರಿಸ್ಥಿತಿಯನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ಈಗ ರೈತರು ಎಂದಾಕ್ಷಣ ಒಂದೇ ರೀತಿಯ ರೈತರು ಎಂದು ಹೇಳುವುದಕ್ಕೆ ಬರುವುದಿಲ್ಲ. ಈ ಗ್ರಾಮಾಂತರ ಪ್ರದೇಶದಲ್ಲಿ ಈ ಬಗ್ಗೆ ವಿಚಿತ್ರವಾದ ಪರಿಸ್ಥಿತಿ ಇದೆ, ಅಲ್ಲಿ ಆಸ್ತಿವಂತ ರೈತರೂ ಇದ್ದಾರೆ, ಅತಿ ಚಿಕ್ಕ ಭೂಮಿ ಅಥವಾ ಭೂಮಿ ಇಲ್ಲದೇ ಇರುವಂತಹ ರೈತರೂ ಸಹ ಇದ್ದಾರೆ. ಈ ಆಸ್ತಿವಂತ ರೈತರು ಯಾರಿದ್ದಾರೆ ಅವರಿಗೆ ಸಾಮಾನ್ಯವಾಗಿ ಭೂನ್ಯಾಯ ಮಂಡಲಿಗಳಲ್ಲಿ ಎಲ್ಲರಿಗೂ ನ್ಯಾಯ ದೊರೆತಿದೆ. ಏಕೆಂದರೆ ಈ ಆಸ್ತಿವಂತ ರೈತರು ಬಹಳ ಗಟ್ಟಿಮುಟ್ಟಾದ ಜನ. ಅವರು ತಮಗೆ ಬೇಕಾದಂತ ಗ್ರಾಮ

ರೆಕಾರ್ಡನ್ನು ತಮಗೆ ಬೇಕಾದಂತೆ ಯಾವ ರೀತಿಯಲ್ಲಿ ಮಾಡಿಕೊಳ್ಳಬೇಕೋ ಆ ರೀತಿಯಲ್ಲಿ ಎಲ್ಲಾ ಮಾಡಿಕೊಂಡಿದ್ದಾರೆ. ಆ ರಿಕಾರ್ಡನ್ನು ಅನುಸರಿಸಿ ಲ್ಯಾಂಡ್‌ಟ್ರಿಬ್ಯುನಲ್‌ಗಳಲ್ಲಿ ಅವರಂತೆಯೇ ನಿರ್ಣಯ ಕೊಟ್ಟಿದ್ದಾರೆ. ಅದರಲ್ಲಿ ಕೆಲವು ಅವರ ವಿರುದ್ಧವಾಗಿರಬೇಕು. ಆದರೆ ನಾನು ಇಲ್ಲಿ ಪ್ರಶ್ನೆ ಎತ್ತುತ್ತಿರುವುದು ಚಿಕ್ಕ ರೈತರ ಬಗ್ಗೆ. ಯಾವನಿಗೆ ೧ ಎಕರೆ ಅಥವಾ ಎರಡು ಎಕರೆ ಜಮೀನು ಇದೆಯೋ ಅಥವಾ ಏನೂ ಭೂಮಿ ಇಲ್ಲವೋ ಅಥವಾ ಯಾವನು ಭೂಮಾಲಿಕನ ಜಮೀನನ್ನು ಮಾಡುತ್ತಾ ಇದ್ದಾರೆ ಅವನ ಗತಿ ಏನಾಗಿದೆ ಎಂಬುದನ್ನು ತಾವು ಪರಿಶೀಲನೆ ಮಾಡಬೇಕಾಗಿದೆ. ಈ ಬಗ್ಗೆ ನಾನು ಕಂಡದ್ದು ಉಂಟು, ಕೇಳಿದ್ದು ಉಂಟು ಹಾಗೂ ಸ್ವತ: ಅನುಭವಕ್ಕೆ ಬಂದದ್ದು ಉಂಟು, ನಮ್ಮ ಭಾಗದಲ್ಲಿ ಏನಾಗಿಬಿಟ್ಟಿದೆ ಎಂದರೆ ಈ ಚಿಕ್ಕಚಿಕ್ಕ ಹಿಡುವಳಿದಾರರು ಯಾರಿದ್ದಾರೆ ಸಣ್ಣ ರೈತರು ಯಾರಿದ್ದಾರೆ ಅವರ ಹತ್ತಿರ ರೆಕಾರ್ಡ್ ಇಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಅವರು ೩೦-೪೦-೫೦ ವರ್ಷಗಳಿಂದ ಆ ಸಣ್ಣ ರೈತರು ಆ ಭೂಮಿಯಲ್ಲಿ ಕೆಲಸಮಾಡುತ್ತಾ ಇದ್ದರೂ ಕೂಡ ರೆಕಾರ್ಡ್‌ನಲ್ಲಿ ಅವರ ಹೆಸರು ಇಲ್ಲವೇ ಇಲ್ಲ. ಹಿಂದೆ ಏನಿತ್ತು ಎಂದರೆ ಬಾಂಬೆ ಆಕ್ಟ್ ಪ್ರಕಾರ ರೆಕಾರ್ಡ್‌ನಲ್ಲಿ ಅವರ ಹೆಸರನ್ನು ತೆಗೆಯಕೂಡದು ಅದನ್ನು ಕಡಿಮೆ ಮಾಡಕೂಡದು ಎಂದು ಇತ್ತು. ಆ ಪ್ರಕಾರ ಸರ್ಕಾರ ಕೂಡ ಆದೇಶ ಕೊಟ್ಟಿತ್ತು. ಆ ರೀತಿ ಅವರ ಹೆಸರುಗಳು ರೆಕಾರ್ಡ್ ಆಫ್ ರೈಟ್ಸ್‌ನಲ್ಲಿ ದಾಖಲಾಗಿತ್ತು. ಆದರೆ ೧೯೫೬-೫೭ರ ಮುಂದೆ ಅಥವಾ ನಮ್ಮಲ್ಲಿ ಈ ಭೂಸುಧಾರಣಾ ಕಾಯಿದೆ ೧೯೭೪ ರಲ್ಲಿ ಬಂದಾಗ ಆ ರೆಕಾರ್ಡ್ ಆಫ್ ರೈಟ್ಸ್‌ನಲ್ಲಿ ಇಂತಹ ಚಿಕ್ಕ ರೈತರ ಹೆಸರುಗಳನ್ನು ಕಡಿಮೆ ಮಾಡಿದ್ದಾರೆ ಅಂದರೆ ದಾಖಲೆಯಿಂದ ತೆಗೆದಿದ್ದಾರೆ, ಈ ಭೂ ಮಾಲೀಕರ ಶ್ರೀಮಂತವರ್ಗದವರ ಹೆಸರುಗಳನ್ನು ಸೇರಿಸಿದ್ದಾರೆ. ಈ ಚಿಕ್ಕ ರೈತರು, ಬಡರೈತರ ಹೆಸರನ್ನು ಸೇರಿಸಿದ್ದಾರೆ. ಅವರ ಹೆಸರು ರೆಕಾರ್ಡ್‌ನಲ್ಲಿ ಇದೆಯೋ ಇಲ್ಲವೋ, ಅದು ಕಂಟಿನ್ಯೂ ಆಗಿದೆಯೋ ಅಥವಾ ಇಲ್ಲವೋ ಎನ್ನತಕ್ಕಂಥ ವಿಚಾರ ಅವರಿಗೆ ಏನೂ ಗೊತ್ತಿಲ್ಲ, ಅವನಿಗೆ ಇಷ್ಟೇ ಸಮಾಧಾನ, ನಾನು ಈ ಭೂಮಿಯಲ್ಲಿ ಇದ್ದೇನೆ, ಭೂಮಿಯನ್ನು ಉಳುತ್ತಿದ್ದೇನೆ, ನಾವೂ ಒಬ್ಬ ರೈತ ಎಂದು. ಆದರೆ ದೊಡ್ಡ ದೊಡ್ಡ ಭೂ ಮಾಲೀಕರು ಸೇರಿಕೊಂಡು ಅವರ ಹೆಸರನ್ನು ಕಡಿಮೆ ಮಾಡಿದ್ದರಿಂದ, ಅವನಲ್ಲಿ ಯಾವುದೇ ರೆಕಾರ್ಡ್ ಇಲ್ಲದೇ ಇರುವುದರಿಂದ, ಅವನಲ್ಲಿ ಯಾವುದೇ ಒಂದು ಪಾವತಿ ರಸೀದಿ ಇಲ್ಲದೇ ಇರುವುದರಿಂದ ಈ ಭೂ ನ್ಯಾಯಮಂಡಲಿಗಳಲ್ಲಿ ಅವನಿಗೆ ಅತ್ಯಂತ ಅನ್ಯಾಯವಾಗಿದೆ, ನಮ್ಮ ರಾಜ್ಯದಲ್ಲಿ ಯಾವ ರೈತರಿಗೆ ಅನ್ಯಾಯವಾಗಿದೆ ಎಂಬುದನ್ನು ನೋಡಿದರೆ ಚಿಕ್ಕ ರೈತರಿಗೆ ಹೆಚ್ಚಾಗಿ ಅನ್ಯಾಯವಾಗಿದೆ, ಇವರೆಲ್ಲಾ ಇವತ್ತು ಸತ್ತೇ ಹೋಗಿದ್ದಾರೆ. ಈ ಒಂದು ಪ್ರಸಂಗದಲ್ಲಿ ಒಂದು ಮಾತನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ, ನಮ್ಮ ಹಿಂದಿನ ಸರ್ಕಾರದವರು ಈ ಭೂ ನ್ಯಾಯ ಮಂಡಲಿಯನ್ನು ರಚನೆ ಮಾಡಿರುವ. ನಮ್ಮ ದೇಶದಲ್ಲಿ ಇದನ್ನು ಬೇರೆ ಯಾವ ಸರ್ಕಾರವೂ ಮಾಡಿದಂತಾದ್ದಲ್ಲ. ಇದು ಪ್ರಾಮಾಣಿಕ ಜನರಿಂದ ಕೂಡಿದ ಭೂ ನ್ಯಾಯ ಮಂಡಲಿ ಆಗಬೇಕು, ಆಗ ಸರಿಯಾದ ನಿರ್ಣಯವಾಗುತ್ತದೆ ಎನ್ನುವ ಅರ್ಥದಲ್ಲಿ ಇದನ್ನು ಮಾಡಿದರು. ಈವರೆಗ ನಾನು ಆ ರೀತಿ ಕಲ್ಪನೆ ಮಾಡಿದ್ದೇನೆ. ಇಂತಹ ಕೇಸ್‌ಗಳನ್ನು ಕೋರ್ಟಿಗೆ ಒಯ್ಯದೇ ಭೂ ನ್ಯಾಯ ಮಂಡಲಿಗಳ ಕಡೆಯಿಂದ ಆ ಬಡ ರೈತರಿಗೆ ನ್ಯಾಯ ದೊರೆಯಬೇಕು ಎಂಬುದೇ ಅದರ ಉದ್ದೇಶ ಆದರೆ ನಮ್ಮ ದೇಶದಲ್ಲಿ ಅಂತಹ ಪ್ರಾಮಾಣಿಕ ಜನ ಸಿಕ್ಕಬೇಕಲ್ಲ, ಅಂತಹ ಪ್ರಾಮಾಣಿಕ ಜನರ ಕೊರತೆಯಿಂದ ಇವತ್ತು ಚಿಕ್ಕರೈತರಿಗೆಲ್ಲಾ ಅನ್ಯಾಯ ಉಂಟಾಗಿದೆ. ಈ ಪ್ರಾಮಾಣಿಕತನದಿಂದ ನೋಡುವಂತಹ ಜನ ನಮ್ಮ ದೇಶದಲ್ಲಿ ಸಿಕ್ಕಿದರೆ ಮಾತ್ರ ನಮ್ಮ ಹಿಂದಿನ ಸರ್ಕಾರದ ಧೋರಣೆ ಏನಿತ್ತು ಅವರೆಲ್ಲರಿಗೂ ಭೂ ನ್ಯಾಯಮಂಡಲಿಗಳಲ್ಲಿ ನ್ಯಾಯ ಒದಗಿಸಿಕೊಡಬೇಕು ಎನ್ನತಕ್ಕಂಥಾದ್ದು ಅದು ಪೂರ್ಣ ಆದೀತು. ಆದರೆ ನಮ್ಮೆಲ್ಲರ ದುರ್ಧೈವ. ಈ ಭೂ ನ್ಯಾಯಮಂಡಲಿಗಳಲ್ಲಿ ಎಲ್ಲೂ ಕೂಡ ಅವರಿಗೆ ನ್ಯಾಯ ದೊರೆತಿಲ್ಲ. ಅದು ಬರೀ ಕಾನೂನಿನಲ್ಲಿ ಮಾತ್ರ ಇದೆ. ಈ ಭೂ ನ್ಯಾಯಮಂಡಲಿಗಳನ್ನು ನೇಮಿಸುವ ಕಾಲಕ್ಕೆ ಒಂದು ಉದ್ದೇಶ ಇತ್ತು. ಈ ಕಾನೂನಿಗಿಂತ ವಾಸ್ತವ ಸ್ಥಿತಿ ಏನಿದೆಯೋ ಅದನ್ನು ನೋಡಿಕೊಂಡು ಈ ಭೂ ನ್ಯಾಯಮಂಡಲಿಗಳು ಕೆಲಸ ಮಾಡಬೇಕು ಮತ್ತು ನೈಜ ಪರಿಸ್ಥಿತಿಯನ್ನು ನಿರ್ಣಯವನ್ನು ಕೊಡಬೇಕು ಎನ್ನುವ ಒಂದು ಒಳ್ಳೆಯ ಉದ್ದೇಶವಿತ್ತು. ಆದರೆ ನಮ್ಮ ದುರ್ಧೈವದಿಂದ ಆ ರೀತಿ ನಡೆದಿಲ್ಲ. ಈ ಭೂ ನ್ಯಾಯ ಮಂಡಲಿಗಳಲ್ಲಿರತಕ್ಕಂಥ ಜನರೆಲ್ಲರೂ ಏನನ್ನು ನೋಡುತ್ತಾರೆ ಎಂದರೆ ರೆಕಾರ್ಡನ್ನು ನೋಡುತ್ತಾರೆ. ರೆಕಾರ್ಡ್‌ನಲ್ಲಿ ನನ್ನ ಹೆಸರು ಇದೆಯೇ ? ಇಲ್ಲ, ಹಾಗಾದರೆ ನೀನು ರೈತ ಅಲ್ಲ ಎಂದು ಅವರು ಹೇಳುತ್ತಾರೆ. ಈ ರೀತಿ ನಿರ್ಣಯವಾಗಿರುವುದನ್ನು ನಾನು ಬಹಳ ದುಃಖದಿಂದ ನೋಡುತ್ತಾ ಬಂದಿದ್ದೇನೆ, ಕೇಳುತ್ತಾ ಬಂದಿದ್ದೇನೆ, ಈ ಬಗ್ಗೆ ನಾನು ಸ್ವತಃ ಅನುಭವ ಪಡೆದಿದ್ದೇನೆ. ಮಾನ್ಯ ಮಂತ್ರಿಯವರು ಒಂದುಸಾರಿ, ಈ ರೈತರ ವಿರುದ್ಧ

ವಾದಂತಹ ಕೇಸುಗಳ ಬಗ್ಗೆ ವಿಚಾರಣೆ ಮಾಡಲು ಒಂದು ಸೆಲ್ ಮಾಡಿದ್ದೇವೆ ಎಂದು ಹೇಳಿದರು. ಅವರು ಎನ್‌ಕ್ವೈರಿ ಮಾಡುತ್ತಾರೆ ಎಂದು ಹೇಳಿದರು. ಆದರೆ ಕೊನೆಗೆ ನಿರ್ಣಯ ಕೊಡುವವರು ಯಾರು ? ಈ ಲ್ಯಾಂಡ್ ಟ್ರಿಬ್ಯುನಲ್‌ನವರೇ. ಈ ಭೂಶಾಸನದಲ್ಲಿ ಒಂದು ಕಡೆ ಈ ಲ್ಯಾಂಡ್ ಟ್ರಿಬ್ಯುನಲ್ ಆರ್ಡರ್ ಏನಿದೆ ಅದೇ ಫೈನಲ್ ಆರ್ಡರ್ ಎಂದು ಹೇಳುತ್ತಾರೆ. ಇನ್ನೊಂದು ಕಡೆ ಸರ್ಕಾರದವರು ಈ ಒಂದು ಸೆಲ್ಲನ್ನು ರಚನೆ ಮಾಡಿ ನಾವು ಅವರಿಗೆ ಸಹಾಯಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಸರ್ಕಾರದವರು ಯಾರಿಗೆ ಸಹಾಯ ಮಾಡುತ್ತಿದ್ದಾರೆ ? ಅವರು ಇಲ್ಲಿಯವರೆಗೆ ಯಾರಿಗಾದರೂ ಸಹಾಯ ಮಾಡಿದ್ದು ನಮಗೆ ಇನ್ನೂ ಕಂಡುಬಂದಿಲ್ಲ. ಈ ಬಗ್ಗೆ ಯಾರಾದರೂ ಎನ್‌ಕ್ವೈರಿ ಮಾಡಿದರೆ, ಮಾಹಿತಿ ತೆಗೆದುಕೊಂಡರೆ ಅದು ಮತ್ತೆ ಹೈಕೋರ್ಟಿಗೆ ಹೋಗಬೇಕು. ಅವನಲ್ಲಿ ವಾದ ಮಾಡತಕ್ಕಂಥ ಸಾಮರ್ಥ್ಯ ಇಲ್ಲ ಎಂದರೆ ಅದು ಮತ್ತೆ ಟ್ರಿಬ್ಯುನಲ್‌ಗೆ ಬರಬೇಕು, ೪ ಜನರು ಬರುವಂತಹ ಒಂದು ಟ್ರಿಬ್ಯುನಲ್ ಅದನ್ನು ಮತ್ತೆ ಪರಿಶೀಲನೆ ಮಾಡಬೇಕು, ಮತ್ತು ನಿರ್ಣಯ ತೆಗೆದುಕೊಳ್ಳಬೇಕು. ಅವನ ಹೆಸರಿನಲ್ಲಿ ಯಾವುದೇ ರೆಕಾರ್ಡ್ ಇಲ್ಲಾ ಅವನ ಹೆಸರಿನಲ್ಲಿ ಯಾವುದೆ ಪಾವತಿ ಇಲ್ಲ, ರೆಕಾರ್ಡ್ ಆಫ್ ರೈಟ್ಸ್‌ನಲ್ಲಿ ಅವನ ಹೆಸರು ದಾಖಲಾಗಿಲ್ಲ, ಆದ್ದರಿಂದ ಅವನು ರೈತ ಆಗಲಾರ ಎಂದು ಮತ್ತೆ ನಿರ್ಣಯ ತೆಗೆದುಕೊಳ್ಳುತ್ತಾರೆ. ಇದಕ್ಕೆ ಏನು ಮಾಡಬೇಕು ? ಈ ವಿಚಾರದಲ್ಲಿ ನಾನು ಮಾನ್ಯ ಮಂತ್ರಿಯವರನ್ನು ಕೇಳಿಕೊಳ್ಳುವುದೇನೆಂದರೆ, ನಮ್ಮ ರಾಜ್ಯದಲ್ಲಿ ಯಾರಾದರೂ ಪ್ರಾಮಾಣಿಕ ಜನ ಸಿಕ್ಕಿದರೆ ಈ ಬಡರೈತನ ಬಗ್ಗೆ ಕಳಕಳಿ ಇರತಕ್ಕಂಥ ಜನ ದೊರೆತರೆ ಅಂತಹ ಜನರನ್ನು ಹಾಕಿ ಈ ಭೂ ನ್ಯಾಯ ಮಂಡಲಿಯನ್ನು ಮಾಡಿರಿ. ಹೈಕೋರ್ಟಿಗೆ ಹೋಗಿ ತಿರುಗಿ ಬರತಕ್ಕಂಥ ಕೇಸ್‌ಗಳ ಬಗ್ಗೆ ನಿರ್ಣಯ ತೆಗೆದುಕೊಳ್ಳಬೇಕಾದಂತಹ ಕಾಲದಲ್ಲಿ ಯಾರಾದರೂ ಪ್ರಾಮಾಣಿಕ ಜನರನ್ನು ಅಲ್ಲಿ ಹಾಕಿ. ಇಲ್ಲದೇಹೋದರೆ ಈ ವಿಚಾರ ನಿಮಗೇ ಬಿಟ್ಟದ್ದು. ನೀವು ಏನುಬೇಕಾದರೂ ಮಾಡಿಕೊಳ್ಳಿ. ಏಕೆಂದರೆ ನಾನು ನೋಡಿದಪ್ರಕಾರ ನಮ್ಮ ಈ ಭೂ ನ್ಯಾಯ ಮಂಡಲಿಗಳಲ್ಲಿ ಭ್ರಷ್ಟಾಚಾರ ವಿಪರೀತ ನಡೆಯಿತು. ಯಾವನಿಗೆ ಕಿಸೆಯಲ್ಲಿ ಒಂದು ಕಾಸೂ ಇರಲಿಲ್ಲವೋ ಅವನು ಇವತ್ತು ಲಕ್ಷಾಧೀಶನಾಗಿದ್ದಾನೆ. ಇವತ್ತು ಭೂನ್ಯಾಯ ಮಂಡಲಿಯಲ್ಲಿರತಕ್ಕಂಥ ಎಲ್ಲಾ ಸದಸ್ಯರ ಆಸ್ತಿಪಾಸ್ತಿಗಳನ್ನು ಜಪ್ತಿ ಮಾಡಿ. ಈ ಬಗ್ಗೆ ಇನ್‌ವೆಸ್ಟಿಗೇಷನ್ ಮಾಡಿ ಅವರ ಆಸ್ತಿ ಎಷ್ಟಿದೆ ಎಂಬುದನ್ನು ನೋಡಿ. ಮೊದಲು ಅವರ ಆಸ್ತಿ ಎಷ್ಟಿತ್ತು ಈಗ ಎಷ್ಟಿದೇ ಎಂಬುದನ್ನು ಸರ್ಕಾರದವರು ಈ ಕೂಡಲೇ ಎನ್‌ಕ್ವೈರಿ ಮಾಡಬೇಕು. ಈ ಚಿಕ್ಕ ರೈತರೆಲ್ಲರಿಗೂ ಸಹಾಯವಾಗಬೇಕು, ಅವರಿಗೆ ನ್ಯಾಯ ದೊರೆಯಬೇಕು, ಆದರೇ ಜಮೀನು ಮಾಲೀಕರಾಗಬೇಕು ಎನ್ನುವಂತಹ ಕಲ್ಪನೆಯನ್ನು ಇಟ್ಟುಕೊಂಡು ಸರ್ಕಾರದವರು ಈ ಭೂ ಶಾಸನವನ್ನು ಮಾಡಿದರು. ಆದರೆ ಅದು ಈಡೇರಿಲ್ಲ. ಈಗ ನಾನು ಅತ್ಯಂತ ಕಳಕಳಿಯಿಂದ ಹೇಳುತ್ತಿದ್ದೇನೆ, ಈಗ ಏನು ೩.೨೫೮೦೭ ಕೇಸುಗಳು ರೈತರ ವಿರುದ್ಧವಾಗಿದೆ ಅವರೆಲ್ಲಾ ೮೦ ಪರ್ಸೆಂಟ್ ಬಡರೈತರಿದ್ದಾರೆ.

೫–೦೦ ಪಿ. ಎಂ.

ಇವತ್ತು ಸುಮಾರು ೩,೨೨,೮೫೭ ಕೇಸುಗಳನ್ನು ಗೇಣಿದಾರರ ವಿರುದ್ಧ ಮಾಡಿದ್ದಾರೆ. ಇದರಿಂದ ಬಡವರಿಗೆ ತೊಂದರೆಯಾಗಿದೆ. ಸುಮಾರು ೩೦–೪೦ ವರ್ಷಗಳಿಂದ ಅವರ ಸ್ವಾಧೀನದಲ್ಲಿರುವಂತೆ ಭೂಮಾಲೀಕರು ಕಾಗದ ಪತ್ರಗಳನ್ನು ಸೃಷ್ಟಿ ಮಾಡಿದ್ದಾರೆ. ಆದರೆ ಸಿಜ ಪರಿಸ್ಥಿತಿಯಲ್ಲಿ ನಾವು ಹೇಳಬೇಕಾದರೆ ಅವರ ಹೆಸರು ಸುಮಾರು ೩೦–೪೦ ವರ್ಷಗಳಿಂದ ಇರುವುದಿಲ್ಲ. ಈ ಒಂದು ಕೆಲಸವನ್ನು ಗ್ರಾಮಲೆಕ್ಕಿಗರು ಮಾಡುತ್ತಾರೆ. ಇವತ್ತು ನಮ್ಮ ಸರ್ಕಾರದವರು ಭೂ ನ್ಯಾಯ ಮಂಡಲಿಗಳನ್ನು ಸ್ಥಾಪನೆ ಮಾಡಿದ ಉದ್ದೇಶವಿದ್ದರೂ ಏನೆಂದರೆ ಯಾರಿಗೆ ಅನ್ಯಾಯವಾಗಿದೆ ಅವರಿಗೆ ನ್ಯಾಯವನ್ನು ಒದಗಿಸಿಕೊಡುವ ಸಲುವಾಗಿ ಇಂತಹ ಭೂ ನ್ಯಾಯ ಮಂಡಲಿಗಳನ್ನು ಸ್ಥಾಪಿಸಲಾಯಿತು. ಆದರೆ ಅಲ್ಲಿ ಸರಿಯಾದ ರೀತಿಯಲ್ಲಿ ಕೆಲಸಕಾರ್ಯಗಳು ನಡೆಯುತ್ತಿಲ್ಲ. ಅಲ್ಲಿ ಅನ್ಯಾಯವಾಗಿದೆ. ರೈತರಿಗೆ ತೊಂದರೆಯಾಗುತ್ತಿದೆ ಲಂಚಗುಳಿತನ ಜಾಸ್ತಿಯಾಗಿದೆ ಆದ್ದರಿಂದ ಸರ್ಕಾರದವರು ಈ ಭೂ ನ್ಯಾಯ ಮಂಡಲಿಗಳ ಸದಸ್ಯರ ಪುನರ್ ಪರಿಶೀಲನೆ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಮತ್ತು ಗ್ರಾಮ ಲೆಕ್ಕಿಗರು ರೈತರ ರೆಕಾರ್ಡ್ಸ್ ಚೇಂಜ್ ಮಾಡಿದ್ದಾರೆ. ಇಲ್ಲದ ಸಲ್ಲದ ರೆಕಾರ್ಡ್‌ಗಳನ್ನು ಸೃಷ್ಟಿ ಮಾಡಿದ್ದಾರೆ.

ಒಬ್ಬ ಸದಸ್ಯರು.— ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಎಲ್ಲಾ ಲ್ಯಾಂಡ್ ಟ್ರಿಬ್ಯೂನಲ್ಸ್‌ಗಳೇ ಆ ರೀತಿ ಕೆಲಸ ಮಾಡುತ್ತಿಲ್ಲ. ಮತ್ತು ಎಲ್ಲಾ ಗ್ರಾಮ ಲೆಕ್ಕಿಗರು ಆ ರೀತಿಯ ಕೆಟ್ಟ ಕೆಲಸ ಮಾಡುತ್ತಿಲ್ಲ,

ಯಾವುದಾದರೂ ನಿರ್ದಿಷ್ಟವಾದ ಮಾಹಿತಿ ಇದ್ದರೆ ಮಾನ್ಯ ಸದಸ್ಯರು ಈ ಸದನದಲ್ಲಿ ಪ್ರಸ್ತಾಪ ಮಾಡ ಬಹುದು.

ಶ್ರೀ ಪಿ. ಪಿ ಹೆಗಡೆ.—ನಾನು ಎಲ್ಲಾ ಭೂ ನ್ಯಾಯ ಮಂಡಲಿಗಳು ಅನ್ಯಾಯ, ಭ್ರಷ್ಟಾಚಾರ ಮಾಡುತ್ತಿವೆ ಎಂದು ಹೇಳುತ್ತಿಲ್ಲ. ಹಾಗೆಯೇ ಎಲ್ಲಾ ಗ್ರಾಮ ಲೆಕ್ಕಿಗರು ಭ್ರಷ್ಟರು ಎಂದು ಹೇಳುತ್ತಿಲ್ಲ. ಅದರಲ್ಲಿ ಕೆಲವರು ಒಳ್ಳೆಯವರು ಇರಬಹುದು. ನಾನು ಹೇಳುವುದೇನೆಂದರೆ ಗ್ರಾಮ ಲೆಕ್ಕಿಗರು ಈ ರೀತಿ ಮಾಡುವುದರಿಂದ ಬಡವರಿಗೆ ನ್ಯಾಯ ದೊರೆಯುವುದಿಲ್ಲ. ಮತ್ತೊಂದು ವಿಷಯವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಸರ್ಕಾರದವರು ಈಗಾಗಲೇ ಲ್ಯಾಂಡ್ ಗ್ರ್ಯಾಂಟ್ ಕಮಿಟಿಗಳನ್ನು ನೇಮಕ ಮಾಡಿದ್ದಾರೆ. ಈ ಲ್ಯಾಂಡ್ ಗ್ರ್ಯಾಂಟ್ ಕಮಿಟಿಗಳನ್ನು ಮಾಡಿದ್ದರೂ ಸಹ ಭೂಮಿಯನ್ನು ಬಡವರಿಗೆ ಹಂಚುವ ವ್ಯವಸ್ಥೆಯನ್ನು ಮಾಡಿಲ್ಲವಾದ್ದರಿಂದ ಈ ಕೆಲಸವನ್ನು ಆದಷ್ಟು ಬೇಗ ಮಾಡಬೇಕೆಂದು ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಬಡವರಿಗೆ ನ್ಯಾಯವನ್ನು ಒದಗಿಸಿಕೊಡುವುದಕ್ಕಾಗಿ ಲೀಗಲ್ ಸೆಲ್ ಎಂಬ ಒಂದು ಸಂಸ್ಥೆಯನ್ನು ಸರ್ಕಾರದವರು ತೆರೆದಿದ್ದಾರೆ. ಗೇಣಿದಾರರ ವಿರುದ್ಧ ಕೇಸ್ ತೀರ್ಮಾನವಾದರೆ ಅಂತಹ ಕೇಸ್‌ಗಳನ್ನು ಸರ್ಕಾರದ ವತಿಯಿಂದ ಸ್ಥಾಪಿತವಾದ ಲೀಗಲ್ ಸೆಲ್‌ನವರು ಕೇಸ್‌ಗಳನ್ನು ಹೈಕೋರ್ಟಿಗೆ ಹಾಕುವಂತಹ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು. ಕೆಲವು ಜನ ರೈತರಿಗೆ ಈ ಒಂದು ಲೀಗಲ್ ಸೆಲ್ ಇದೆ ಎನ್ನುವ ವಿಷಯವೇ ಗೊತ್ತಿಲ್ಲ. ಈ ವಿಷಯವನ್ನು ಸರ್ಕಾರದವರು ಸ್ವಲ್ಪ ಪ್ರಚಲಪಡಿಸಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಹಿಂದಿನ ಸರ್ಕಾರದವರು ರಚನೆ ಮಾಡಿದಂತಹ ಎಲ್ಲಾ ಭೂ ನ್ಯಾಯ ಮಂಡಲಿಗಳನ್ನು ಈ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ರದ್ದುಪಡಿಸಲಾಯಿತು. ಅದರೂ ಅಡ್ಡಿ ಇಲ್ಲ. ಈ ಸರ್ಕಾರದವರು ಹೊಸ ಭೂ ನ್ಯಾಯ ಮಂಡಲಿಗಳನ್ನು ರಚನೆ ಮಾಡಬೇಕಾದರೆ ಸುಮಾರು ೫-೬ ತಿಂಗಳುಗಳು ಬೇಕಾಯಿತು. ಅಷ್ಟರಲ್ಲಿ ಭೂ ಮಾಲೀಕರು ತಮಗೆ ಯಾವ ಯಾವ ದಾಖಲೆಗಳು ಬೇಕಾಯಿತು ಆ ಎಲ್ಲಾ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡರು ರೈತರ ದಾಖಲೆಗಳನ್ನು ಇಲ್ಲದಂತೆ ಮಾಡಿದರು. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಭೂ ನ್ಯಾಯ ಮಂಡಲಿಗಳಲ್ಲಿ ಆಗುತ್ತಿರುವ ಅನ್ಯಾಯವನ್ನು ತಪ್ಪಿಸುವುದಕ್ಕೆ ಹೆಚ್ಚಿನ ಆಸಕ್ತಿಯನ್ನು ವಹಿಸಬೇಕು. ಆತ ತನ್ನ ಎತ್ತು, ಗಾಡಿ ಮುಂತಾದುವನ್ನು ಮಾರಿಕೊಂಡು ಜೀವನ ಮಾಡುತ್ತಿದ್ದಾನೆ, ಏಕೆಂದರೆ ಆತನಿಗೆ ಬೇರೆ ಆಧಾರ ಏನೂ ಇಲ್ಲ. ನಾಲ್ಕೈದು ಎಕರೆ ಜಮೀನು ಇದ್ದುದನ್ನು ಆತನಿಂದ ಕಸಿದುಕೊಂಡರು, ಆದ್ದರಿಂದ ಆತ ಒಂದು ದಿನ ಕೋಳಿ ಮಾರುತ್ತಾನೆ, ಒಂದು ದಿನ ಕುರಿ ಮಾರಿಕೊಳ್ಳುತ್ತಾನೆ, ಒಂದು ದಿನ ಎತ್ತನ್ನು ಮಾರಿಕೊಳ್ಳುತ್ತಾನೆ, ಕೊನೆಗೆ ಅವನ ಜೀವನ ದುಸ್ತರ ಆಗುತ್ತದೆ. ಆದುದರಿಂದ ಆತನ ಹತ್ತಿರ ಕಾಗದ ಪತ್ರಗಳ ಕಾಪಿ ಏನಾದರೂ ಇದ್ದರೆ ಅದನ್ನು ಹಾಜರುಪಡಿಸಿಕೊಂಡು ತಾವು ಎನ್‌ಕ್ವೈರಿ ಮಾಡಬೇಕು ಎಂದು ನಾನು ಹೇಳುತ್ತೇನೆ. ಈ ಸಂದರ್ಭದಲ್ಲಿ ಮತ್ತೊಂದು ವಿಷಯವನ್ನು ಹೇಳಬಯಸುತ್ತೇನೆ. ಸರ್ಕಾರದವರು ಒಂದು ಕಾನೂನು ಮಾಡಿದ್ದೀರಿ. ಸಣ್ಣ ಹಿಡುವಳಿದಾರನಿಗೆ ೪ ಎಕರೆ ಜಮೀನು ಇದ್ದವರಿಗೆ ಭೂ ಕಂದಾಯ ಇಲ್ಲ ಎಂದು ಹೇಳಿದ್ದೀರಿ. ಇದರಲ್ಲಿ ಒಂದು ತೊಂದರೆಯ ಪ್ರಶ್ನೆ ಇದೆ. ಕೆಲವು ಡಿವೈಡೆಡ್ ಫ್ಯಾಮಿಲಿಗಳಿವೆ, ಕೆಲವು ಜಾಯಿಂಟ್ ಫ್ಯಾಮಿಲಿಗಳಿವೆ. ಒಂದು ೧೦ ಎಕರೆ ಭೂಮಿಯಿದ್ದವರು ೪ ಜನ ಅಣ್ಣ ತಮ್ಮಂದಿರು ಇರುತ್ತಾರೆ. ಜಾಯಿಂಟ್ ರೈತರು ಇರುತ್ತಾರೆ. ಅವರು ನಿಮಗೆ ಕಂದಾಯ ಕೊಡಬೇಕು. ಇನ್ನೊಂದು ಕಡೆ ಇಬ್ಬರು ಮೂವರು ಮಂದಿ ಅಣ್ಣ ತಮ್ಮಂದಿರು ಇದ್ದಾರೆ ಪ್ರತಿಯೊಬ್ಬರಿಗೂ ಮೂರು ಮೂರು ಹೆಕ್ಟೇರ್ ಜಮೀನು ಇದೆ. ಅವರಿಗೆ ಕಂದಾಯ ಮಾಫಿ. ಇದು ಸ್ವಲ್ಪ ವ್ಯತ್ಯಾಸವಿದೆ. ಒಂದು ಕುಟುಂಬಕ್ಕೆ ೧೦ ಎಕರೆ, ಒಬ್ಬ ಮನೆಯ ಹಿರಿಯ ಸದಸ್ಯರಿಗೆ ಒಂದು ಸೀಲಿಂಗ್ ಏರಿಯಾ ಎಂದು ಫಿಕ್ಸ್ ಮಾಡಿದರಲ್ಲ ಇದೇ ರೀತಿ ಅಲ್ಲೂ ಏಕೆ ಲೆಕ್ಕ ಮಾಡಬಾರದು. ೪ ಹೆಕ್ಟೇರ್ ಜಮೀನು ಒಬ್ಬರಿಗೆ ಇದ್ದರೆ ಅವರಿಗೆ ಕಂದಾಯ ಮಾಫಿ, ೯ ಹೆಕ್ಟೇರ್ ಜಮೀನು ಇದ್ದರೂ ೩ ಮಂದಿ ಅಣ್ಣತಮ್ಮಂದಿರು ಇದ್ದರೂ ಅವರಿಗೆ ಮಾಫಿಯಿಲ್ಲ, ಕಂದಾಯ ಕೊಡಬೇಕು ಎಂದು ಇದೆ. ಯಾವ ರೀತಿ ಸೀಲಿಂಗ್ ಏರಿಯ ಫಿಕ್ಸ್ ಮಾಡಿ, ಹಿರಿಯ ಮಕ್ಕಳಿಗೆ ಕೊಡಬೇಕು ಎಂದು ಹೇಳುತ್ತೀರೋ ಅದೇ ರೀತಿ ಭೂ ಕಂದಾಯದ ವಿಷಯದಲ್ಲಿ ಎಷ್ಟು ಮಂದಿ ಅಣ್ಣ ತಮ್ಮಂದಿರಿದ್ದಾರೆ ಭೂ ಕಂದಾಯವನ್ನು ಅವರಿಂದ ವಸೂಲು ಮಾಡಬೇಕು ಅಥವಾ ಮಾಡಬಾರದು ಎನ್ನುವುದನ್ನು ಪರಿಶೀಲನೆ ಮಾಡಬೇಕು. ಇದರಲ್ಲಿ ಬಹಳ ದೊಡ್ಡ ಅನ್ಯಾಯವಾಗಿದೆ. ಭೂ ಸುಧಾರಣಾ ಕಾನೂನಿನಲ್ಲಿ ಬಹಳಷ್ಟು ದೋಷಗಳಿವೆ, ಈ ದೋಷಗಳನ್ನು ದುರಸ್ತು ಮಾಡಬೇಕು. ನಮ್ಮ ಕಡೆ ವೆಲ್ ಇರಿಗೇಟೆಡ್ ಜಮೀನು ಇದೆ ಎಂದು ಹೇಳುತ್ತಾರೆ, ಅದನ್ನು ವೆಲ್ ಇರಿಗೇಟೆಡ್ ಜಮೀನು ಮಾಡಲಿಲ್ಲ,

ಅದು ಡ್ರೈಲ್ಯಾಂಡ್ ಆಗಿದೆ. ಚಿಕ್ಕೋಡಿ ತಾಲ್ಲೂಕು ಅತ್ಯಂತ ಶ್ರೀಮಂತ ತಾಲ್ಲೂಕು ಎಂದು ಕರ್ನಾಟಕ ರಾಜ್ಯದಲ್ಲಿ ಹೇಳುತ್ತಾರೆ. ಇನ್ನೊಂದು ಕಡೆ ಸರ್ಪ್ಲಸ್ ಲ್ಯಾಂಡ್ ಇಲ್ಲ. ನನಗೆ ನೆನಪು ಇರುವ ಪ್ರಕಾರ ಸರ್ಪ್ಲಸ್ ಲ್ಯಾಂಡ್ ೩೧ ಎಕರೆ ಇದ್ದ ಹಾಗೆ ಕಾಣುತ್ತದೆ. ನಮ್ಮ ಕಡೆ ತುಸು ಜಮೀನು ಇದ್ದರೂ ಕೂಡ ಬಹಳ ಜಮೀನು ಬಾವಿಯಿಂದ ಇರಿಗೇಟೆಡ್ ಆದ ಜಮೀನು. ಬಾವಿಯಿಂದ ಇರಿಗೇಟೆಡ್ ಆದ ಜಮೀನಿಗೆ ಡ್ರೈಲ್ಯಾಂಡ್ ಎಂದು ಹೇಳುತ್ತಾರೆ. ಹೀಗಾಗಿರುವುದರಿಂದ ನಮಗೆ ಯಾವುದೂ ಸರ್ಪ್ಲಸ್ ಲ್ಯಾಂಡ್ ಸಿಕ್ಕಿಲ್ಲ. ಇದನ್ನು ದುರಸ್ತು ಮಾಡಲಿಕ್ಕೆ ನಮಗೆ ಸಾಧ್ಯವಿಲ್ಲ. ಈಗ ತಾವು ಪಟ್ಟ ಕೊಡು ತ್ತಿದ್ದೀರಿ. ಪಟ್ಟ ಕೊಡುವ ಕಾಲಕ್ಕೆ ಎಷ್ಟೋ ಗ್ರಾಮ ರೆಕಾರ್ಡುಗಳಲ್ಲಿ ತಪ್ಪು ರೆಕಾರ್ಡ್ ಹಚ್ಚಿದ್ದಾರೆ, ಅದರಲ್ಲಿ ರೈತನ ಹೆಸರು ಇಲ್ಲ. ಮಾಲೀಕನ ಹೆಸರು ಇದೆ. ಆ ರೈತನ ಹೆಸರಿನಲ್ಲಿ ಕೇಸ್ ಆಗಿದ್ದರೂ ಕೂಡ ರಿಟ್ ಹಾಕಿ ಸ್ಟೇ ಬಂದಿವೆ. ಫಾರಂ ನಂ ೧೦ರ ಪ್ರಕಾರ ಅವನ ಹೆಸರು ದಾಖಲಾಗಿಲ್ಲ. ಪಟ್ಟ ಕೊಡುವುದರಿಂದ ಮಾಲೀಕನಿಗೆ ಹೆಚ್ಚಿನ ಅನುಕೂಲವಾಗುತ್ತದೆ. ರೈತನ ಹೆಸರಿನಲ್ಲಿ ಕೇಸ್ ಆಗಿದ್ದರೂ ಈಗ ಸ್ಟೇ ಆರ್ಡರ್ ಬಂದಿದೆ. ಅದು ನಿರ್ಣಯ ಆಗುವತನಕ ರೈತರ ಹೆಸರು ಬರುವುದಿಲ್ಲ. ಇಂಥಾ ಕೆಲವು ವಿಷಯಗಳಿವೆ. ಇಂಥಾ ಪ್ರಸಂಗಗಳ ಬಗ್ಗೆ ತಾವು ಪರಿಶೀಲನೆ ಮಾಡಬೇಕು. ಈಗಲೇ ಪಟ್ಟ ಕೊಡಬೇಕೋ ಅಥವಾ ಹೈಕೋರ್ಟಿನಿಂದ ಸ್ಟೇ ಏನು ಬಂದಿದೆ ಅದು ನಿಖಾಲಿಯಾದ ನಂತರ ಪಟ್ಟ ಕೊಡ ಬೇಕೋ ಎನ್ನುವುದನ್ನು ಯೋಚನೆ ಮಾಡಬೇಕು ಇನ್ನು ಗ್ರಾಮ ಲೆಕ್ಕಾಧಿಕಾರಿಗಳು ಏನು ಕಾರುಬಾರು ಮಾಡುತ್ತಾರಲ್ಲ. ಅವರು ಸ್ವಲ್ಪ ಕಾರುಬಾರು ಮಾಡುವುದರಿಂದ ಒಬ್ಬ ಮನುಷ್ಯ ಹೈಕೋರ್ಟ್, ಸುಪ್ರೀಂ ಕೋರ್ಟ್ ತನಕ ಹೋಗುವಂತೆ ಮಾಡುತ್ತಾನೆ. ಈ ಭೂ ನ್ಯಾಯ ಮಂಡಲಿಗಳಲ್ಲಿ ತೊಂದರೆ ಯಾಗಿದೆ. ಕಾನೂನು ಪ್ರಕಾರವಾಗಿ ಲೆಕ್ಕಾಧಿಕಾರಿಗಳು ಏನು ರೆಕಾರ್ಡ್ ಬರೆಯುತ್ತಾರೋ ಅವರ ಮೇಲೆ ವಿಶ್ವಾಸ ಇಡಬೇಕು ಎಂದು ಹೇಳಿದ್ದಾರೆ ಅವರ ಮೇಲೆ ನಾವು ಸಂಶಯ ಪಡಬಾರದು. ಅವನು ಸುಳ್ಳು ಬರೆದಿದ್ದಾನೆ ಎಂದು ನಮಗೆ ಸ್ಪಷ್ಟವಾಗಿ ಕಾಣಿಸುತ್ತದೆ. ಆದ್ದರಿಂದ ಗ್ರಾಮ ಲೆಕ್ಕಾಧಿಕಾರಿಯ ಮೇಲೆ ಯಾವ ರೀತಿಯ ಕಂಟ್ರೋಲ್ ಇಡಬೇಕು ಎಂದು ಯೋಚನೆ ಮಾಡಬೇಕು. ಅತ್ತ ಅತ್ತ ಇತ್ತ ಆಡಾಡಲಿಕ್ಕೆ ಬರಬಾರದು. ಮಾನ್ಯ ಮಿತ್ರರು ಹೇಳಿದಂತೆ ಗ್ರಾಮ ಲೆಕ್ಕಾಧಿಕಾರಿಗಳು ಊರೊಳಗೆ ಇರುವುದಿಲ್ಲ. ಎಲ್ಲೋ ಇರುತ್ತಾರೆ. ಎಲ್ಲೋ ಕೆಲಸ ಮಾಡುತ್ತಾರೆ, ಪ್ರತಿಯೊಬ್ಬ ಗ್ರಾಮಾಧಿಕಾರಿಗೂ ಗ್ರಾಮದಲ್ಲಿ ಸರ್ಕಾರವೇ ವಾಸಕ್ಕೆ ಮನೆಯನ್ನು ನಿರ್ಮಾಣ ಮಾಡಿಕೊಟ್ಟು, ಅವನು ಅಲ್ಲೇ ಉಳಿಯಬೇಕು ಎಂದು ಕರಾರು ಹಾಕಿದರೆ ಒಳ್ಳೆಯ ಕಾರ್ಯ ಆಗಬಹುದು ಎಂದು ಮಾನ್ಯ ಮಂತ್ರಿಗಳಿಗೆ ಸಲಹೆ ಕೊಡು ತ್ತಿದ್ದೇನೆ. ಈ ಭೂ ನ್ಯಾಯ ಮಂಡಲಿಗಳಿಂದ, ಈ ಭೂ ಸುಧಾರಣಾ ಕಾಯಿದೆಯಿಂದ, ಈ ಗ್ರಾಮ ಲೆಕ್ಕಾಧಿಕಾರಿಗಳಿಂದ ಏನು ರೈತರಿಗೆ ಅನ್ಯಾಯವಾಗಿದೆ, ಯಾರು ರೈತರು ಭೂಮಿಯನ್ನು ಕಳೆದುಕೊಂಡಿ ದ್ದಾರೋ ಅವರಿಗೆ ಯಾವರೀತಿಯಿಂದಲಾದರೂ ಭೂಮಿಯನ್ನು ಒದಗಿಸಿಕೊಡುವ ಬಗ್ಗೆ ಒಳ್ಳೆಯ ರೀತಿ ಯಿಂದ ಪರಿಶೀಲನೆ ಮಾಡಬೇಕು ವಿಚಾರ ಮಾಡಬೇಕು, ಬಡ ಜನರಿಗೆ ಭೂಮಿ ಕಳೆದುಕೊಂಡಂತೆ ಆಗಬಾರದು, ಆ ರೀತಿಯಲ್ಲಿ ವಿಚಾರ ಮಾಡಬೇಕು ಎಂದು ವಿನಂತಿ ಮಾಡಿಕೊಂಡು ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆನಂದಕುಂದ ಹೆಗ್ಗಡೆ (ಬ್ರಹ್ಮಾವರ).— ಮಾನ್ಯ ಅಧ್ಯಕ್ಷರೆ, ೧೯೮೩-೮೪ರ ರಾಜ್ಯದ ಕಂದಾಯದ ಮುಂಗಡ ಪತ್ರವನ್ನು ಸ್ವಾಗತಿಸುವುದರೊಂದಿಗೆ ಈ ಕೆಲವು ಸಮಸ್ಯೆಗಳನ್ನು ಸಮಗ್ರ ವಿವೇ ಚನೆಯನ್ನು ಮಾಡಲಿಕ್ಕೆ ಇವೆ. ಏಕೆಂದರೆ, ಕಂದಾಯ ಖಾತೆ ಎಂದರೆ ಅದು ಬಹಳ ಪ್ರಭಾವಿ ಖಾತೆ. ಇದಕ್ಕೆ ರಾಜ್ಯದ ಆಡಳಿತಾತ್ಮಕವಾದ ವ್ಯವಸ್ಥೆಯಲ್ಲಿ ವ್ಯಾಪಕವಾದ, ಆಡಳಿತಾತ್ಮಕವಾದ ಬೇರುಗಳಿವೆ. ಆದರೆ ಇಷ್ಟದಂತೆ, ಅಪೇಕ್ಷಿಸಿದಂತೆ, ನಿರೀಕ್ಷಿಸಿದಂತೆ ನಡೆದರೆ ಅನುಕೂಲ ಪರಿಣಾಮಗಳು, ಅನುಕೂಲ ಪ್ರತಿಕ್ರಿಯೆಗಳು, ನಿರೀಕ್ಷಿತ ಪರಿಣಾಮಗಳು, ಇರುತ್ತವೆ, ಇಲ್ಲದೇಹೋದರೆ ಪ್ರತಿಕೂಲ ನಿರ್ಣಯಗಳು ಪ್ರತಿಕೂಲ ಪರಿಣಾಮಗಳು ಇರುತ್ತವೆ. ಇವೆಲ್ಲವೂ ಆಡಳಿತಾತ್ಮಕವಾಗಿ ಕಾನೂನು ಮೂಲಕವಾಗಿ ನಡೆಯುವುದಾದರೂ ಎಷ್ಟೋ ಸಾರಿ ಪರಿಣಾಮಗಳು ಒಳ್ಳೆಯದು ಇರುವುದಿಲ್ಲ. ಏಕೆಂದರೆ, ಕಾನೂನನ್ನು ಏಕೆ ಮಾಡಿದ್ದಾರೆ ಎನ್ನುವುದನ್ನು ಎಲ್ಲರೂ ತಿಳಿದುಕೊಂಡರೆ ಅದಕ್ಕೆ ಅನುಕೂಲದ ಪರಿಣಾಮಗಳು ಇರು ವುದು. ಕಾನೂನುಗಳು ಯಾವಾಗಲೂ ಸಮಾಜದ ವಿಕಾಸಕ್ಕೆ ಇರುವುದು, ಕಾನೂನುಗಳು ಸಮಾಜದ ಅನುಕೂಲಕ್ಕಾಗಿ ಇರುವುದು, ಕಾನೂನುಗಳು ಯಾವಾಗಲೂ ಸಮಾಜದ ಬೆಳವಣಿಗೆಗಾಗಿ ಇರುವುದು, ಕಾನೂನುಗಳು ಸಮಸ್ಯೆಗಳ ಸಮತೋಲನವನ್ನು ಕಾಪಾಡಿಕೊಳ್ಳುವುದಕ್ಕೆ ಇವೆ ಎನ್ನುವುದನ್ನು ಪ್ರತಿ ಯೊಬ್ಬ ನಾಗರೀಕನಾದವನು ಅಥವಾ ಪ್ರಜೆಯಾದವನು ಅರ್ಥಮಾಡಿಕೊಳ್ಳುವುದರ ಮೂಲಕ, ಅಧಿಕಾರೀ

ತರರು ಹೊಂದಾಣಿಕೆ ಮಾಡಿಕೊಳ್ಳುವುದರ ಮೂಲಕ ನಿರೀಕ್ಷಿತ ಪರಿಣಾಮಗಳು ಇರುವುದು. ಅಧಿಕಾರ, ಅವಕಾಶ, ಬಂಡವಾಳ ಇವು ಮೂರೂ ಯೋಗ್ಯರಿಗೆ ಸಿಗಬೇಕೆಂಬ ನಿಯಮಗಳೇನೂ ಇಲ್ಲ. ತಂದೆ ದುಡಿದಿದ್ದಾನೆ, ಅದು ಹೆಂಡತಿ, ಮಕ್ಕಳಿಗೆ ಸಿಗಬೇಕೆಂಬ ನಿಯಮಗಳಿವೆ, ಪದವಿ ಇದ್ದರೆ ನೌಕರಿ ಸಿಗಬೇಕೆಂಬ ನಿಯಮಗಳಿವೆ. ಸಿಕ್ಕಿದರೆ ಸೌಭಾಗ್ಯ, ಇಲ್ಲದೇಹೋದರೆ ದೌರ್ಭಾಗ್ಯ. ಇದು ಮಾತ್ರ ನಮಗೆ ಇಲ್ಲಿ ಆದಂಥ ಒಂದು ಅನುಭವ. ಅಂದರೆ ಕಾಯಿದೆಗೂ, ನಿಯಮಗಳಿಗೂ, ಅನುಭವಕ್ಕೂ ಮೀರಿದ ಕೆಲವು ಸಮಸ್ಯೆಗಳಿವೆ. ಉದಾಹರಣೆಗೆ, ಭೂ ಸುಧಾರಣಾ ಕಾನೂನನ್ನು ತೆಗೆದುಕೊಂಡರೆ ಅದರ ಬಗ್ಗೆ ನಾವು ವ್ಯಾಪಕವಾಗಿ ಇಲ್ಲಿ ಚರ್ಚಿಸಿದೆವು. ಭೂ ಸುಧಾರಣಾ ಕಾನೂನಿನ ಪ್ರಕಾರ ಡಿಕ್ಲರೇಷನ್ ಕೊಡುವ ಅವಧಿಯನ್ನು ಮುಂದುವರಿಸಿದಾಗ ಮೊದಲಿಗಿಂತ ಹೆಚ್ಚು ವ್ಯಾಪಕವಾದಂಥ, ಬೇರೆ ಬೇರೆ ಉದ್ದೇಶಗಳಿಗೆ ಸಂಬಂಧಪಟ್ಟಂಥ ಡಿಕ್ಲರೇಷನ್‌ಗಳನ್ನು ಕೊಟ್ಟಿದ್ದು ಇದೆ. ಅದರಲ್ಲಿ ದೇಶಕ್ಕೂ, ಸ್ನೇಹಕ್ಕೂ ಸಂಬಂಧಿಸಿ ಕೊಟ್ಟಿದ್ದು ಇದೆ ಅದರಲ್ಲಿ ದುರುದ್ದೇಶಗಳದ್ದೂ ಇದೆ. ಕೊನೇ ಹಂತದಲ್ಲಿ ನಮ್ಮ ಪರಿಶೀಲನೆಯಲ್ಲಿ ಕಂಡುಬಂದಂತೆ ಒಂದಕ್ಕೆ ೬-೭ರಷ್ಟು ಡಿಕ್ಲರೇಷನ್‌ಗಳು ಬಿದ್ದದ್ದು ಇದೆ. ಅಂಕೆಸಂಖ್ಯೆಯಲ್ಲಿ ಗುರುತಿಸುವಾಗ, ೬ಕ್ಕೆ, ೫ಕ್ಕೆ, ೪ಕ್ಕೆ ಒಂದು ನಿರ್ಣಯ ತೆಗೆದುಕೊಂಡಾಗ ಉಳಿದಿದ್ದೆಲ್ಲಾ ನಿರಾಕರಣೆ ಮಾಡಬೇಕಾಗಿ ಬಂತು. ಇದು ಈ ಭೂ ನ್ಯಾಯ ಮಂಡಲಿಗಳಿಗೆ ಸವಾಲಾದಂಥ ಸಮಸ್ಯೆ. ಇದು ನನ್ನ ಅನುಭವದಲ್ಲಿದೆ

ಈ ಭೂಸುಧಾರಣಾ ಕಾನೂನನ್ನು ಜಾರಿಗೆ ತರುವಾಗ ನಾನಾ ತರಹದ ಪ್ರಕರಣಗಳು, ನಾನಾ ತರಹದ ಸಮಸ್ಯೆಗಳು ಉದ್ಭವವಾಗಿಸತಕ್ಕದ್ದು ನಮ್ಮ ಗಮನಕ್ಕೆ ಬಂದಿದೆ. ತಮಗೊಂದು ಉದಾಹರಣೆಯನ್ನು ಕೊಡುವುದಾದರೆ, ಹೆಂಡತಿ ಗಂಡನ ಮೇಲೆಯೇ ಡಿಕ್ಲರೇಷನ್ ಕೊಟ್ಟಿದ್ದಾಳೆ. ಭೂ ನ್ಯಾಯ ಮಂಡಳಿಯವರಿಗೆ ಅವರಿಬ್ಬರೂ ಗಂಡ ಹೆಂಡತಿ ಎಂಬುದೇ ಗೊತ್ತಿಲ್ಲ, ಹೆಂಡತಿಯ ಪರವಾಗಿ ನ್ಯಾಯವನ್ನು ನೀಡಿದ್ದಾರೆ. ಆದುದರಿಂದ ಈ ರೀತಿಯಾಗಿ ನಮಗೆ ಗೊತ್ತಿಲ್ಲದೇ ಎಷ್ಟೋ ಸಮಸ್ಯೆಗಳು ತೀರ್ಮಾನವಾಗಿ ಹೋಗಿ ಬಿಟ್ಟಿರುತ್ತದೆ. ಆದುದರಿಂದ ಈ ಭೂ ನ್ಯಾಯ ಮಂಡಲಿಗಳಲ್ಲಿ ದಕ್ಷತೆಯನ್ನು ನಾವು ಹೆಚ್ಚಿಸಬೇಕಾಗಿದೆ. ದಕ್ಷತೆಯನ್ನು ಹೆಚ್ಚಿಸದೇ ಹೋದರೆ ಕೆಲವು ಸಂದರ್ಭದಲ್ಲಿ ನ್ಯಾಯ ಯಾರಿಗೆ ನಿಜವಾಗಿ ದೊರೆಯಬೇಕಾಗಿರುತ್ತದೆಯೋ ಅದು ಅವರಿಗೆ ದೊರೆಯದೇ ಹೋಗಬಹುದು. ಆದುದರಿಂದ ನಿಮ್ಮ ಭೂ ಸುಧಾರಣಾ ಕಾನೂನು ತಂದಾಗ್ಯೂ ಕೂಡ ನಿಷ್ಪ್ರಯೋಜಕವಾಗಬಹುದು. ಆದುದರಿಂದ ಇದರ ಕಡೆಗೂ ತಾವು ಹೆಚ್ಚಿನ ನಿಗಾವನ್ನು ಕೊಡಬೇಕು. ಭೂ ನ್ಯಾಯ ಮಂಡಲಿಗಳಲ್ಲಿ ದಕ್ಷರೂ ಇದ್ದಾರೆ ಇಲ್ಲವೆಂದು ಅಲ್ಲ, ಇದು ಇನ್ನೂ ಪರಿಣಾಮಕಾರಿಯಾಗಿ ಆಗುವ ಹಾಗೆ ಮಾಡಬೇಕಾಗಿದೆ. ಏತಕ್ಕೆಂದರೆ ೧೯೭೪ನೇ ಇಸವಿಯಲ್ಲಿ ಭೂ ನ್ಯಾಯ ಮಂಡಲಿಗಳು ನಿರ್ಣಯವನ್ನು ತೆಗೆದುಕೊಂಡರೂ ಕೂಡ ಇಲ್ಲಿಯ ತನಕ ಯಾರು ಭೂಮಿಯನ್ನು ಕಳೆದುಕೊಂಡಿದ್ದಾರೆ ಅವರಿಗೆ ಈ ತನಕ ಪರಿಹಾರ ಧನವನ್ನು ಕೊಟ್ಟಿಲ್ಲ. ಅವನು ಜಮೀನು ಕಳೆದುಕೊಂಡಿದ್ದಾನೆ, ಪರಿಹಾರ ಧನವೂ ಸಿಕ್ಕಿಲ್ಲವೆಂದು ಅವನು ಜೀವನ ಮಾಡುವುದಾದರೂ ಹೇಗೆ? ಶೇಕಡ ೭೫ರಷ್ಟು ಜನರಿಗೆ ಇವತ್ತಿನವರೆಗೂ ಸಿಕ್ಕಿಲ್ಲ ಇನ್ನು ಸಿಗಬೇಕಾದ್ದು ಯಾವಾಗ? ಭೂಮಿಯನ್ನು ಕಳೆದುಕೊಂಡವನಿಗೆ ಭೂಮಿ ವಾಪಸ್ಸು ಸಿಗುವ ಹಾಗಿಲ್ಲ, ಪರಿಹಾರ ಧನವೂ ಇಲ್ಲವೆಂದರೆ ಅವರ ಜೀವನದ ಗತಿ ಏನು ಆದುದರಿಂದ ಸರ್ಕಾರದವರು ಇದರ ಕಡೆಗೆ ಹೆಚ್ಚಿನ ನಿಗಾ ಕೊಟ್ಟು ಭೂ ನ್ಯಾಯ ಮಂಡಲಿಗಳು ಏನು ತೀರ್ಮಾನವನ್ನು ಕೈಗೊಳ್ಳುತ್ತಾರೋ ಅದನ್ನು ಜಾರಿಗೆ ತರುವ ಹಾಗೆ ನೋಡಿಕೊಳ್ಳಬೇಕಾದ ಕರ್ತವ್ಯವೂ ಕೂಡ ಇದೆ ಆದುದರಿಂದ ಇವರಲ್ಲಿ ದಕ್ಷತೆಯನ್ನು ಹೆಚ್ಚಿಸಬೇಕಾಗಿದೆ, ದಕ್ಷತೆಯನ್ನು ಹೆಚ್ಚಿಸದಿದ್ದಲ್ಲಿ ಏನೂ ಪ್ರಯೋಜನಕ್ಕೆ ಬರುವುದಿಲ್ಲ.

ಇನ್ನು ಮಾನ್ಯ ಕಂದಾಯ ಮಂತ್ರಿಗಳವರು ಗಮನಿಸಿರಬಹುದು ನಮ್ಮ ಮಂತ್ರಿಗಳವರ ಜಿಲ್ಲೆಯಾದ ಶಿವಮೊಗ್ಗದಲ್ಲಿ ಕೃಷಿಗೆ ಅನುಕೂಲವಾದ ಸೊಪ್ಪಿನ ಬೆಟ್ಟವೆಂದು ಇದೆ. ಅದು ರೈತನಿಗೆ ಕೃಷಿಗೆ ಅನುಕೂಲವಾಗಿದೆ ಆದುದರಿಂದ ಅದನ್ನು ಬೇರೆಯವರಿಗೆ ಕೊಡದೇ ಅವರಿಗೆ ಕೊಡಬೇಕೆಂದು ಹೇಳ ಬಯಸುತ್ತೇನೆ.

ಇನ್ನು ನಮ್ಮ ಜಿಲ್ಲೆಯಲ್ಲಿ ಒಂದು ವಿಶೇಷವಾದ ಪರಿಸ್ಥಿತಿ ಉಂಟಾಗಿದೆ. ಅದು ಏನೆಂದರೆ ಈ ಭೂ ಸುಧಾರಣಾ ಕಾನೂನಿನಿಂದ ಗೇಣಿದಾರರ ಪೈಕಿ ಶೇಕಡ ೯೦ರಷ್ಟು ಮಂದಿ ಕುಂಕಿ ಹಕ್ಕನ್ನು ಕಳೆದುಕೊಂಡಿದ್ದಾರೆ. ಅವನ ಮನೆ ಕುಡಿಯುವ ನೀರಿನ ಭಾವಿ, ಅವನು ಹೋಗುವ ದಾರಿ ಕೂಡ ಅದರಲ್ಲಿಯೇ ಇರುತ್ತದೆ. ಆದುದರಿಂದ ಈ ನಿಮ್ಮ ನಿಯಮಗಳಂತೆ ಯಾರಿಗೆ ಅನುಕೂಲವಾಗಬೇಕೆಂದು ತಂದಿದ್ದೀರೋ ಆದರೆ ಈಗ ಅದರಿಂದಲೇ ಅವರಿಬ್ಬರೂ ಪ್ರತಿಕೂಲವಾಗಿದೆ. ಇದರಿಂದ ಬಹಳ ಜಟಿಲ

ಸಮಸ್ಯೆಗಳೂ ಉಂಟಾಗಿದೆ. ಆದುದರಿಂದ ಇದರ ಬಗ್ಗೆ ಸರ್ಕಾರದವರು ಪುನರ್ ವಿಮರ್ಶೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮಾನ್ಯ ಶ್ರೀ ಶೀರ್ನಾಳಿ ಚಂದ್ರಶೇಖರ್‌ರವರು ಹೇಳಿದ ಹಾಗೆ ಅರಣ್ಯ ಖಾತೆಯವರು ಅರಣ್ಯವನ್ನು ಪ್ರವೇಶ ಮಾಡುವುದಕ್ಕಿಂತ ಮುಂಚಿತವಾಗಿಯೇ ಅಲ್ಲಿ ಕೆಲವರು ಮನೆಗಳನ್ನು ಕಟ್ಟಿಕೊಂಡು ಕೃಷಿ ಮಾಡಿಕೊಂಡಿದ್ದಾರೆ ತೋಟ ಮಾಡಿಕೊಂಡಿದ್ದಾರೆ ಆದುದರಿಂದ ಅಂಥವರ ಬಗ್ಗೆ ಕೂಡ ಮಾನ್ಯ ಕಂದಾಯ ಮಂತ್ರಿಗಳವರು ಸಹಾನುಭೂತಿಯಿಂದ ನಿರ್ಣಯ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಹಿಂದಿನ ಕಾಲದಲ್ಲಿ ಕೆರೆಗಳನ್ನು ರಿಪೇರಿ ಮಾಡುವುದಕ್ಕೋಸ್ಕರವಾಗಿ ಮತ್ತು ಕೆರೆಯಲ್ಲಿರತಕ್ಕ ಹೂಳನ್ನು ತೆಗೆಸುವುದಕೋಸ್ಕರವಾಗಿ ತೆರಿಗೆ ಹಣವನ್ನು ವಸೂಲಿ ಮಾಡುತ್ತಿದ್ದರು. ಆದರೆ ಈಗ ಏನಾಗಿದೆ ಎಂದರೆ ಕೆರೆಯಿಂದ ನೀರನ್ನು ಉಪಯೋಗಿಸದೇ ಇದ್ದರೂ ಸಹ ತೆರಿಗೆಯನ್ನು ವಸೂಲಿ ಮಾಡುತ್ತಿದ್ದಾರೆ. ಈಗಲೂ ಕೂಡ ಸರ್ಕಾರದವರು ನಿರ್ಮಿಸಿದ ಕೆರೆಗಳಿಂದ ನೀರು ಬರುತ್ತಿಲ್ಲ ನೈಸರ್ಗಿಕವಾಗಿ ನೀರು ಅಲ್ಲಿ ಸಿಗುತ್ತಿದೆ. ಆದರೆ ಅಲ್ಲಿ ಅವರು ವಿನಾಕಾರಣವಾಗಿ ತೆರಿಗೆಯನ್ನು ಕೊಡುತ್ತಿದ್ದಾರೆ ಇದು ಎಂಥಾ ವಿಪರ್ಯಾಸ. ಆದುದರಿಂದ ಇದರ ಬಗ್ಗೆ ಸರ್ಕಾರದವರು ಹೆಚ್ಚಿನ ನಿಗಾ ವಹಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಮಲೆನಾಡಿನಲ್ಲಿ ಅನೇಕ ತೊಂದರೆಗಳು ಇವೆ, ನಮ್ಮಲ್ಲಿ ೧೨೦ ರಿಂದ ೧೫೦ ಇಂಚು ಮಳೆ ಬೀಳುವುದರಿಂದ ನಾವು ಸಾಕಷ್ಟು ತೊಂದರೆಗಳನ್ನು ಅನುಭವಿಸಬೇಕಾಗಿ ಬಂದಿದೆ. ಮಲೆನಾಡಿನ ಅಭಿವೃದ್ಧಿಯ ಬಗ್ಗೆ ನಾವು ಮಲೆನಾಡಿನ ಸದಸ್ಯರುಗಳೆಲ್ಲಾ ಸೇರಿ ಮಾನ್ಯ ಮಂತ್ರಿಗಳವರಿಗೆ ಮನವಿಯನ್ನೂ ಸಹ ಕೊಟ್ಟಿದ್ದೇವೆ. ಅವರು ಇದರ ಬಗ್ಗೆ ಹೆಚ್ಚಿನ ನಿಗಾ ವಹಿಸಬೇಕೆಂದು ಕೇಳಿಕೊಳ್ಳುತ್ತೇನೆ.

೫-೩೦ ಪಿ.ಎಂ.

ಇನ್ನು ಭೂಗರ್ಭದ ವಿಷಯವಾಗಿ ಹೇಳುವುದಾದರೆ, ಸಮುದ್ರದ ಕೊರೆತದಿಂದ ಕೇರಳದವರು ಅನುಭವಿಸಿದಷ್ಟು ಕಷ್ಟವನ್ನು ನಾವು ಅನುಭವಿಸಿಲ್ಲವಾದರೂ ಕೆಲವು ಕಡೆ ಕೆಲವು ಪ್ರದೇಶಗಳು ಪ್ರಕೃತಿಯ ವಿಕೋಪಕ್ಕೆ ಗುರಿಯಾಗಿವೆ. ನಮ್ಮ ಕ್ಷೇತ್ರದ ಹನ್ನಾಡಿ ಮತ್ತು ಕೋಮಲಗೋಡು ಗ್ರಾಮಗಳು ಬಹುಶ: ಇನ್ನು ಒಂದೆರಡು ವರ್ಷಗಳಲ್ಲಿ ಎರಡು ಭಾಗವಾಗುವ ಸಂಭವ ಇದೆ. ಸೀತಾ ನದಿಯ ಪ್ರವಾಹದಲ್ಲಿ ಅವು ಕೊಚ್ಚಿಕೊಂಡು ಹೋಗುವ ಪರಿಸ್ಥಿತಿ ಇದೆ. ಆದುದರಿಂದ, ಅದನ್ನು ಗುರುತಿಸಿ ಸಂಬಂಧಪಟ್ಟವರಿಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈಗಾಗಲೇ ಆ ಹೊಳೆಯ ಪ್ರವಾಹಕ್ಕೆ ಒಂದು ಗ್ರಾಮ ತುತ್ತಾಗಿ ಹತ್ತಾರು ಮಂದಿ ಅಲ್ಲಿ ಸ್ಥಳ ಬಿಟ್ಟಿದ್ದಾರೆ. ಇನ್ನು ಹರಿಜನ ಗಿರಿಜನರಿಗೆ ಸ್ಥಳ ಕೊಡುವ ಬಗ್ಗೆ ಹೇಳುವುದಾದರೆ, ಇಡೀ ಜಿಲ್ಲೆಯಲ್ಲಿ ಕೆಲವರಿಗೆ ಮಾತ್ರ ಜಿಲ್ಲಾಧಿಕಾರಿಗಳು ಭೂಮಿಯನ್ನು ಕೊಟ್ಟಿದ್ದಾರೆ. ನಮ್ಮ ಜಿಲ್ಲೆಯಲ್ಲಿರುವ ಹರಿಜನ–ಗಿರಿಜನರನ್ನು ಗುರುತಿಸಿ ನಿಶ್ಚಿತವಾದ ಸಮಯಕ್ಕೆ ಭೂಮಿಯನ್ನು ಕೊಡುವುದಾದರೆ ಇಂತಿಷ್ಟೇ ಜನರಿದ್ದಾರೆಂಬ ದಾಖಲೆಗಳಿವೆ ; ಆ ಪ್ರಕಾರ ಇತ್ಯರ್ಥಗೊಳಿಸಿದರೆ ಉಳಿದ ಭೂಮಿಯನ್ನು ಹಿಂದುಳಿದವರಿಗೆ ಕೊಡಬಹುದು. ಆ ಕಾರ್ಯಕ್ರಮವನ್ನು ರೂಪಿಸಬೇಕಾದರೆ ಈಗಿರುವ ನಿಯಮದ ಪ್ರಕಾರ ಇದನ್ನು ಮುಗಿಸಬೇಕಾಗುತ್ತದೆ. ಆದ್ದರಿಂದ, ಮೊದಲು ಹರಿಜನ ಗಿರಿಜನರನ್ನು ಗುರುತಿಸಿ ಉಳಿದ ಭೂಮಿಯನ್ನು ಹಿಂದುಳಿದ ವರ್ಗದವರಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಹರಿಜನ-ಗಿರಿಜನರಿಗೇನು ಭೂಮಿಯನ್ನು ಉದಾರವಾಗಿ ಬೆಲೆರಹಿತವಾಗಿ ಕೊಡುತ್ತಿದ್ದೀರಿ ಅದೇರೀತಿ ಹಿಂದುಳಿದ ವರ್ಗದವರಿಗೂ ಕೂಡ ವಿನಾಯಿತಿ ದರದಲ್ಲಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಭೂಸುಧಾರಣಾ ಕಾಯಿದೆಯನ್ವಯ ಭೂಮಿಯನ್ನು ಕಳೆದುಕೊಂಡವರಿಗೆ, ಭೂನ್ಯಾಯ ಮಂಡಲಿಯ ತಹಶೀಲ್ದಾರರ ಮತ್ತು ಸಂಬಂಧಪಟ್ಟ ಅಧಿಕಾರಿಗಳು ಆಯಾಯ ಗ್ರಾಮಗಳಿಗೆ ಹೋಗಿ ಬೇಗ ಬೆಲೆ ನಿರ್ಣಯಿಸಿ ಪರಿಹಾರ ಕೊಟ್ಟರೆ ಬಹಳ ಒಳ್ಳೆಯದು. ಶೀರ್ನಾಳಿ ಚಂದ್ರಶೇಖರ್‌ರವರು ಹೇಳಿದ ಹಾಗೆ ೧೨೦ ಕೋಟಿ ರೂಪಾಯಿಗಳನ್ನು ಒಂದೇ ಒಂದು ಕಂತಿನಲ್ಲಿ ಕೊಡದಿದ್ದರೂ ಚಿಂತೆಯಿಲ್ಲ, ಎರಡು ಕಂತಿನಲ್ಲಾದರೂ ಕೊಟ್ಟರೆ ಒಳ್ಳೆಯದು. ಗೇಣಿದಾರರಿಗೆ ಏನು ಬೆಲೆ ನಿಶ್ಚಯಿಸಿದೆ ಅದನ್ನು ಇವತ್ತಿನ ದಿವಸ ಸರ್ಕಾರ ಪಡೆಯುತ್ತಿದೆ ; ಹೀಗಾಗಿ ಅವನಿಗೆ ಕೊಡುವ ಹಣದಲ್ಲಿ ತಡವಾಗುತ್ತಿದೆ ; ಪರಿಣಾಮಕಾರಿಯಾಗಿ ಕೊಡುತ್ತಿಲ್ಲ. ಈ ಸಮಸ್ಯೆಯನ್ನು ಎಷ್ಟು ತೀವ್ರವಾಗಿ ಪರಿಗಣಿಸಿದ್ದೀರಿ ? ಭೂನ್ಯಾಯ ಮಂಡಲಿಯ ತೀರ್ಪಿನ ವಿಚಾರದಲ್ಲಿ ಮತ್ತು ಅದೇ ರೀತಿ ಪರಿಹಾರ ಕೊಡುವ ವಿಷಯದಲ್ಲಿ ತೀವ್ರವಾಗಿ ಪರಿಗಣಿಸಬೇಕು. ಇವತ್ತಿನ ದಿವಸ, ಒಂದೆರಡು ಎಕರೆ ಭೂಮಿ ಕೂಡ ಇಲ್ಲದವರು

ಇದ್ದಾರೆ. ಜೀವನ ಮೌಲ್ಯಗಳನ್ನು ಅಲುಗಾಡಿಸುವ ಪರಿಸ್ಥಿತಿ ಉಂಟಾಗಿದೆ. ಅಂಥವರಿಗೆ ಆದಷ್ಟು ಬೇಗ ಪರಿಹಾರ ಸಿಕ್ಕುವ ಅವಶ್ಯಕತೆ ಇದೆ. ಎಲ್ಲರೂ ಭೂಮಿಯನ್ನು ಇಟ್ಟುಕೊಂಡಿರುವುದಿಲ್ಲ. ಆದ್ದರಿಂದ ಪರಿಹಾರ ಕೊಡುವಲ್ಲಿ ವಿಳಂಬವಾದರೆ ಅಂಥವರಿಗೆ ಅನಿಷ್ಟ ಪರಿಣಾಮವಾಗುತ್ತದೆಂಬುದನ್ನು ಗುರುತಿಸಿ ಬೇಗ ಪರಿಹಾರ ಕೊಡಬೇಕೆಂದು ಕೇಳಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

(ಉಪಾಧ್ಯಕ್ಷರು ಅಧ್ಯಕ್ಷ ಪೀಠಕ್ಕೆ ಬಂದರು)

ಶ್ರೀ ಹೆಚ್. ಗಂಗಾಧರನ್ (ಚಾಮರಾಜ)—ಮಾನ್ಯ ಉಪಾಧ್ಯಕ್ಷರೇ, ಖರ್ಗೆಯವರ ಕಂದಾಯ ಇಲಾಖೆ ಮೇಲೆ ಮಾತನಾಡಿದ ಕಸಬೆಯವರ ಶಿರೀನೇ ಬೇಡಿಕೆ ಮೇಲೆ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಮುಜರಾಯಿ ಇಲಾಖೆ ಬಹಳ ಗಣ್ಯವಾದ ಇಲಾಖೆಯಾಗಿ ಬಂದಿದೆ. ಇದರ ಮಹತ್ವವನ್ನು ಪರಿಗಣಿಸದೆ ಬಹಳ ನಿಕೃಷ್ಟ ದೃಷ್ಟಿಯಿಂದ ಕಾಣುತ್ತಿದ್ದೇವೆಂಬ ಭಾವನೆ ನಿಮಗೆ ವ್ಯಕ್ತವಾಗುತ್ತದೆ. ಅದರಲ್ಲೂ ಸ್ವಾತಂತ್ರ್ಯ ನಂತರ ಮುಜರಾಯಿ ಇಲಾಖ ಅದರ ಒಂದು ಅಸ್ತಿತ್ವವನ್ನು ದಿನದಿನಕ್ಕೆ ಕಳೆದು ಕೊಳ್ಳುತ್ತಾ ಬರುತ್ತಿದೆ ಎಂಬುದನ್ನು ಇಲಾಖೆಯಲ್ಲಿರತಕ್ಕ ಕಾರ್ಯಕ್ರಮವನ್ನು ನೋಡಿದಾಗ ಮನವರಿಕೆಯಾಗುತ್ತದೆ. ಈ ಇಲಾಖೆ ಹಿಂದೂ ಸಂಸ್ಕೃತಿಯನ್ನು ಬೆಳಗಿಸುವುದಕ್ಕೆ ಸ್ಥಾಪಿತವಾಗಿರುವ ಇಲಾಖೆ. ಈ ದೇಶದ ಬಹು ಭಾಗ ಜನರು ಹಿಂದೂ ಸಂಸ್ಕೃತಿಯನ್ನು ಅವಲಂಬಿಸಿರತಕ್ಕವರು. ಅವರ ಮಾನಸಿಕ ವಿಕಾಸಕ್ಕಾಗಿ, ಆತ್ಮೋನ್ನತಿಗಾಗಿ ಕೆಲಸ ಮಾಡತಕ್ಕ ಸಂಸ್ಥೆಗಳ ಪೋಷಣೆಗೆ ರಚನೆಯಾಗಿರತಕ್ಕ ಇಲಾಖೆ ಇದು. ಈ ದೃಷ್ಟಿಯಿಂದ ನೋಡಿದಾಗ ಅದು ಯಾವ ರೀತಿ ವ್ಯವಸ್ಥಿತವಾಗಬೇಕೋ ಆ ರೀತಿ ಆಗಿಲ್ಲ. ದುರ್ದೈವದಿಂದ ಏನಾಗಿದೆ ಎಂದರೆ ಹಿಂದೂ ಎಂಬ ಶಬ್ದ ಪ್ರಯೋಗ ಮಾಡಿದರೆ ಜಾತಿವಾದಿ ಎನ್ನುವ ಭಾವನೆ ಮೂಡುತ್ತಿದೆ. ಹಿಂದೂ ಧರ್ಮದಲ್ಲಿ ಯಾರಿಗೆ ಅಭಿಮಾನ ಇದೆಯೋ ಆತನಿಗೆ ಬೇರೆ ಯಾವುದೇ ಧರ್ಮವನ್ನಾಗಲೀ ಅಥವಾ ಅದರ ಮಾತನಾಡುವ ವ್ಯಕ್ತಿಯನ್ನಾಗಲೀ ದೂಷಿಸುವ ಪ್ರವೃತ್ತಿ ಇರಬಾರದು. ಹಿಂದೂ ಧರ್ಮ ಸರ್ವ ಧರ್ಮಗಳನ್ನು ಪ್ರೀತಿಸುತ್ತದೆ. ಮಹಾ ಭಾರತದಲ್ಲಿ ಹೇಳಿದ್ದಾರೆ, 'ಯಾವ ಧರ್ಮ ಇನ್ನೊಂದು ಧರ್ಮವನ್ನು ದ್ವೇಷಿಸುವುದೇ ಅದು ಒಳ್ಳೆಯ ಧರ್ಮವಲ್ಲ, ಕುಧರ್ಮ' ಎಂದು ನಮ್ಮ ಹಿಂದೂ ಧರ್ಮ ಸರ್ವಧರ್ಮಗಳಿಗೆ ಪೋಷಕವಾಗಿರತಕ್ಕ ಧರ್ಮ. ಅಂಥ ಧರ್ಮದ ಸಂಸ್ಥೆಗಳು ನಾಶವಾಗುತ್ತಿರುವ ಪರಿಸ್ಥಿತಿಯನ್ನು ನಾವು ಇವತ್ತಿನ ದಿವಸ ನೋಡುತ್ತಿದ್ದೇವೆ. ಹಿಂದೂ ಧರ್ಮ–ಸಂಸ್ಕೃತಿಯನ್ನು ಉಳಿಸುವುದಕ್ಕೆ, ಬೆಳೆಸುವುದಕ್ಕೆ ಅನೇಕ ಜನ ಸಾಧು–ಸಂತರು ಶ್ರಮಿಸುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಈ ದೇಶದಲ್ಲಿ ಧರ್ಮ–ಸಂಸ್ಕೃತಿ ಹಾಗೂ ನಾಡಿನ ಕೀರ್ತಿಯನ್ನು ಬೆಳೆಸುವುದಕ್ಕೋಸ್ಕರ ಆಯಾಯ ಭಾಷಾ ಪತ್ರಿಕೆಗಳು ಸಾಕಷ್ಟು ಕೆಲಸ ಮಾಡಿವೆ. ಆದರೆ ಬಹಳ ಕಾಲದಿಂದ ಒಬ್ಬ ವ್ಯಕ್ತಿಯ, ಒಂದು ಕೋಮಿನ, ಒಂದು ಜನಾಂಗದ ಹಾಗೂ ಬಂಡವಾಳ ಶಾಹಿಯ ಆಧಾರದ ಮೇಲೆ ಸ್ಥಾಪಿತವಾಗಿರತಕ್ಕ ಅನೇಕ ಪತ್ರಿಕೆಗಳು ತಮ್ಮದೇ ಆದ ವಿಚಾರ ಧಾರೆಯನ್ನು ಮುಂದಿಟ್ಟುಕೊಂಡು ತಮ್ಮದೇ ವೃತ್ತಿ, ವ್ಯಾಪಾರ, ವ್ಯವಹಾರಗಳನ್ನು ಮಾಡುವುದಕ್ಕೆ, ಬೆಳೆಸುವುದಕ್ಕೆ ಪ್ರಯತ್ನ ಮಾಡುತ್ತಿರುವುದನ್ನು ಕಾಣುತ್ತಿದ್ದೇವೆ. ಈ ದಿಸೆಯಲ್ಲಿ, ನಮ್ಮ ಕರ್ನಾಟಕದಲ್ಲಿ ವಿಶಾಲ ಸ್ವರೂಪ ಇರುವುದನ್ನು ಕಾಣುತ್ತೇವೆ. ಸಾರ್ವಜನಿಕರ ಅನುದಾನದ ಆಧಾರದ ಮೇಲೆ ಅವರ ಹಿತವನ್ನು ಕಾಪಾಡುವ ದೃಷ್ಟಿಯಿಂದ ಹಾಗೂ ಈ ದೇಶದ ಸಂಸ್ಕೃತಿಯನ್ನು, ಧರ್ಮವನ್ನು, ಧಾರ್ಮಿಕ ಸಂಸ್ಥೆಗಳನ್ನು ಬೆಳೆಸಿ ಬೆಳಗಿಸುವುದಕ್ಕೆ ಸಂಯುಕ್ತ ಕರ್ನಾಟಕ ಸಂಸ್ಥೆ ಆರಂಭವಾಯಿತು. ಬಹುಪಾಲು ಕನ್ನಡ ಜನರನ್ನು ಒಂದುಗೂಡಿಸಿ ಅವರ ಕೀರ್ತಿಯನ್ನು ಬೆಳಗುವುದಕ್ಕೆ ಪ್ರಾರಂಭವಾಗಿ ಸಂಸ್ಥೆ, ಸಾರ್ವಜನಿಕರ ಹಣ ಸಹಾಯದಿಂದ ಬೆಳೆದಿದ್ದ ಸಂಸ್ಥೆ ಬಂಡವಾಳ ಶಾಹಿಗಳ ಕೈಗೆ ಸಿಕ್ಕಿ ಕೆಲಕಾಲ ಕಣ್ಮುಚ್ಚಿಕೊಂಡು ಕೂರುವಂತಹ ಪರಿಸ್ಥಿತಿ ಬಂದಿತ್ತು. ಅಂಥದಕ್ಕೆ ಸರ್ಕಾರ ಕೈಹಾಕಿ ಅದನ್ನು ಮುನ್ನಡೆಸುವ ಪ್ರಯತ್ನ ಮಾಡಿದ್ದಕ್ಕೆ ಸರ್ಕಾರಕ್ಕೆ ಧನ್ಯವಾದಗಳನ್ನು ಹೇಳಬಯಸುತ್ತೇನೆ. ಆ ಪತ್ರಿಕೆಯನ್ನು ಉಳಿಸಿಕೊಂಡು ಬರುವುದು ನಮ್ಮ ಕರ್ತವ್ಯ. ಸಾರ್ವಜನಿಕರ ಸಹಾಯ ಸಂಪತ್ತಿನ ಮೇಲೆ ಬೆಳೆದಿರತಕ್ಕ ಸಂಸ್ಥೆ ಬಂಡವಾಳ ಶಾಹಿಗಳ ಕೈಯಿಂದ ತಪ್ಪಿಸಿಕೊಂಡು ಇವತ್ತಿನ ದಿವಸ ಸಾರ್ವಜನಿಕರ ವಶಕ್ಕೆ ಬಂದಿದೆ. ಕೋಟ್ಯಾಂತರ ರೂಪಾಯಿಗಳ ಬಂಡವಾಳವನ್ನು ಹೂಡಿರತಕ್ಕ ಆ ಸಂಸ್ಥೆಯನ್ನು ಸುವ್ಯವಸ್ಥಿತಗೊಳಿಸುವುದು ಸರ್ಕಾರದ ಕರ್ತವ್ಯ. ಆದರೂ ಆ ಸಂಸ್ಥೆಯ ಕಡೆಗೆ ಸರ್ಕಾರ ಸಾಕಷ್ಟು ಗಮನಕೊಟ್ಟಿಲ್ಲವೆಂದು ವರದಿಯಾಗಿದೆ. ಈ ಸಂದರ್ಭದಲ್ಲಿ ಒಂದು ಮಾತು ಹೇಳುವುದಾದರೆ, ಅಲ್ಲಿರತಕ್ಕ ಕಾರ್ಯಕರ್ತರು, ಕೆಲಸಗಾರರು ನಿಷ್ಠೆಯಿಂದ ದುಡಿದಂತ ಜನ. ಕನ್ನಡ ಭಾಷೆಗಾಗಿ, ಕನ್ನಡ ನುಡಿಗಾಗಿ, ಕನ್ನಡ ಸಂಸ್ಕೃತಿ

ಗಾಗಿ ಎಂತಹ ಕಷ್ಟ ಬಂದಾಗಲೂ ಉಪವಾಸ ಇದ್ದುಕೊಂಡೂ ಪತ್ರಿಕೆಯನ್ನು ಉಳಿಸಿಕೊಳ್ಳುವುದಕ್ಕೆ ಹೋರಾಟ ಮಾಡಿದ ಜನ ಅವರು. ಅದು ಸರ್ಕಾರದ ವಶಕ್ಕೆ ಬಂದಾಗ ಇತರ ರಾಜ್ಯಗಳಲ್ಲಿ ಕೊಟ್ಟ ಹಾಗೆ ಕೇಂದ್ರ ಸರ್ಕಾರದ ವೇತನ ಶ್ರೇಣಿಯನ್ನು ಕೊಡದೆ ಅನ್ಯಾಯ ಮಾಡಿದೆ. ಸರ್ಕಾರ ಕೂಡಲೇ ಈ ಕಡೆ ಕಣ್ತೆರೆದು ಅವರಿಗೆ ಆಗಿರತಕ್ಕ ಅನ್ಯಾಯವನ್ನು ಸರಿಪಡಿಸಬೇಕೆಂದು ಹೇಳುತ್ತೇನೆ. ಏಕೆಂದರೆ, ಸಾರ್ವಜನಿಕರು ಕಟ್ಟಿದ ಸಂಸ್ಥೆ ಸಾರ್ವಜನಿಕರ ಆಶ್ರಯದ ಮೇಲೆ ಬದುಕಬೇಕಾಗಿದೆ; ಅಂಥದಕ್ಕೆ ಅನ್ಯಾಯ ಮಾಡಬಾರದು. ಆ ಸಂಸ್ಥೆ ಯಶಸ್ವಿಯಾಗುವಂತೆ ಶೀಘ್ರವಾಗಿ ರೂಪಿಸಬೇಕೆಂದು ಹೇಳುತ್ತೇನೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ಲಾಗಾಯ್ತು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಿಂದೂ ಸಂಸ್ಕೃತಿಯ ಸಂಸ್ಥೆಗಳನ್ನು ಹಾಗೂ ಕೇಂದ್ರಗಳನ್ನು ಬಹುಮಟ್ಟಿಗೆ ಕಡೆಗಣಿಸಿವೆ. ಏತಕ್ಕೆ ಯಾವ ದೃಷ್ಟಿಯಿಂದ ಈ ರೀತಿ ಮಾಡಿವೆ ಎಂಬುದು ಗೊತ್ತಿಲ್ಲ. ನಮ್ಮ ಕರ್ನಾಟಕ ಏಕೀಕರಣವಾದ ಮೇಲೆ ಎಷ್ಟೋ ಹಿಂದೂ ಶಾಸನಗಳು ಬಂದಿವೆ; ಆದರೆ ಅದರಲ್ಲಿ ೫ ಶಾಸನಗಳು ಕೂಡ ಜಾರಿಯಲ್ಲಿಲ್ಲ. ಈಗ ಜಾರಿಯಲ್ಲಿರತಕ್ಕ ಹಳೇ ಶಾಸನಗಳೆಂದರೆ, ಹಳೇ ಮೈಸೂರಿಗೆ ಅನ್ವಯವಾಗುವ ಒಂದು ಶಾಸನ (೧೯೨೭ ರಲ್ಲಿ ಬ್ರಿಟಿಷ್ ಸಾಮ್ರಾಜ್ಯ ಶಾಹಿ ಕಾಲದಲ್ಲಿ—ರಾಜ ಮಹಾರಾಜರ ಕಾಲದಲ್ಲಿ ಆದದ್ದು) ಇವತ್ತಿಗೂ ಜಾರಿಯಲ್ಲಿದೆ; ೧೯೫೧ರಲ್ಲಿ ಆದಂತಹ ಓಲ್ಡ್ ಮೈಸೂರ್ ಹಿಂದೂ ರಿಲೀಜಿಯಸ್ ಚಾರಿಟಬಲ್ ಆಕ್ಟ್ ಬಾಂಬೆ ಪಬ್ಲಿಕ್ ಟ್ರಸ್ಟ್ ಆಕ್ಟ್, ಹೈದರಾಬಾದ್ ಎಂಡೋಮೆಂಟ್ ರೆಗ್ಯುಲೇಷನ್ಸ್ ಆಕ್ಟ್, ಕೂರ್ಗ್ ಟೆಂಪಲ್ ಫಂಡ್ಸ್ ಮ್ಯಾನೇಜ್‌ಮೆಂಟ್ ಆಕ್ಟ್—ಈ ೫ ಶಾಸನಗಳು ಇನ್ನೂ ನಮ್ಮ ರಾಜ್ಯದಲ್ಲಿ ಜಾರಿಯಲ್ಲಿವೆ. ೧೯೫೬ ರಿಂದ ನೂರಾರು ಶಾಸನಗಳನ್ನು ಮಾಡಿದರೂ ಕೂಡ ಕರ್ನಾಟಕದಲ್ಲಿರತಕ್ಕ ಹಿಂದೂಗಳಿಗೆ ಸಮನ್ವಯವಾದ ಶಾಸನವನ್ನು ಮಾಡುವುದಕ್ಕೆ ಈ ಶಾಸನ ಸಭೆಗೆ ಸರ್ಕಾರಕ್ಕೆ ಸಾಮರ್ಥ್ಯ ಬರಲಿಲ್ಲವೆ? ಏತಕ್ಕಾಗಿ ಇದುವರೆಗೆ ಒಂದು ಸಮಗ್ರ ಶಾಸನವನ್ನು ಮಾಡಲಿಲ್ಲವೆಂಬುದು ಸಂಕಟ ಪಡತಕ್ಕ ವಿಷಯ.

ಈ ದಿನ ಆ ಬಗ್ಗೆ ಅನೇಕ ಸಮಸ್ಯೆಗಳು ಉದ್ಭವವಾಗುತ್ತವೆ. ಕೇಂದ್ರ ಸರ್ಕಾರ ಕೂಡಾ ಇದೇ ರೀತಿ ತಾತ್ಸಾರವಾಗಿ ನಡೆದುಕೊಂಡು ಬಂದಿದೆ. ಹಿಂದೂ ಸಂಸ್ಕೃತಿಯನ್ನು ಉಳಿಸಿಕೊಳ್ಳುವಂತಹ ಮನೋಭಾವ ಕೇಂದ್ರ ಸರ್ಕಾರದಲ್ಲೂ ಬರಲಿಲ್ಲ. ಕೇಂದ್ರದಲ್ಲಿ ೧೯೬೦ರಲ್ಲಿ ಹಿಂದೂ ರಿಲಿಜಿಯಸ್ ಎಂಡೋಮೆಂಟ್ ಕಮಿಷನ್ ಎಂದು ಕಮಿಷನ್ ಸ್ಥಾಪನೆ ಮಾಡಿದರು. ಅದಕ್ಕೆ ಡಾ|| ಸಿ.ಪಿ.ರಾಮಸ್ವಾಮಿ ಅಯ್ಯರ್ ಅವರನ್ನು ಅಧ್ಯಕ್ಷರನ್ನಾಗಿ ಮಾಡಿದರು. ಹಾಗೂ ಅವರ ದೊಡ್ಡ ವರದಿಯನ್ನು ಈ ಬಗ್ಗೆ ಕೊಟ್ಟರು. ಈ ದೇಶದಲ್ಲಿ ಹಿಂದೂ ಸಂಸ್ಕೃತಿ, ದೇವಸ್ಥಾನ ಮಠ ಮಾನ್ಯಗಳನ್ನು ಯಾವ ರೀತಿ ರೂಪಿಸಬೇಕೆಂದು ಕೆಲವು ಸಲಹೆಗಳನ್ನು ಕೊಟ್ಟರು. ಅದರಲ್ಲಿ ಆಡಳಿತ ವ್ಯವಸ್ಥೆ ಬಗ್ಗೆ ಕೊಟ್ಟಿರತಕ್ಕ ಸಲಹೆಗಳ ಬಗ್ಗೆ ನಾನು ಪ್ರಸ್ತಾಪ ಮಾಡುವುದಿಲ್ಲ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದುದನ್ನು ನಾನು ಹೇಳುತ್ತಿದ್ದೇನೆ.

5 Publication of agamas and history of the temple, provision of libraries with religious books and publication of literature and making them available to the public free of cost or at a nominal charge.

6 Provision for religious discourses and kalakshepams.

7 The grant of scholarships or stipends to Hindu students who study in educational institutions and also undertake to study the Hindu religion and be examined as to their progress.

8 Promotion of temple architecture, sculpture and fine arts.

9 Establishment and maintenance of institutions wherein both modern as well as Hindu religious education is imparted.

10 The establishment and maintenance of colleges or institutions for the study of Hindu religion, philosophy, vedas or the agama sastras or contributions thereto.

11. Establishment and maintenance of orphanges.

12 Establishment and maintenance of asylums for leper patients and or persons suffering from other serious ailment.

13 Establishment and maintenance of poor, homes for destitute and physically disabled Hindu widows, aged people and children.

14. Establishment and maintenanee of hospitals and dispensaries for the benefit of pilgrims, worshippers and devotees.

ಇಂತಹ ಸೇವೆಗಳನ್ನು ಕೊಟ್ಟಿದ್ದರೂ ಬಹುಶ: ಈ ದೇಶದ ಇತಿಹಾಸವನ್ನು ನೋಡಿದರೆ ಕರ್ನಾಟಕದಲ್ಲಿ, ಬಾಂಬೆ ಕರ್ನಾಟಕ ಏರಿಯಾದಲ್ಲಿ ಸರ್ಕಾರ ಒಂದು ಭಾಗ ಮಾಡಿದ್ದರೆ ಅದರ ಹತ್ತು ಪಟ್ಟು ಧಾರ್ಮಿಕ ವಿದ್ಯಾ ಸಂಸ್ಥೆಗಳು, ಸಾರ್ವಜನಿಕರು, ಸಾರ್ವಜನಿಕ ಸಂಸ್ಥೆಗಳು, ಹಿಂದೂ ಧರ್ಮ ಸಂಸ್ಥೆಗಳು ಮಾಡಿರುತ್ತವೆ. ಸರ್ಕಾರ ಮಾಡಿರುವುದಕ್ಕಿಂತಾ ೧೦ ಪಟ್ಟು ಮಿಗಿಲಾಗಿ ಕರ್ನಾಟಕದಲ್ಲಿನ ನಾನಾ ಭಾಗಗಳಲ್ಲಿ ಮಾಡಿರುವುದನ್ನು ನಾವು ನೋಡುತ್ತಿದ್ದೇವೆ. ಒಂದು ಒಳ್ಳೆಯ ಸದುದ್ದೇಶದಿಂದ ವರದಿಯನ್ನು ೧೯೬೨ರಲ್ಲಿ ಡಾ|| ಸಿ. ಪಿ. ರಾಮಸ್ವಾಮಿಯವರು ಅದನ್ನು ಸರ್ಕಾರಕ್ಕೆ ಮುಂಡಿಸಿದರೂ ಕೂಡಾ ಇದುವರೆಗೆ ಅದನ್ನು ಕಾರ್ಯಗತ ಮಾಡುವ ಮನೋಭಾವ ಕೇಂದ್ರ ಸರ್ಕಾರಕ್ಕೆ ಬಂದಿಲ್ಲ ಎಂದರೆ, ಬಹುಶಃ ನಾನು ಹೀಗೆ ಹೇಳುತ್ತೇನೆಂದು ಯಾರೂ ತಪ್ಪು ಭಾವಿಸಬಾರದು, ಕಾಂಗ್ರೆಸ್ ಪಕ್ಷವೇ ಹಿಂದೂ ಸಂಸ್ಕೃತಿ, ಧರ್ಮ ಬೆಳೆಸುವುದಕ್ಕೆ ವಿರೋಧ ಆಗಿದೆ ಎನ್ನುವ ಭಾವನೆ ಜನಮನದಲ್ಲಿ ಮೂಡಿ ಬರುತ್ತಾ ಇದೆಯೆಂದು ಹೇಳುವುದಕ್ಕೆ......

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೆ, ಧರ್ಮದ ಮೇಲೆ, ಹಿಂದೂ ಸಂಸ್ಕೃತಿಯ ಮೇಲೆ, ಭಾರತ ದೇಶದ ಆಗುಹೋಗುಗಳ ಮೇಲೆ ಮಾನ್ಯ ಸದಸ್ಯರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಧರ್ಮ ಎಂದರೆ ಏನು ಎಂಬುದು ನನಗೆ ಗೊತ್ತಿರಲಿಲ್ಲ. ಸಂಸ್ಕೃತಿ ಎಂದರೆ ಗೊತ್ತಿಲ್ಲ. ಸಂಸ್ಕೃತಿ ಹಾಗೂ ಧರ್ಮ ಯಾರಿಗೆ ಅನ್ವಯಿಸುತ್ತದೆ ? ಅದು ನಿಮಗೋ, ನಮಗೋ ? ಸರ್ವೇಸಾಧಾರಣವಾಗಿ ಅದನ್ನು ಎಲ್ಲರೂ ಅನುಸರಿಸಬೇಕೇ ಬೇಡವೇ ? ಧರ್ಮದ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ? ಧರ್ಮ ಎನ್ನುವುದು ಬಹಳ ಒಳ್ಳೆಯ ಪದ. ಇದನ್ನು ಕೇಳಲು ಕಿವಿಗೆ ಬಹಳ ಇಂಪಾಗಿರುತ್ತದೆ. ಈ ಎರಡೂ ಕೂಡಾ ನಮಗೆ ಗೊತ್ತಿಲ್ಲ. ಮಾನ್ಯ ಗಂಗಾಧರನ್ ಅವರು ಬಹಳ ಚೆನ್ನಾಗಿ ಭಾಷಣ ಮಾಡುತ್ತಾರೆ. ಸಂಸ್ಕೃತ, ಅದು, ಇದು ಚೆನ್ನಾಗಿ ಓದಿದ್ದಾರೆ. ಕನ್ನಡವನ್ನು ಚೆನ್ನಾಗಿ ಓದಿದ್ದಾರೆ. ಅವರ ಭಾಷಣ ಕಿವಿಗೆ ಇಂಪು. ಆದ್ದರಿಂದ ಅವುಗಳ ಅರ್ಥವನ್ನು ನಮಗೆಲ್ಲರಿಗೂ ಅರ್ಥವಾಗುವಂತೆ ಹೇಳಲಿ. ಅವನ್ನು ನಾವೂ ಅನುಸರಿಸಬಹುದು.

ಶ್ರೀ ಎಚ್. ಗಂಗಾಧರನ್.—ಮಾನ್ಯ ಬಸವಲಿಂಗಪ್ಪನವರು ಹಿಂದೂ ಧರ್ಮದ ಅನುಯಾಯಿಗಳೆಂದೂ ಸುಸಂಸ್ಕೃತರೆಂದೂ ನಾನು ಮನಗೊಂಡಿದ್ದೇನೆ. ಧರ್ಮ, ಸಂಸ್ಕೃತಿ ಎಂದರೆ ಏನು ಎಂದು ಅವರು ಕೇಳಿದರು. ಅದು ಅವರು ಆಚರಣೆ ಮಾಡುವುದರಲ್ಲಿ ಇದೆ. ಹೆಣ್ಣು ಎನ್ನತಕ್ಕದ್ದು ಒಂದು ಜೀವ. ಹೆಣ್ಣನ್ನು ಪ್ರೀತಿಸಬೇಕಾದುದು ಮಾನವ ಧರ್ಮ. ಹೆಣ್ಣನಲ್ಲಿ ತಾಯಿ ಹೆಣ್ಣು, ತಂಗಿ ಹೆಣ್ಣು, ಅತ್ತೆ ಹೆಣ್ಣು, ಸೊಸೆ ಹೆಣ್ಣು, ಎಲ್ಲವೂ ಹೆಣ್ಣು. ಹೆಣ್ಣನ್ನು ನಾವು ಪ್ರೀತಿಸುತ್ತೇವೆ. ಯಾವ ಹೆಣ್ಣನ್ನು ಯಾವ ರೀತಿ ಪ್ರೀತಿಸುತ್ತೇವೆಯೋ. ಯಾವ ಹೆಣ್ಣಿನ ಜೊತೆ ಯಾವ ರೀತಿ ವರ್ತನೆ ಮಾಡುತ್ತೇವೆಯೋ ಅದು ಧರ್ಮ. ಅದು ಸಂಸ್ಕೃತಿ. ಇದನ್ನು ನಾವು ತಿಳಿದುಕೊಂಡಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು ಹೆಣ್ಣಿನ ಬಗ್ಗೆ ವ್ಯಾಖ್ಯಾನ ಮಾಡುತ್ತಿದ್ದಾರೆ. ಹೆಣ್ಣಿನ ಬಗ್ಗೆ ಅಕ್ಕಮಹಾದೇವಿಯವರು ''ಮೊಲೆ ಮೂಡಿ ಬಂದರೆ ಹೆಣ್ಣೆಂಬುವರಯ್ಯಾ, ಗಡ್ಡ ಮೀಸೆ ಬಂದರೆ ಗಂಡೆಂಬುವರಯ್ಯಾ'' ಎಂದು ಹೇಳಿದ್ದಾರೆ. ಈ ಬಗ್ಗೆ ತಾವು ಏನು ಹೇಳುತ್ತೀರಿ ?

ಶ್ರೀ ಎಚ್. ಗಂಗಾಧರನ್.—ನಮ್ಮ ಒಡಹುಟ್ಟಿದವರೊಡನೆ ನಾವು ಯಾವ ರೀತಿ ವರ್ತನೆ ಮಾಡುತ್ತೇವೆಯೋ, ಹೆಂಡತಿಯೊಡನೆ ಯಾವ ರೀತಿ ವರ್ತನೆ ಮಾಡುತ್ತೇವೆಯೋ, ಮಕ್ಕಳೊಡನೆ ಯಾವ ರೀತಿ ವರ್ತನೆ ಮಾಡುತ್ತೇವೆಯೋ ಅದರಲ್ಲಿ ಭಿನ್ನತೆ ಇದೆ. ಹೆಣ್ಣೆಲ್ಲಾ ಒಂದೇ ಆದರೂ ನಮ್ಮ

ಮನೋಭಾವ ಯಾರನ್ನು ಯಾವ ದೃಷ್ಟಿಯಲ್ಲಿ ನೋಡುತ್ತದೆ ಅದು ಧರ್ಮ ಅದು ಸಂಸ್ಕೃತಿ. ಅದನ್ನು ನಾವು ಜೀವನದಲ್ಲಿ ಅಳವಡಿಸಿಕೊಂಡು ಬಂದಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ನಿಮ್ಮ ಸಮಸ್ಯೆ ನನಗೆ ಅರ್ಥವಾಯಿತು. ಧರ್ಮ ಎಂದರೆ ಹೆಣ್ಣಿಗೆ ಬಹಳ ರೂಪವಿದೆಯೆಂದೂ, ಯಾವ ಯಾವ ರೂಪದಲ್ಲಿ ತಂದೆಯಾಗಿ, ಗಂಡನಾಗಿ, ತಮ್ಮನಾಗಿ ನೋಡುತ್ತೇವೆಯೋ ಅದು ಧರ್ಮ ಎಂದು ಹೇಳುತ್ತೀರಿ. ಅದು ನಿಜವಾಗಿಯೂ ಧರ್ಮ ಅಲ್ಲವೇ ಅಲ್ಲ. ಅರೆ ಓದು ನಿಮ್ಮದು. ಧರ್ಮ ಎಂದರೆ ''ಕರ್ತವ್ಯ'' ಎಂದು. ಕರ್ತವ್ಯವೆಂದರೆ ಏನು ? ಎಲ್ಲರಿಗೂ ಅನ್ವಯಿಸುವ ಕರ್ತವ್ಯ ಇದೇ. ಹಿಂದೂಗಳಿಗೆ ಧರ್ಮ ಎಂದರೆ ಎಲ್ಲಾ ಹಂತಗಳಲ್ಲೂ ಸರಿಸಮಾನವಾಗಿ ಅನ್ವಯವಾಗತಕ್ಕ ನಡತೆಯಿದೆಯಲ್ಲಾ, ಕರ್ತವ್ಯ ಇದೆಯಲ್ಲಾ, ಇದು ಧರ್ಮ. ನೀವು ತಿಳಿದುಕೊಂಡಿರುವುದು ಧರ್ಮ ಅಲ್ಲ. ಗುರುಗಳು, ಮಠಾಧಿಪತಿಗಳು ಉಪದೇಶ ಮಾಡುತ್ತಾರಲ್ಲಾ ಅದು ಧರ್ಮವಾಗುವುದಿಲ್ಲ. ಎಲ್ಲರಿಗೂ ಅನ್ವಯಿಸುವುದನ್ನು ಹೇಳಿ. ಭೇದಭಾವ ಇರಬಾರದು. ಒಂದು ಸರಿಯಾದ ನಡತೆ ಇರಬೇಕು. ಅಂತಹ ಧರ್ಮದ ಬಗ್ಗೆ ಮಾತನಾಡಿ. ಹೆಣ್ಣಿನ ವ್ಯಾಖ್ಯಾನ ಮಾಡಿ ಯಾವ ರೀತಿ ನೋಡಬೇಕೆನ್ನುವುದು ಧರ್ಮವಲ್ಲ.

ಶ್ರೀ ಎಚ್. ಗಂಗಾಧರನ್.—ನಾನು ಮಾಡಿದ ವ್ಯಾಖ್ಯಾನವನ್ನೇ ಅವರೂ ಮಾಡಿದರು. ಆಳವಾಗಿ ಒಳಗೆ ನೋಡುವ ಸಾಮರ್ಥ್ಯ ಬರಲಿಲ್ಲ. ನಾಮ ಹಾಕುವುದು, ವಿಭೂತಿ ಹಾಕುವುದು, ಜನಿವಾರ ಹಾಕುವುದು ಧರ್ಮವೆಂದು ಯಾವ ಶಾಸ್ತ್ರದಲ್ಲೂ ಹೇಳಿಲ್ಲ. ಹೆಣ್ಣಿನ ಜೊತೆ ಯಾವ ರೀತಿ ನಡೆದು ಕೊಳ್ಳಬೇಕೆಂದು ಹೇಳಿದ್ರಲ್ಲಾ ಅದನ್ನೇ ನಾನು ಹೇಳಿದ್ದು. ಹೆಣ್ಣು ಒಂದೇ ಆದರೂ ತಾಯಿ ಕೂಡಾ ನಾವು ಯಾವ ರೀತಿ ಪೂಜ್ಯ ಭಾವದಿಂದ ನಡೆದುಕೊಳ್ಳುತ್ತೇವಲ್ಲಾ ಅದು ಧರ್ಮ ಅಲ್ಲವೇ ? ಹೆಂಡತಿ ಜೊತೆ ಹೇಗೆ ನಡೆದುಕೊಳ್ಳುತ್ತೀರಾ ಅದು ಧರ್ಮ ಅದು ಕರ್ತವ್ಯ. ತಾಯಿಯನ್ನು ಸಾಕುವುದು ನಿಮ್ಮ ಕರ್ತವ್ಯ. ಸಾಕದೇ ಇದ್ದರೆ ನೀವು ಕೋರ್ಟಿಗೆ ಹೋಗಬೇಕಾಗುತ್ತದೆ

ಶ್ರೀ ಬಿ. ಬಸವಲಿಂಗಪ್ಪ.—ಕೋರ್ಟ್ ಎಂದರೆ ಏನು ?

ಶ್ರೀ ಎಚ್. ಗಂಗಾಧರನ್.—ತಾಯಿಗೆ ಮಾಡಬೇಕಾದ ಕರ್ತವ್ಯವನ್ನು ನೀವು ಮಾಡಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೆ, ಗಂಗಾಧರನ ಅವರು ಸುಸಂಸ್ಕೃತರು, ಬಹಳ ಪಾಂಡಿತ್ಯವನ್ನು ಹೊಂದಿದ್ದಾರೆ ಅವರು ಮಾತನಾಡುವಾಗ, ನೀತಿಗೂ, ಧರ್ಮಕ್ಕೂ, ಸಮಾಜದ ವ್ಯವಹಾರಕ್ಕೂ ಸಮಾಜದ ಕರ್ತವ್ಯಕ್ಕೂ, ಮಾನಸಿಕ ಕರ್ತವ್ಯಕ್ಕೂ. ಮತದ ಕರ್ತವ್ಯಕ್ಕೂ ಎಲ್ಲಾ ಒಂದೇ ಎಂದು ದಯಮಾಡಿ ಮಾತನಾಡುವುದಕ್ಕೆ ಹೋಗುವುದು ಬೇಡ. ನಾವು ನೋಡತಕ್ಕದ್ದರ ಬಗ್ಗೆ, ನಾವು ನಡೆಯುತಕ್ಕದ್ಧರ ಬಗ್ಗೆ ಅವರು ಹೇಳಿದರು. ನಾನು ಹೇಳುತ್ತಿದ್ದೇನೆ, ಈ ದೇಶಕ್ಕೆ ಸಂಸ್ಕೃತಿಯೇ ಇಲ್ಲ ಎಂದು.

ಧರ್ಮ ಇಲ್ಲ ಎನ್ನುವುದೇ ನನ್ನ ವಾದ. ಇವತ್ತು ಇಂಗ್ಲೆಂಡ್‌ಗೆ ಹೋಗಿ ಕ್ರೈಸ್ತಧರ್ಮ ಇದೆ. ಅದು ಅಲ್ಲಿ ಎಲ್ಲರಿಗೂ ಅನ್ವಯಿಸುತ್ತೆ. ಯಾರನ್ನೂ ಕೂಡ ತಾರತಮ್ಯ ಮನೋಭಾವನೆಯಿಂದ ನೋಡುವುದಿಲ್ಲ ಇಂಡಿಯಾ ದೇಶದಲ್ಲಿ ಯಾವ ಸಂಸ್ಕೃತಿ ಇದೆ ? ನಮಗೆ ಸಂಸ್ಕೃತಿ ಗೊತ್ತಿಲ್ಲ, ಬಡವರಿಗೆ ಯಾವ ಸಂಸ್ಕೃತಿ ಇದೆ, ಮಠಗಳಿಗೆ ಹೋಗುವಂತ ಸಂಸ್ಕೃತಿ ಇದೆಯೆ ? ಅವರಿಗೆ ನೀತಿ ಗೊತ್ತಿದೆಯೆ ? ತಾವು ಧರ್ಮ ಅಂತ ಹೇಳುತ್ತೀರಿ, ಧರ್ಮ ಎಂದರೆ ಏನು ? ಕರ್ತವ್ಯ. ಮಾನ್ಯ ಕಸಬೆಯವರು ಗುಡಿಗಳನ್ನೆಲ್ಲಾ ಉದ್ಧಾರ ಮಾಡುವುದಕ್ಕೆ ಹೊರಟ್ಟಿದ್ದಾರೆ. ಅವರನ್ನು ಕಂಡರೆ ನನಗೆ ಬಹಳ ಪ್ರೀತಿ. ಅವರು ತಂದಿರತಕ್ಕ ಬೇಡಿಕೆ ಮೇಲೆ ಮಾತನಾಡಿ, ಅವರು ಸಂಸ್ಕೃತ ಉದ್ಧಾರ ಮಾಡುವುದಕ್ಕೆ ಹೊರಟ್ಟಿದ್ದಾರೆ.

ಶ್ರೀ ಕೆ. ಪ್ರಭಾಕರ್.—ಮಾನ್ಯ ಅಧ್ಯಕ್ಷರೇ, ಮಿತ್ರರಾದಂತ ಗಂಗಾಧರನ್‌ರವರು ಮಾತನಾಡುವಾಗ ನಮ್ಮ ದೇಶದಲ್ಲಿ ಕಾಂಗ್ರೆಸ್ ಎನ್ನುವುದು ಯಾವಾಗ ಬಂತೋ ಆ ಲಾಗಾಯ್ತು ನಮ್ಮ ಧರ್ಮ ಮತ್ತು ಸಂಸ್ಕೃತಿಗಳ ಕಡೆಗೆ ನಿಗಾ ಕಡಿಮೆ ಮಾಡಿದ್ದರಿಂದ ಅವುಗಳು ಕ್ಷೀಣಿಸುತ್ತಿವೆ ಎಂದು ಹೇಳಿದರು. ಅವರು ಮಾತನಾಡುತ್ತಾ, ರಾಮ ಸ್ವಾಮಿ ರಿಪೋರ್ಟ್ ಪುಟ ೬–೭ನ್ನು ಇಲ್ಲಿ ಉಲ್ಲೇಖ ಮಾಡಿದರು. ವೈಯಕ್ತಿಕವಾಗಿ ಹೇಳುವುದಾದರೆ ಇದಕ್ಕೆ ನನ್ನ ವಿರೋಧ ಇದೆ. ಕಾಂಗ್ರೆಸ್ ಸಂಸ್ಥೆ ಈ ದೇಶಕ್ಕೆ ಸಚೇತನ ಕೊಟ್ಟು ದಾಸ್ಯವೃತ್ತಿಯಿಂದ ಈ ದೇಶವನ್ನು ಬಿಡುಗಡೆ ಮಾಡಿ, ರಾಷ್ಟ್ರೀಯ ಮಟ್ಟದಲ್ಲಿ

ಸಾಧನೆಯನ್ನು ಮಾಡತಕ್ಕ ಪ್ರಯತ್ನಕ್ಕೆ ಅಡಿಪಾಯ ಹಾಕಿತೋ ; ಆ ಪ್ರಯತ್ನಕ್ಕೆ ಅವಹೇಳನ ಮಾಡುತ್ತೆ ಎಂದು ನಾನು ನಂಬುತ್ತೇನೆ. ಅವರು ಪ್ರಮುಖವಾಗಿ ಗುಡಿ ಗೋಪುರಗಳನ್ನು ಉಳಿಸಲಿಲ್ಲವೆಂದು ಹೇಳಿದರು. ಕೇರಳದಲ್ಲಿ ಹಿಂದೂ ದೇವಾಲಯಗಳಲ್ಲಿ ಬ್ರಾಹ್ಮಣರಿಗೆ ಮಾತ್ರ ಪ್ರವೇಶವೆಂದು ಹೇಳಿ ದೂರ ಇಟ್ಟುಬಿಟ್ರು. ದ್ರಾವಿಡ ಮತ್ತು ಆರ್ಯ ಸಂಸ್ಕೃತಿಗಳನ್ನು ಕಾಂಗ್ರೆಸ್ ಸಂಸ್ಥೆ ಉಳಿಸಿಕೊಂಡು ಬಂದಿದೆ. ಮಹಾತ್ಮ ಗಾಂಧೀಜಿಯವರು The temple should become the centre of culture and education and then only we shall see the height of education. ಇಂಥ ಒಂದು ಮಾತನ್ನು ಹೇಳಿದರು ; ಇದರಿಂದ ಅವಹೇಳನವಾಗುತ್ತದೆಂದು ಅಂದುಕೊಂಡಿದ್ದೇನೆ. ಯಾವ ಅರ್ಥದಲ್ಲಿ ಹೇಳಿದ್ದಾರೆಂಬುದು ಇಲ್ಲಿ ಮುಖ್ಯ. ಸಮಾನತೆ ಕಡೆಗೆ ಹೋಗುತ್ತಿದ್ದೇವೆಂದು ನಾವು ತಿಳಿದುಕೊಂಡಿದ್ದೇವೆ. ಅವರು ಅಧೋಗತಿ ಕಡೆಗೆ ಹೋಗುತ್ತಿದ್ದಾರೆಂದು ಹೇಳುತ್ತಿದ್ದಾರೆ. ಯಾವ ಅರ್ಥದಲ್ಲಿ ಹೇಳಿದ್ದಾರೆ. ನಾವು ಧರ್ಮದ ಕಡೆಗೆ ಹೋಗುತ್ತಿದ್ದೇವೆ ಮೇಲುಕೋಟೆಯಲ್ಲಿ ಸಂಸ್ಕೃತ ಕಾಲೇಜು ಇದೆ. ಅಲ್ಲಿ ಎಲ್ಲ ಜಾತಿಯ ಮಕ್ಕಳು ವ್ಯಾಸಂಗ ಮಾಡುವುದಕ್ಕೆ ಅವಕಾಶ ಇರಬೇಕು. ಸೂರ್ಯನ ಬೆಳಕು ಸರ್ವ ವ್ಯಾಪ್ತಿಯಾಗಿರುವಂತೆ, ಕೋಟಿ ಸೂರ್ಯ ತೇಜಸ್ವಿ ಎಂದು ಹೇಳಬೇಕಾದರೂ ಅದರಲ್ಲಿ ಅರ್ಥವಿದೆ. ಪ್ರಭಾಕರ್ ಹೇಳುವುದು ಕುರುಡು ಸೂರ್ಯ ಎಂದು ಶೀರ್ಷಿಕೆಗೆ ಬರುವುದು ಒಂದು ರೀತಿಯಲ್ಲಿ ವಿರೋಧಾಭಾಸವಾಗುತ್ತದೆ. ನಾವು ಅದೋಗತಿಯ ಕಡೆಗೆ ಹೋಗುತ್ತಿಲ್ಲ. ಮಾನವನ ತೇಜಸ್ಸು ಬೆಳೆಯಬೇಕು. ಪ್ರಪಂಚದಲ್ಲಿ ಇದಕ್ಕೆ ಯಾವ ಮಾರ್ಗ ಇದೆ ಎನ್ನುವುದನ್ನು ಯೋಚನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಹೆಚ್. ಗಂಗಾಧರನ್.—ಮಾನ್ಯ ಅಧ್ಯಕ್ಷರೇ ಇಬ್ಬರೂ ಕೂಡ ಒಳ್ಳೆಯ ಪ್ರಶ್ನೆಯನ್ನು ಎತ್ತಿದ್ದಾರೆ.

ಶ್ರೀಮತಿ ಎಸ್. ಪ್ರಮೀಳಾ.—ತಾವು ಡಿಮ್ಯಾಂಡ್ ಮೇಲೆ ಮಾತನಾಡುತ್ತೀರೋ ; ಹೆಣ್ಣಿನ ಬಗ್ಗೆ ಮಾತನಾಡುತ್ತಿರೋ ?

"ಹೆಣ್ಣುಹೆಣ್ಣೆಂದಕ್ಕೆ ಬೀಳುಗಳೆವರು, ಕಣ್ಣು ಕಾಣದ ಗಾವಿಲರು" ಎಂದು ಹಿಂದೆಯೇ ಹೇಳಿದ್ದಾರೆ.

ಶ್ರೀ ಹೆಚ್. ಗಂಗಾಧರನ್.—ಸಮಾಜದಲ್ಲಿ ವ್ಯಕ್ತಿ ವ್ಯಕ್ತಿಗಳ ನಡುವೆ ನಡೆಯುವಂತ ಸಾಮರಸ್ಯವೇ ಧರ್ಮ. ಧರ್ಮದ ಬಗ್ಗೆ ವ್ಯಾಖ್ಯಾನ ಮಾಡಬೇಕಾದರೆ "ಅಂಟೋಲಾಜಿಕಲ್, ತಿಯೋಲಾಜಿಕಲ್ ಮತ್ತು ಎಪಿಸ್ಟಿಮೋಲಾಜಿಕಲ್ ಬಗ್ಗೆ ತಿಳಿದುಕೊಂಡಿರಬೇಕಾಗುತ್ತೆ. ವರ್ಣನೆ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಧರ್ಮದ ಬಗ್ಗೆ ಬಸವಣ್ಣನವರು ಸಾರಸ್ವತವನ್ನು ಅಭ್ಯಾಸ ಮಾಡಿ "ದಯವೇ ಧರ್ಮದ ಮೂಲವಯ್ಯಾ" ಎಂದು ಹೇಳಿದ್ದರು.

ಶ್ರೀ ಬಿ. ಬಸವಲಿಂಗಪ್ಪ.—ನಿಮಗೆ ದಯೆ ಇದೆಯೇ ?

ಶ್ರೀ ಹೆಚ್ ಗಂಗಾಧರನ್.—ನಮಗೆ ದಯೆ ಜಾಸ್ತಿ ಇದೆ. ೨೫ ವರ್ಷಗಳಿಂದ ಅಧಿಕಾರದಲ್ಲಿ ಕಣ್ಣುಮುಚ್ಚಿಕೊಂಡು ಕುಳಿತುಕೊಂಡು ಕರ್ನಾಟಕದ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲಿಲ್ಲ. ೧೨ನೇ ಶತಮಾನದಲ್ಲಿಯೇ ಮೇಲುಕೋಟೆಯಲ್ಲಿ ಹರಿಜನರು ಅಯ್ಯಂಗಾರರು ಜೊತೆಯಲ್ಲಿ ಪೂಜೆ ಮಾಡುತ್ತಿದ್ದರು. ವಾರಣಾಸಿಯಲ್ಲಿ ಛತ್ರಗಳನ್ನು ಕಟ್ಟಿಸಿದ್ದಾರೆ ; ಅಲ್ಲಿ ಇವತ್ತಿಗೂ ಕೂಡ ಹರಿಜನರು ಗಂಗಾ ನದಿಯಲ್ಲಿ ಸ್ನಾನ ಮಾಡಿಕೊಂಡು, ಕಮಂಡಲದಲ್ಲಿ ಗಂಗಾಜಲವನ್ನು ತೆಗೆದುಕೊಂಡು ಲಿಂಗಕ್ಕೆ ಪೂಜೆ ಮಾಡುವಂತ ಪದ್ಧತಿ ಶತ ಶತಮಾನಗಳಿಂದಲೂ ನಡೆದುಕೊಂಡು ಬರುತ್ತಿದೆ.

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ, ನಾನು ಹರಿಜನರ ವಿಚಾರ ಮಾತನಾಡಿದ್ದೆನೆ? ಲಿಂಗದ ಬಗೆ ಮಾತನಾಡಿದ್ದೆನೆ? ಬಸವಣ್ಣನವರ ಬಗ್ಗೆ ಮಾತನಾಡಿದೆನೆ ? ಧರ್ಮದ ಮೇಲೆ ಮಾತನಾಡಿದ್ದೇನೆ ನಿಮ್ಮ ಬಿ.ಜೆ.ಪಿ. ರಥವನ್ನು ತಮಿಳುನಾಡಿದಲ್ಲಿ ಹೊಡೆದು ಓಡಿಸಿದ್ದಾರೆ. ಜನಗಳಿಗೆ ಮಂಕುಬೂದಿಯನ್ನು ಎರಚುವುದಕ್ಕಾಗುವುದಿಲ್ಲ. ನೀವು ಹರಿಜನರೇ, ನಾವು ಹರಿಜನರೇ ಇಬ್ಬರೂ ಹರಿಜನರೇ, ಹರಿಜನರು ಅಂದರೇನು ಶಿವನ ಪೂಜೆ ಮಾಡುವ ಜನ. ಪ್ರಭಾಕರ್‌ರವರು ಇದ್ದಾರೆ, ಅವರು ಹರಿಜನರೇ ? ನೀವು

ಮಂಕುಬೂದಿ ಹಾಕಿಬಿಟ್ಟು ಜನಗಳಿಗೆ ಮೋಸ ಮಾಡುವುದಕ್ಕಾಗುವುದಿಲ್ಲ. ಧರ್ಮ ಅಂದರೆ, ನಿಮ್ಮ ನಡೆ ನುಡಿಯಲ್ಲಿ ಒಂದೇ ರೀತಿಯಾಗಿರಬೇಕು : ಸಾಮರಸ್ಯವಾಗಿರಬೇಕು, ಪರಿಗಣನೆ ಇರಬೇಕು. ಧರ್ಮದ ಮೇಲೆ ಮಾತನಾಡಬೇಡಿ ಎಚ್ಚರಿಕೆ.

ಶ್ರೀ ಹೆಚ್. ಗಂಗಾಧರನ್. –ಒಳ್ಳೆಯದು ಸ್ವಾಗತಿಸುತ್ತೇನೆ.

MR. DEPUTY SPEAKER.—The House now stands adjourned to meet again tomorrow at 1-00 p.m.

The House adjourned at Fifty eight Minutes past Six of the Clock to meet again at One of the Clock, on Wednesday, the 16th June 1982,

WD 6120